ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ


ಸಂಪುಟ 11 | ಸಂಚಿಕೆ 13 | ಪುಟ 16 | ಮಾರ್ಚ್ 20-26, 2017 | ರೂ. 10/-

web: www.janashakthi.co.in | e-mail : js_weekly@yahoo.com

ಯೋಗೇಶ್ ಮಾಸ್ಟರ್ ಮೇಲೆ ಮಸಿ ದಾಳಿ







ಯು.ಪಿ. ಚುನಾವಣಾ ವಿಶ್ಲೇಷಣೆ

ಕಾರಟ್ ಯೆಚೂರಿ

ಜನವಿರೋಧಿ ಅಭಿವೃದ್ಧಿ ವಿರೋಧಿ ಚುನಾವಣಾ ಗಿಮಿಕ್

ಬಜೆಟ್

ಮಹಿಳಾ ಕೃಷಿಕೂಲಿಕಾರ



ಯಶಸ್ವಿ 2ನೇ ರಾಜ್ಯ ಸಮಾವೇಶ

ಮಾಧ್ಯಮ ದೊರೆಯ 'ಸೆನ್ಸಾರ್'





ಮಹಿಳೆ ಮತ್ತು ಸಮಾಜವಾದಿ ಕ್ರಾಂತಿ

ಐದು ವಿಧಾನಸಭಾ ಚುನಾವಣೆಗಳ ಫಲಿತಾಂಶಗಳ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯುರೊ

ಉತ್ತರಪ್ರದೇಶದಲ್ಲಿ ಬಿಜೆಪಿಗೆ ಭಾರೀ ವಿಜಯ, ಆದರೆ ಅದು ದೇಶಕ್ಕೆ ಅಪಾಯಕಾರಿಯಾಗಬಹುದು

ಬಿಜೆಪಿ ಉತ್ತರ ಪ್ರದೇಶದಲ್ಲಿ ವಿಧಾನ ಸಭೆಯಲ್ಲಿ ಮುಕ್ಕಾಲು ಪಾಲಿಗಿಂತ ಹೆಚ್ಚು ಸ್ಥಾನಗಳನ್ನು ಪಡೆದು ಭಾರೀ ವಿಜಯ ಗಳಿಸಿದೆ. ಈ ವಿಜಯವನ್ನು ಪಕ್ಕಾ ಕೋಮುವಾದಿ ಪ್ರಚಾರ ಮತ್ತು ವ್ಯಾಪಕವಾದ ಜಾತಿ ಮೈತ್ರಿಗಳ ಒಂದು ಮಿಶ್ರಣದ ಮೂಲಕ ಸಾಧಿಸಲಾಗಿದೆ. ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ಲೋಕಸಭಾ ಚುನಾವಣೆಗಳಲ್ಲಿ ಮೇಲಕ್ಕೊಯ್ಯದ್ದು ಈ ಮಿಶ್ರಣವೇ, ಆ ನಡೆಯನ್ನು ಉಳಿಸಿಕೊಳ್ಳಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಬಿಜೆಪಿಗೆ ಬೃಹತ್ ಜನಾದೇಶ ದೊರೆತಿದೆ ಎಂದು ಒಪ್ಪಿಕೊಳ್ಳುತ್ತಲೇ, ಸಿಪಿಐ(ಎಂ), ಇದು ದೇಶಕ್ಕೆ ಅಪಾಯಕಾರಿ ಪರಿಣಾಮಗಳನ್ನು ಉಂಟು ಮಾಡಬಹುದು ಎಂದೂ ಹೇಳಿದೆ. ಏಕೆಂದರೆ ಇದು ಛಿದ್ರಕಾರಿಯಾದ ಮತ್ತು ದೇಶಕ್ಕೆ ಹಾನಿಕಾರಕವಾದ ಹಿಂದುತ್ವ ರಾಜಕಾರಣದ ಬಾಂಡಿಗೆ ಪ್ರೋತ್ಸಾಹ ನೀಡುತ್ತದೆ ಎಂದು ಅದು ಹೇಳಿದೆ.

ಉತ್ತರಾಖಂಡದಲ್ಲಿ ಬಿಜೆಪಿ ಒಂದು ದೊಡ್ಡ ವಿಜಯದೊಂದಿಗೆ ಯಶಸ್ಸು ದಾಖಲಿಸಿದೆ, ಮತ್ತು ಕಾಂಗ್ರೆಸ್ ಪಕ್ಷವನ್ನು ಸರಕಾರದಿಂದ ಹೊರಹಾಕಿದೆ. ಆದರೆ ಪಂಜಾಬಿನಲ್ಲಿ ಅಕಾಲಿ-ಬಿಜೆಪಿ ಮೈತ್ರಿಕೂಟ ಒಂದು ದೊಡ್ಡ ಹಿನ್ನಡೆಯನ್ನು ಅನುಭವಿಸಿದೆ, ಕಾಂಗ್ರೆಸ್ ಸ್ಪಷ್ಟ ಬಹುಮತ ಗಳಿಸಿದೆ.

ಗೋವಾ ವಿಧಾನಸಭೆಯಲ್ಲಿ ಬಹುಮತ ಪಡೆಯುವಲ್ಲಿ ಬಿಜೆಪಿ ವಿಫಲವಾಗಿದ್ದರೆ, ಮಣಿಪುರದಲ್ಲಿ ಕಾಂಗ್ರೆಸ್ ತನ್ನ ಪ್ರಭಾವೀ ಸ್ಥಾನಮಾನವನ್ನು ಕಳಕೊಂಡಿರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇನ್ನೊಬ್ಬ ದಲಿತ ಸಂಶೋಧನಾ ವಿದ್ಯಾರ್ಥಿ ಸಾವು- ಈ ಬಾರಿ ಜೆಎನ್‌ಯು ನಲ್ಲಿ

ದಿಲ್ಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಇತಿಹಾಸ ಅಧ್ಯಯನಗಳ ಕೇಂದ್ರದಲ್ಲಿ ಮೊದಲ ವರ್ಷದ ಎಂ.ಫಿಲ್ ವಿದ್ಯಾರ್ಥಿಯಾಗಿದ್ದ ಮುತ್ತುಕೃಷ್ಣನ್ ಜೀವನಂತಂ ಮಾರ್ಚ್ 13ರಂದು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ಬಂದಿದೆ. ಪೋಲೀಸರ ಪ್ರಕಾರ 'ವೈಯಕ್ತಿಕ ಕಾರಣ'ಗಳಿಂದಾಗಿ ಇದು ಸಂಭವಿಸಿರಬಹುದು. ಆತನ ಫೇಸ್‌ಬುಕ್ ಬರಹಗಳನ್ನು ನೋಡಿದರೆ ಈ 'ವೈಯಕ್ತಿಕ' ಕಾರಣಗಳು ಆತ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತ ವಿಭಾಗವೊಂದರಿಂದ ಬಂದ ವಾಸ್ತವತೆಯೊಡನೆ ತಳುಕು ಹಾಕಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ.



ಜಾತಿ ಮತ್ತು ಬಂಡವಾಳ ವಿದ್ಯಾರ್ಥಿಗಳನ್ನು ಕೊಲ್ಲುತ್ತಿವೆ, ಯುವ ಜೀವಗಳನ್ನು ಪರಕೀಯ ಭಾವದತ್ತ ತಳ್ಳುತ್ತಿವೆ-ಎಸ್‌ಎಫ್‌ಐ

ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ಈ ದಲಿತ ಸಂಶೋಧನಾ ವಿದ್ಯಾರ್ಥಿ ಇದ್ದಕ್ಕಿದ್ದಂತೆ ಸಾವಪ್ಪಿರುವ ಬಗ್ಗೆ ಅತೀವ ದುಃಖ ವ್ಯಕ್ತಪಡಿಸುತ್ತ ಈತ ಜೆಎನ್‌ಯುಗೆ ಬರುವ ಮೊದಲು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ(ಹೆಚ್‌ಸಿಯು)ದಲ್ಲಿ ವಿದ್ಯಾರ್ಥಿಯಾಗಿದ್ದು 'ರೋಹಿತ್‌ಗೆ ನ್ಯಾಯ' ಆಂದೋಲನದಲ್ಲಿ ಸಕ್ರಿಯರಾಗಿದ್ದವರು ಎಂದು ನೆನಪಿಸಿಕೊಂಡಿದೆ.

ತನ್ನ ಗೆಳೆಯರ ನಡುವೆ ಮತ್ತು ಫೇಸ್‌ಬುಕ್‌ನಲ್ಲಿ 'ರಜನಿ ಕೃಷ್' ಎಂದು ಪರಿಚಿತನಾಗಿದ್ದ ಮುತ್ತುಕೃಷ್ಣನ್ ತಮಿಳುನಾಡಿನ ಸೇಲಂ ಜಿಲ್ಲೆಯ ಒಂದು ಕಾರ್ಮಿಕ ಕುಟುಂಬಕ್ಕೆ ಸೇರಿದವರು. ಸತತ ಶ್ರಮದ ನಂತರ ಆತ ಜೆಎನ್‌ಯುಗೆ ಪ್ರವೇಶ ಪಡೆದಿದ್ದರು. ಅದ-ಕ್ಕೆ ಮೊದಲು ತನ್ನ ಆ ಕನಸನ್ನು ನನಸಾಗಿಸಲು ಅಲ್ಲಿ-ಇಲ್ಲಿ ಕೆಲಸ ಮಾಡಿಕೊಂಡು ಬಹಳ ಶ್ರಮಪಡಬೇಕಾಯಿತು.

ಬಹಳ ಖೇದಕರವಾದ ಮುತ್ತುಕೃಷ್ಣನ್ ಸಾವು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತವಾಗಿರುವ ವಿಭಾಗಗಳಿಂದ ಬಂದ ವಿದ್ಯಾರ್ಥಿಗಳು ತಮ್ಮ ಸಮುದಾಯಗಳ ಹಕ್ಕನ್ನು ಎತ್ತಿ ಹಿಡಿಯುವಾಗ ಜಾತಿವಾದಿ ಶಕ್ತಿಗಳಿಂದ ತಿರುಗೇಟು ಎದುರಿಸಬೇಕಾದ ದಾರುಣ ಸ್ಥಿತಿಯಿರುವುದನ್ನು ಮತ್ತೊಮ್ಮೆ ಮುಂಚೂಣಿಗೆ ತಂದಿದೆ ಎಂದು ಎಸ್‌ಎಫ್‌ಐ ಹೇಳಿದೆ.

ಎಷ್ಟು ದಲಿತ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಸರಕಾರದ ಬಳಿಯಿಲ್ಲ. ಆದರೆ ದಲಿತ ಗುಂಪುಗಳು ಕಲೆ ಹಾಕಿರುವ ಮಾಹಿತಿಗಳ ಪ್ರಕಾರ 2007ರಿಂದ 2011ರ ನಡುವೆಯೇ 18 ದಲಿತ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ)ಯ ಮಾಹಿತಿಗಳ ಪ್ರಕಾರ 2014ರಲ್ಲಿ ಪ್ರತಿದಿನ 20ಕ್ಕೂ ಹೆಚ್ಚು ವಿದ್ಯಾರ್ಥಿಗಳಂತೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಲ್ಲಿ ಹೆಚ್ಚಿನವರು ಕೆಳ ಆದಾಯ ವರ್ಗಗಳಿಗೆ ಸೇರಿದವರು. ಜಾತಿ ಮತ್ತು ಬಂಡವಾಳ ವಿದ್ಯಾರ್ಥಿಗಳನ್ನು ಕೊಲ್ಲುತ್ತಿವೆ, ಯುವ ಜೀವಗಳನ್ನು ಎಂತಹ ಪರಕೀಯ ಭಾವದತ್ತ ತಳ್ಳುತ್ತಿವೆಯೆಂದರೆ ಬದುಕು ಅರ್ಥ ಕಳಕೊಳ್ಳುತ್ತದೆ ಎಂದು ಎಸ್‌ಎಫ್‌ಐ ಈ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿದೆ.

ಮುತ್ತುಕೃಷ್ಣನ್ ಸಾವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತಗೊಂಡಿರುವ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಎಂತಹ ವ್ಯವಸ್ಥಿತ ಪರಕೀಯ ಭಾವವನ್ನು ಎದುರಿಸಬೇಕಾಗಿದೆ ಎಂಬುದನ್ನು ಮತ್ತೊಮ್ಮೆ ನೆನಪಿಸಿದೆ ಎಂದಿರುವ ಎಸ್‌ಎಫ್‌ಐ ಈ ದಿಸೆಯಲ್ಲಿ ಸರಕಾರದ ಇನ್ನೊಂದು ಪ್ರಹಾರದತ್ತ ಗಮನ ಸೆಳೆದಿದೆ. ಯುಜಿಸಿಯ ಪ್ರತಿಗಾಮಿ ಅಧಿಸೂಚನೆಯ ಸ್ವರೂಪದಲ್ಲಿ ಬಂದಿರುವ ಈ ಪ್ರಹಾರ ಮತ್ತು ವಿವಿ ಆಡಳಿತಗಳ ಸಂವೇದನಾಶೂನ್ಯತೆ ಅಹಿತಕರ ಮತ್ತು ಆತಂಕದ ವಾತಾವರಣವನ್ನು ಸೃಷ್ಟಿಸುತ್ತಿವೆ. ಜಾತಿ ಆಧಾರಿತ ಪಕ್ಷಪಾತ ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿಯೇ 'ರೋಹಿತ್ ಕಾಯ್ದೆ' ತರಬೇಕೆಂಬ ಬೇಡಿಕೆ ಎದ್ದಿರುವುದು. ಕೇಂದ್ರದಲ್ಲಿನ ಬಿಜೆಪಿ ಸರಕಾರ ಇದುವರೆಗೂ ಈ ಮಹತ್ವದ ಬೇಡಿಕೆಯನ್ನು ಉಪೇಕ್ಷಿಸುತ್ತ ಬಂದಿದೆ.

ಮುತ್ತುಕೃಷ್ಣನ್ ಸಾವಿನ ಕಾರಣಗಳನ್ನು ತಿಳಿಯಲು ಒಂದು ಸರಿಯಾದ ತನಿಖೆ ನಡೆಸಬೇಕು ಎಂದು ಆಗ್ರಹಿಸುತ್ತ ಆತನ ಕುಟುಂಬದವರಿಗೆ ಮತ್ತು ಗೆಳೆಯರಿಗೆ ತನ್ನ ಆಳವಾದ ಶೋಕವನ್ನು ವ್ಯಕ್ತಪಡಿಸುತ್ತ ಎಸ್‌ಎಫ್‌ಐ 'ರೋಹಿತ್ ಕಾಯ್ದೆ'ಗೆ ಚಳುವಳಿಯನ್ನು ತೀವ್ರಗೊಳಿಸುವ ತನ್ನ ದೃಢ ನಿರ್ಧಾರವನ್ನು ಪುನರುಚ್ಚರಿಸಿದೆ.

"ಮುತ್ತು, ನಿನ್ನ ಹೋರಾಟ ಮತ್ತು ಕನಸು ವ್ಯರ್ಥವಾಗುವುದಿಲ್ಲ" ಎಂದಿರುವ ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಹೇಳಿಕೆ ಜಾತಿ ಮತ್ತು ಬಂಡವಾಳದ ವ್ಯವಸ್ಥೆಯನ್ನು ಬುಡಮೇಲು ಮಾಡುವ ಚಳುವಳಿಗೆ ಮುತ್ತುಕೃಷ್ಣನ್ ಮತ್ತು ಆತನಂತಹ ಇತರ ಹಲವಾರು ಮಂದಿಯ ಧೀರ ಬದುಕು ತೋರುದೀಪಗಳು ಎಂದು ಹೇಳಿದೆ.

ಉನ್ನತ ಶಿಕ್ಷಣದಲ್ಲಿ ಜಾತಿ ನೆಲೆಯ ಪಕ್ಷಪಾತವನ್ನು ಕೊನೆಗೊಳಿಸಬೇಕು
-ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿ ಆಗ್ರಹ

ಅಧ್ಯಯನದ ಕನಸು ಹೊತ್ತು ಸೇಲಂನಿಂದ ದಿಲ್ಲಿಗೆ ಹೋಗಿದ್ದ ಮುತ್ತುಕೃಷ್ಣನ್ ಸಾವಿನ ಸುದ್ದಿ ಆಘಾತ ಉಂಟು ಮಾಡಿದೆ ಎಂದು ಸಿಪಿಐ(ಎಂ) ತಮಿಳುನಾಡು ಕಾರ್ಯದರ್ಶಿ ಜಿ.ರಾಮಕೃಷ್ಣನ್ ಹೇಳಿದ್ದಾರೆ. ಮುತ್ತುಕೃಷ್ಣನ್ ಶಿಕ್ಷಣದ ಬಗ್ಗೆ ಮತ್ತು ಬರವಣಿಗೆ ಬಗ್ಗೆ ತೀವ್ರ ಆಸಕ್ತಿ ಹೊಂದಿದ್ದ ವಿದ್ಯಾರ್ಥಿಯಾಗಿದ್ದರು, ದಲಿತರ ಸಬಲೀಕರಣಕ್ಕಾಗಿ ರಾಜಕೀಯವಾಗಿ ಸಕ್ರಿಯನಾಗಿದ್ದರು ಎಂದು ಅವರು ನೆನಪಿಸಿಕೊಂಡಿದ್ದಾರೆ.

ಮುತ್ತುಕೃಷ್ಣನ್ ತನ್ನ ವಿಚಾರಗಳನ್ನು ಬ್ಲಾಗ್‌ನಲ್ಲಿ ಮತ್ತು ಫೇಸ್‌ಬುಕ್‌ನಲ್ಲಿ ನಿಯತವಾಗಿ ವ್ಯಕ್ತಗೊಳಿಸುತ್ತಿದ್ದರು, ತನ್ನ ಕೊನೆಯ ಬರಹದಲ್ಲಿ ಉನ್ನತ ಶಿಕ್ಷಣದಲ್ಲಿ ಸಮಾನತೆಯ ನಿರಾಕರಣೆಯ ಬಗ್ಗೆ ಬರೆದಿದ್ದರು ಎಂಬ ಸುದ್ದಿಯತ್ತ ರಾಮಕೃಷ್ಣನ್ ಗಮನ ಸೆಳೆದಿದ್ದಾರೆ.ಉನ್ನತ ಶಿಕ್ಷಣದಲ್ಲಿ ದಲಿತ ಮತ್ತು ಆದಿವಾಸಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ಆದರೆ ಆತ್ಮಹತ್ಯೆಯ ಪ್ರಮಾಣ ಬಹಳ ಹೆಚ್ಚು. ಇದು ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ ಪಕ್ಷಪಾತದ ಬಗ್ಗೆ ಆತಂಕ ಉಂಟು ಮಾಡುತ್ತದೆ.

ಹೈದರಾಬಾದ್ ವಿವಿಯ ವಿದ್ಯಾರ್ಥಿ

ಪುಟ 14 ನೋಡಿ

13 ಲಕ್ಷ ಕೇಂದ್ರ ಸರಕಾರಿ ನೌಕರರ ಬೃಹತ್ ಮುಷ್ಕರ

ದೇಶಾದ್ಯಂತ 13 ಲಕ್ಷ ಕೇಂದ್ರ ಸರಕಾರೀ ನೌಕರರು ಮಾರ್ಚ್16 ರಂದು ಒಂದು ದಿನದ ಮುಷ್ಕರ ನಡೆಸಿದ್ದಾರೆ. ಎಂಟು ತಿಂಗಳ ಹಿಂದೆ ಕೇಂದ್ರ ಸರಕಾರ ನೀಡಿದ ಆಶ್ವಾಸನೆಗಳನ್ನು ಇನ್ನೂ ಜಾರಿಗೆ ತರದಿರುವುದು, ದೊಡ್ಡಪ್ರಮಾಣದಲ್ಲಿ ಸರಕಾರೀ ಇಲಾಖೆಗಳ ನಿಯಮಿತ ಕೆಲಸಗಳನ್ನು ಗುತ್ತಿಗೆ ಕೊಡುತ್ತಿರುವುದು ಮತ್ತು ಕಾಂಟ್ರಾಕ್ಟ್ ನೌಕರರನ್ನು ಖಾಯಂ ಸ್ವರೂಪದ ಕೆಲಸಗಳಲ್ಲಿ ನಿಯಮಿತಗೊಳಿಸದಿರುವುದರ ವಿರುದ್ಧ ಈ ಮುಷ್ಕರ ನಡೆದಿದೆ.

7ನೇ ವೇತನ ಆಯೋಗದ ಜಾರಿಗೆ ಸಂಬಂಧಿಸಿದಂತೆ ಕನಿಷ್ಠ ಕೂಲಿ, ಭತ್ಯೆಗಳು ಕುರಿತಾದ ಬೇಡಿಕೆಗಳನ್ನು 4 ತಿಂಗಳಲ್ಲಿ ಇತ್ಯರ್ಥಗೊಳಿಸುವುದಾಗಿ ಹಣಕಾಸು ಮಂತ್ರಿಗಳು, ಗೃಹಮಂತ್ರಿಗಳು ಮುಂತಾದವರಿದ್ದ ಮಂತ್ರಿಗಳ ಗುಂಪು ಭರವಸೆ ನೀಡಿತ್ತು. ಆದರೆ ಅದನ್ನು ಈಡೇರಿಸುವುದರ ಬದಲು ನೌಕರರಿಗೆ ಸೇವಾ ಮುರಿತ, ಡೈಸ್-ನಾನ್ ಇತ್ಯಾದಿ ಬೆದರಿಕೆಗಳನ್ನು ಒಡ್ಡಲಾಗುತ್ತಿದೆ. ಇವುಗಳಿಗೆ ಬೆದರದೆ ನೌಕರರು ಮುಷ್ಕರ ನಡೆಸಿದ್ದಾರೆ ಎಂದು ಸಿಐಟಿಯು ಇವರನ್ನು ಅಭಿನಂದಿಸಿದೆ.

"ಸಮಾನತೆಯ ನಿರಾಕರಣೆ ಎಂದರೆ ಎಲ್ಲದರಲ್ಲಿಯೂ ನಿರಾಕರಣೆ

"ಎಂಫಿಲ್/ಪಿಹೆಚ್‌ಡಿ ಪ್ರವೇಶದಲ್ಲಿ ಸಮಾನತೆಯಿಲ್ಲ. ವೈವಾ-ವೋಸಿ(ಮೌಖಿಕ ಪರೀಕ್ಷೆ-ಅನು)ಯಲ್ಲಿ ಸಮಾನತೆಯಿಲ್ಲ. ಸಮಾನತೆಯ ನಿರಾಕರಣೆ ಮಾತ್ರ ಇದೆ, ಪ್ರೊ. ಸುಖದೇವ್ ಥೋರಟ್ ಶಿಫಾರಸು ನಿರಾಕರಿಸಲಾಗಿದೆ, ಆಡಳಿತ ಕಟ್ಟಡದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ನಿರಾಕರಿಸಲಾಗಿದೆ, ಅಂಚಿಗೆ ತಳ್ಳಲ್ಪಟ್ಟವರವರಿಗೆ ಶಿಕ್ಷಣ ನಿರಾಕರಿಸಲಾಗಿದೆ. ಸಮಾನತೆಯನ್ನು ನಿರಾಕರಿಸಿದಾಗ ಎಲ್ಲವನ್ನೂ ನಿರಾಕರಿಸಲಾಗುತ್ತದೆ."

ಇದು ರಜನಿ ಕೃಷ್ ಎಂಬ ಹೆಸರಿನಲ್ಲಿರುವ ತನ್ನ ಫೇಸ್‌ಬುಕ್‌ನಲ್ಲಿ ಮಾರ್ಚ್10ರ, ಅಂದರೆ ಸಾವಿನ 3ದಿನಗಳ ಹಿಂದಿನ ಮುತ್ತುಕೃಷ್ಣನ್ ಒಕ್ಕಣಿಕೆ. ಇಲ್ಲಿ ಆತ ಮೇ 2016ರಲ್ಲಿ ಎಂಫಿಲ್ ಮತ್ತು ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ಪ್ರವೇಶ ನಿಯಮಾವಳಿಗಳಲ್ಲಿ ಯುಜಿಸಿ ಮಾಡಿದ ಬದಲಾವಣೆಗಳಿಗೆ ಜೆಎನ್‌ಯುನಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ನಡೆಸಿದ ಪ್ರತಿಭಟನೆಗಳ ಬಗ್ಗೆ ಪ್ರಸ್ತಾಪಿಸಿದ್ದರು. ಈ ಬದಲಾವಣೆಗಳು ವಿಶೇಷವಾಗಿ ಮೀಸಲಾತಿಯಿಂದ ಬಂದ ವಿದ್ಯಾರ್ಥಿಗಳ ವಿರುದ್ಧ ಪಕ್ಷಪಾತದಿಂದ ಕೂಡಿವೆ.

2012ರಲ್ಲಿ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಇತಿಹಾಸದಲ್ಲಿ ಎಂ.ಎ. ಕೋರ್ಸ್‌ಗೆ ಸೇರಿದ ಮುತ್ತುಕೃಷ್ಣನ್ ನಂತರ ಅಲ್ಲೇ ಎಂಫಿಲ್‌ಗೆ ಸೇರಿದರು. ಈ ನಡುವೆ ಜೆಎನ್‌ಯು ಸೇರುವ ಮಹದಾಸೆಯಿಂದ ನಡೆಸಿದ ಪ್ರಯತ್ನಗಳಲ್ಲಿ ನಾಲ್ಕನೇ ಬಾರಿ ಯಶಸ್ಸು ಪಡೆದ ನಂತರ ಹೈದರಾಬಾದ್ ಬಿಟ್ಟು ಕಳೆದ ವರ್ಷ (2016)ದಿಲ್ಲಿಗೆ ಬಂದಿದ್ದರು.

ಈತ ತನ್ನ ಬಹಳಷ್ಟು ಕಾಲವನ್ನು ವಿವಿಯ ಗ್ರಂಥಾಲಯದಲ್ಲೇ ಕಳೆಯುತ್ತಿದ್ದರು, ಆಳವಾದ ಅಧ್ಯಯನದಲ್ಲಿ ತೊಡಗಿದ್ದ ವಿದ್ಯಾರ್ಥಿ ಎಂದು ಅವರ ಸಹಪಾಠಿಗಳು ಹೇಳಿರುವುದಾಗಿ ವರದಿಯಾಗಿದೆ.

ಜನ ಹಾಗೂ ಅಭಿವೃದ್ಧಿ-ವಿರೋಧಿ, ಕಾರ್ಪೋರೇಟ್-ಪರ ಚುನಾವಣಾ ಗಿಮಿಕ್ ಬಜೆಟ್ : ಸಿಪಿಐ(ಎಂ)

ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನ ಸಭೆಯಲ್ಲಿ ಮಂಡಿಸಿದ 2017-18ರ ಸಾಲಿನ ರಾಜ್ಯ ಬಜೆಟ್ ಜನವಿರೋಧಿ ಹಾಗೂ ರಾಜ್ಯದ ಅಭಿವೃದ್ಧಿ ವಿರೋಧಿ, ಕಾರ್ಪೋರೇಟ್ ಪರ ಮತ್ತು ಚುನಾವಣಾ ಗಿಮಿಕ್ ಆಲ್ಲದೆ ಜನತೆಯ ಮೇಲೆ ವ್ಯಾಪಕವಾದ, ಅಕಾರಣವಾದ ಸಾಲದ ಹೊರೆಯನ್ನು ಹೇರಿದ ಬಜೆಟ್ ಎಂದು ಸಿಪಿಐ(ಎಂ) ಕನಾಟಕ ರಾಜ್ಯ ಸಮಿತಿ ಖಂಡಿಸಿದೆ. ಕೂಡಲೇ ಅದಕ್ಕೆ ಜನಪರವಾಗಿ ಮತ್ತು ಅಭಿವೃದ್ಧಿ ಪರವಾದ ದಿಶೆಯನ್ನು ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಸರಕಾರವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಕರ್ನಾಟಕ ರಾಜ್ಯ ತೀವ್ರ ಬರಗಾಲದಲ್ಲಿ ಬಳಲುತ್ತಿದೆ ಅದೇ ರೀತಿ, ಗ್ರಾಮೀಣ ಪ್ರದೇಶ ತೀವ್ರ ಕೃಷಿ ಬಿಕ್ಕಟ್ಟಿನಲ್ಲಿದೆ. ಇದರಿಂದಾಗಿ, ರಾಜ್ಯದ ಒಟ್ಟು ಬೆಳವಣಿಗೆಯ ದರ ಕಳೆದ ವರ್ಷಕ್ಕೆ ಹೋಲಿಸಿದರೂ, ಶೇ 0.5 ರಷ್ಟು ಕುಸಿತಗೊಂಡಿದೆ. ರೈತರು, ಕೂಲಿಕಾರರು, ಕಸುಬುದಾರರು, ಮಹಿಳೆಯರು ಬರಗಾಲ ಮತ್ತು ಬಿಕ್ಕಟ್ಟಿನಿಂದಾಗಿ, ಸಾಲ ನೀಡಿದ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ತೀವ್ರ ದೌರ್ಜನ್ಯಕ್ಕೆ ಮತ್ತು ಇದ್ದ ಬದ್ದ ಆಸ್ತಿಗಳ ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಕಳೆದ ಒಂದೂವರೆ ತಿಂಗಳಲ್ಲಿ 125ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುಮಾರು 8 ದಲಿತರು ಕೊಲೆಗೀಡಾಗಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಿವೆ.

ಇಂತಹ ಸಂದರ್ಭದಲ್ಲಿ ಬರಗಾಲ ಮತ್ತು ಸಾಲದ ಬಾಧೆ ಮತ್ತು ದೌರ್ಜನ್ಯಗಳಿಂದ ಹೊರಬರಲು ಅವರ ಸಾಲ ಮನ್ನಾ ಮತ್ತು ಬರಪರಿಹಾರ ಘೋಷಿಸುವ ಬಜೆಟ್ ಮಂಡಿಸಿ ಕಿಂಚಿತ್ತಾದರೂ ಸಹಾಯ ನೀಡಬಲ್ಲ ಕೆಲಸವನ್ನು ಸಿದ್ದರಾಮಯ್ಯನವರ ಸರಕಾರ ಮಾಡಬಹುದಿತ್ತು. ಆದರೇ ಹಾಗೇ ಮಾಡದೆ ಬಹುರಾಷ್ಟ್ರೀಯ ಸಂಸ್ಥೆಗಳ ಅಗತ್ಯದಂತೆ ಬೇಜವಾಬ್ದಾರಿಯುತವಾಗಿ ವರ್ತಿಸಿ, ಜನ ಕೊಟ್ಟ ತೆರಿಗೆ ಹಣ ಮತ್ತು ಅಧಿಕಾರವನ್ನು ದುರುಪಯೋಗ ಮಾಡಿದೆ ಎಂದು ಸಿಪಿಐ(ಎಂ) ಕಟುವಾಗಿ ವಿಮರ್ಶಿಸಿದೆ.

ರಾಜ್ಯದಾದ್ಯಂತ ವ್ಯಾಪಿಸಿರುವ ಅಸಂಘಟಿತ ಮತ್ತು ಗುತ್ತಿಗೆ ಮತ್ತಿತರೇ ಕಾರ್ಮಿಕರು ಕನಿಷ್ಠ ವೇತನ ಮಾಸಿಕ ರೂ. 18,000 ನೀಡುವಂತೆ ನಿರಂತರವಾಗಿ ಚಳುವಳಿಯಲ್ಲಿ ತೊಡಗಿ ಸತತವಾಗಿ ಒತ್ತಾಯಿಸುತ್ತಿದ್ದರೂ ಆ ಕುರಿತು ಪ್ರಸ್ತಾಪವೇ ಇಲ್ಲ. ಅಂಗನವಾಡಿ, ಬಿಸಿಯೂಟ, ಪಂಚಾಯತ್ ಹಾಗೂ ಇತರೆಡೆ ಖಾಯಂ ಆಗಿ ಕಾರ್ಯ ನಿರ್ವಹಿಸುವ ಗುತ್ತಿಗೆ ಮತ್ತಿತರೇ ಕಾರ್ಮಿಕರ ಉದ್ಯೋಗವನ್ನು ಖಾಯಂ ಮಾಡುವ ಕೇಳಿಕೆಯನ್ನು ಕಿವಿಯೊಳಗೆ ಹಾಕಿಕೊಂಡಿಲ್ಲ. ತೀವ್ರ ಬೆಲೆ ಏರಿಕೆಯ ಈ ಕಾಲದಲ್ಲಿ ಆಶಾ ಹಾಗೂ ಅಂಗನವಾಡಿ ಕೆಲಸಗಾರರಿಗೆ 1000 ರೂ ಘೋಷಿಸಿರುವುದು ಯಾತಕ್ಕೂ ಸಾಲುವುದಿಲ್ಲ.

ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ವ್ಯಾಪಕವಾಗಿ ಹೆಚ್ಚುತ್ತಲೇ ಇದೆ. ಅದಕ್ಕನುಗುಣವಾಗಿ ಉದ್ಯೋಗ ಸೃಷ್ಟಿಸುವ ವಿಚಾರ ಹೋಗಲೀ, ಕನಿಷ್ಠ ನಿರುದ್ಯೋಗ ಭತ್ಯೆಯನ್ನಾದರೂ ಘೋಷಿಸಿಲ್ಲ. ಸುಮಾರು 3 ಕೋಟಿಗೂ ಅಧಿಕ ಬಡವರಿರುವ ಗ್ರಾಮೀಣ ಪ್ರದೇಶದಲ್ಲಿ ಈ ವರ್ಷ ಕೇವಲ 12 ಕೋಟಿ ಮಾನವ ದಿನಗಳನ್ನು ಸೃಷ್ಟಿ ಮಾಡುವ ಉದ್ಯೋಗ ಖಾತ್ರಿ ಯೋಜನೆಯ ಗುರಿ ಹೊಂದಲಾಗಿದೆ. ಶಿಕ್ಷಣಕ್ಕೆ ಒದಗಿಸಲಾದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೇ ಶೇ 0.85ರಷ್ಟು ಕಡಿತಗೊಳಿಸಿದೆ.

ಬಡವರ ರೇಷನ್‌ಕಾರ್ಡಗಳಿಗೆ ತಲಾ 02 ಕೇಜಿ ಧಾನ್ಯ ಹೆಚ್ಚಳ ಮತ್ತು ಒಂದು ಕೇಜಿ ಬೇಳೆ ನೀಡಿಕೆ ಮತ್ತು ನಮ್ಮ ಕ್ಯಾಂಟೀನ್ ಹಾಗೂ ಹಂಚಿಕೆಗೊಳಪಡಿಸಬಹುದಾದ ಆಯವ್ಯಯದ ಶೇ 24.1 ರಷ್ಟು ಹಣವನ್ನು ಪರಿಶಿಷ್ಟಜಾತಿ ಮತ್ತು ಪಂಗಡಗಳ ಉಪಯೋಜನೆಗೆ ಮೀಸಲಿಟ್ಟಿರುವ ಮುಂತಾದ ಘೋಷಣೆಗಳಷ್ಟೇ ಸ್ವಾಗತಾರ್ಹವಾಗಿವೆ. ಅಲ್ಲಿಯೂ ಆಧಾರ್ ಕಾರ್ಡ ಕಾರಣಕ್ಕೆ ರೇಷನ್ ಕಾರ್ಡ ಬಹಳಷ್ಟು ಬಡವರಿಗೆ ಸಿಕ್ಕಿಲ್ಲ. ಈ ಬಗ್ಗೆ ಏನನ್ನೂ ಹೇಳಲಾಗಿಲ್ಲ. ಅದೇ ರೀತಿ, ಕಳೆದ 3 ವರ್ಷಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪಂಗಡದ ಉಪಯೋಜನೆಗಳಿಗೆ ನಿಗದಿಸಲಾದ ಸುಮಾರು 13.164 ಕೋಟಿ ರೂಗಳನ್ನು ಉಪಯೋಗಿಸಿಲ್ಲ. ಖರ್ಚು ಮಾಡಲಾದ ಹಣದಲ್ಲಿ ವ್ಯವಸಾಯದಲ್ಲಿ ತೊಡಗಲಿಚ್ಛಿಸುವ ದಲಿತರಿಗೆ ಭೂಮಿ ಒದಗಿಸಲು ನಿಗದಿಸಿದ ಮೊತ್ತ ಕೇಳಿಕೆಯ ಅಂಚನ್ನು ತಲುಪಿಲ್ಲ.

ಕೇಂದ್ರ ಸರಕಾರದ ಉನ್ನತ ಮೌಲ್ಯದ ನೋಟುಗಳ ವರ್ಗಾವಣೆಯ ಕಾರಣದಿಂದ ರಾಜ್ಯದ ಬೊಕ್ಕಸಕ್ಕುಂಟಾದ ನಷ್ಟವನ್ನು ಕೇಂದ್ರದಿಂದ ಪಡೆಯುವ ಪ್ರಸ್ತಾಪವನ್ನು ಹೊಂದಿಲ್ಲ. ಅಲ್ಲದೇ ಬಹುತೇಕ ಬಹಿರಂಗ ಮಾರುಕಟ್ಟೆ ಮತ್ತು ಕೇಂದ್ರ ಸರಕಾರ ಮತ್ತಿತರೇ ಕಡೆಯಿಂದ ಜಮೆಯಾಗುವ ಸಾಲದ ಪ್ರಮಾಣವೇ ಸುಮಾರು ರೂ. 37,000 ಕೋಟಿಯಾಗಿದೆ. ಇದು ರಾಜ್ಯದ ಜನತೆಯ ಬಹಳ ಮುಖ್ಯವಾಗಿ ಬಡವರ ತಲಾ ಆದಾಯವನ್ನ ಹೆಚ್ಚಿಸುವ ಯಾವುದೇ ಉದ್ದೇಶವಿಲ್ಲದೇ ಇರುವ ಸಾಲವಾಗಿದ್ದು ಅಕಾರಣವಾಗಿ ಜನತೆಯ ಮೇಲೆ ಸಾಲದ ಹೊರೆಯನ್ನು ಹೇರಿದೆ. ಒಟ್ಟು ಸಾಲವನ್ನು ರೂ. 2.40ಲಕ್ಷ ಕೋಟಿಗೆ ಹೆಚ್ಚಿಸಿದ ಸಾದನೆಯು ಈ ಬಜೆಟ್‌ನದಾಗಿದೆ. ಅದೇ ರೀತಿ, ಬಜೆಟ್ ಕೊರತೆ ರೂ. 4,442 ಕೋಟಿ ಯಾಗಿದೆ. ಸಾಲ ಮತ್ತು ಖೋತಾ ಬಜೆಟ್, ಇದೆಲ್ಲದರ ಜೊತೆ ನಿಗದಿಸಲಾದ ಮೊತ್ತವನ್ನು ಖರ್ಚು ಮಾಡದ ಇಲಾಖೆಗಳು ಈ ಎಲ್ಲವೂ ಬಡವರು, ಸಾಮಾಜಿಕ ತಾರತಮ್ಯ ನಿವಾರಣೆಗಾಗಿ ದಲಿತರಿಗೆ ಹಾಗೂ ಬಹುತೇಕ ಕೃಷಿಗೆ ನಿಗದಿಸಲಾದ ಮೊತ್ತವನ್ನು ಸಿಗುವಂತೆ ಮಾಡುವವೇ ಎಂಬ ಅನುಮಾನವಿದೆ.

ಒಟ್ಟಾರೇ, ಈ ಬಜೆಟ್‌ನ ದಿಶೆಯು ರಾಜ್ಯದ ಕೃಷಿ ಹಾಗೂ ಕೈಗಾರಿಕಾ ಬಿಕ್ಕಟ್ಟಿನ ನಿವಾರಣೆಗೆ ಬೇಕಾದ ಯಾವುದೇ ಕ್ರಮಗಳನ್ನು ಕೈಗೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿದೆ. ಮಾತ್ರವಲ್ಲ, ಈ ಬಿಕ್ಕಟ್ಟನ್ನು ಮತ್ತಷ್ಟು ಆಳಗೊಳಿಸಲು ತನ್ನದೇ ಕಾಣಿಕೆ ನೀಡಲಿದೆ. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿಲ್ಲದ ಬಜೆಟ್ ಜನತೆಯ ಮೇಲೆ ಮತ್ತಷ್ಟು ಸಾಲದ ಹೊರೆಯನ್ನು ಹೇರಿದೆ. ಆದ್ದರಿಂದ ಜನತೆ ಈ ಬಜೆಟನ್ನು ರಾಜ್ಯದ ಜನತೆಯ ತಲಾ ಆದಾಯ ಹೆಚ್ಚಳಗೊಳ್ಳಲು ಮತ್ತು ಗ್ರಾಮೀಣ ಸಾಲಬಾದಿತ ರೈತರು, ಕೂಲಿಕಾರರು, ಮಹಿಳೆಯರು, ದಲಿತರಿಗೆ ನೆರವಾಗುವಂತೆ ಮತ್ತು ಆ ದಿಶೆಯಲ್ಲಿ ರಾಜ್ಯದ ಅಭಿವೃದ್ಧಿಗೆ ಪೂರಕವಾಗುವಂತೆ ಬದಲಾಯಿಸಲು ಅಗತ್ಯ ಕ್ರಮವಹಿಸುವಂತೆ ರಾಜ್ಯ ಸರಕಾರದ ಮೇಲೆ ಒತ್ತಡ ಹೇರಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ. ●



ಅಭಿನಂದನೆಗಳು! ನರಸಿಂಹಮೂರ್ತಿ!!

ಜನಶಕ್ತಿ ಪ್ರಸಾರಾಂದೋಲನಕ್ಕೆ ಒಂದು ಮಾದರಿ

ಏಪ್ರಿಲ್ 10ರಿಂದ 23 ವರೆಗೆ ಜನಶಕ್ತಿ ಪ್ರಸಾರಾಂದೋಲನ ಪಕ್ಷಾಚರಣೆಗೆ ಕರೆ ಕೊಡಲಾಗಿದೆ. ಆದರೆ ದಾಬಸ್ ಪೇಟೆಯ 'ಎಲ್.ಎಂ. ವಿಂಡ್ ಪವರ್ ಬ್ಲೇಡ್ಸ್ ಪ್ರೈ.ಲಿ.' ಕಾರ್ಮಿಕರು ಮತ್ತು ಅವರ ನಾಯಕ ನರಸಿಂಹಮೂರ್ತಿ ಈಗಾಗಲೇ ಇದನ್ನು ಸಮಯಕ್ಕಿಂತ ಮೊದಲೇ ಆರಂಭಿಸಿದ್ದು ಮಾದರಿಯಾಗಬಹುದಾದ ಕೆಲಸ ಮಾಡಿದ್ದಾರೆ.

ಕಳೆದ ವಾರವೇ 'ಎಲ್.ಎಂ. ವಿಂಡ್ ಪವರ್ ಬ್ಲೇಡ್ಸ್ ಪ್ರೈ.ಲಿ.' ಕಾರ್ಮಿಕ ಸಂಘದ ಅಧ್ಯಕ್ಷ ನರಸಿಂಹಮೂರ್ತಿ ಅಲ್ಲಿನ 465 ಕಾರ್ಮಿಕರ ಜನಶಕ್ತಿ ಚಂದಾ ಮಾಡಿಸಿ ಹಣ ಪಾವತಿ ಮಾಡಿದ್ದಾರೆ. ಸುಮಾರು ಒಂದು ಸಾವಿರ ಕಾರ್ಮಿಕರು (ಅವರಲ್ಲಿ ಸುಮಾರು 550 ಖಾಯಂ ಮತ್ತು ಇತರ ಕಾಂಟ್ರಾಕ್ಟ್ ಮತ್ತಿತರ ಕಾರ್ಮಿಕರು) ಕೆಲಸ ಮಾಡುವ ಕಾರ್ಖಾನೆಯಲ್ಲಿ ಇದೊಂದು ನಿಜವಾಗಿಯೂ ದೊಡ್ಡ ಸಾಧನೆಯೇ. ಜನಶಕ್ತಿ ದುಡಿಯುವ ಜನರ ಅದರಲ್ಲೂ ಕಾರ್ಮಿಕರ 'ಪ್ರಾಣಮಿತ್ರ'ನಾದ ಪತ್ರಿಕೆ. ಇದನ್ನು ಅಕ್ಷರಶಃ ಜಾರಿಗೆ ತಂದಿದ್ದಕ್ಕೆ 'ಎಲ್.ಎಂ. ವಿಂಡ್ ಪವರ್ ಬ್ಲೇಡ್ಸ್ ಪ್ರೈ.ಲಿ.' ಕಾರ್ಮಿಕರಿಗೆ ಮತ್ತು ಅವರ ನಾಯಕ ನರಸಿಂಹಮೂರ್ತಿ ಅವರಿಗೆ ಜನಶಕ್ತಿ ನಿರ್ವಹಣಾ ಮತ್ತು ಸಂಪಾದಕೀಯ ಮಂಡಳಿಯ ಪರವಾಗಿ ಅಭಿನಂದನೆಗಳು ಮತ್ತು ಕೃತಜ್ಞತೆಗಳು.

ಕಾ. ನರಸಿಂಹಮೂರ್ತಿ ಅವರು ಇತರ ಸೋದರ ಪತ್ರಿಕೆಗಳಾದ 'ಸಿಐಟಿಯು ಸಂದೇಶ', 'ಪೀಪಲ್ಸ್ ಡೆಮೊಕ್ರಸಿ', 'ತೀಕದಿರ್' ಮುಂತಾದ ಚಂದಾಗಳನ್ನು ದೊಡ್ಡ ಸಂಖ್ಯೆಯಲ್ಲಿ ಮಾಡಿದ್ದಾರೆ ಎಂಬುದು ಇನ್ನಷ್ಟು ವಿಶೇಷ. ಈ ಮಾದರಿಯನ್ನು ಸಮರಶೀಲ ಕಾರ್ಮಿಕ ಮತ್ತು ದುಡಿಯುವ ಜನರ ರಾಜಕೀಯ ಎತ್ತಿ ಹಿಡಿಯಲು ಅವರ ಸಂಘಟನೆಗಳು ಅನುಸರಿಸುವುದು ಸಾಧ್ಯ ಮತ್ತು ಅದು ಇಂದಿನ ತುರ್ತು ಅಗತ್ಯ ಕೂಡಾ. ಕಾ. ನರಸಿಂಹಮೂರ್ತಿ ಅವರು ಸಿಐಟಿಯುನ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಖಜಾಂಚಿ ಮತ್ತು ಸಿಪಿಐ(ಎಂ)ನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮಿತಿಯ ಸೆಕ್ರೆಟಾರಿಯಟ್ ಸದಸ್ಯರೂ ಆಗಿದ್ದಾರೆ.

ಈ ಮಾದರಿಯನ್ನು ಸಮರಶೀಲ ಕಾರ್ಮಿಕ ಮತ್ತು ದುಡಿಯುವ ಜನರ ಸಂಘಟನೆಗಳು ಅನುಸರಿಸುತ್ತವೆ ಎಂದು ಆಶಿಸುತ್ತಾ ಹಾಗೂ ನಿರೀಕ್ಷಿಸುತ್ತಾ, ಕಾ. ನರಸಿಂಹ ಮೂರ್ತಿ ಮತ್ತು 'ಎಲ್.ಎಂ. ವಿಂಡ್ ಪವರ್ ಬ್ಲೇಡ್ಸ್ ಪ್ರೈ.ಲಿ.' ಕಾರ್ಮಿಕರಿಗೆ ಇನ್ನೊಮ್ಮೆ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

– 'ಜನಶಕ್ತಿ' ನಿರ್ವಹಣಾ ಮತ್ತು ಸಂಪಾದಕೀಯ ಮಂಡಳಿ

ನಾಳಿನ ಕಾರ್ಯಕ್ರಮಗಳು

- ❒ **ಬಜೆಟ್ ವಿರುದ್ಧ ಬಿಸಿಯೂಟ ಕಾರ್ಮಿಕರ ಪ್ರತಿಭಟನೆ, ಮಾರ್ಚ್ 17**
- ❒ **ಬಜೆಟ್ ವಿರುದ್ಧ ಹಮಾಲಿ ಕಾರ್ಮಿಕರ ಪ್ರತಿಭಟನೆ, ಮಾರ್ಚ್ 18**
- ❒ **ಅಂಗನವಾಡಿ ಕಾರ್ಮಿಕರ ಮುಷ್ಕರ, ಮಾರ್ಚ್ 20**
- ❒ **ಭಗತ್ ಸಿಂಗ್ ಹುತಾತ್ಮ ದಿನಾಚರಣೆ, ಮಾರ್ಚ್ 23**
  ಡಿ.ವೈ.ಎಫ್.ಐ. ಇತರ ಸಂಘಟನೆಗಳ ಜತೆ
- ❒ **ರಾಜ್ಯ ಮಟ್ಟದ ಉದ್ಯೋಗ ಖಾತ್ರಿ ಸಮಾವೇಶ: ಏಪ್ರಿಲ್ 3, ಬೆಂಗಳೂರು**
  ಕರ್ನಾಟಕ ಪ್ರಾಂತ ರೈತ ಸಂಘ, ಇತರ ಸಂಘಟನೆಗಳ ಜತೆ ಜಂಟಿಯಾಗಿ
- ❒ **ದಲಿತ ಹಕ್ಕುಗಳ ಸಮಿತಿಯ ರಾಜ್ಯಮಟ್ಟದ ಶಾಲೆ, ಏಪ್ರಿಲ್ 14-16,**
  ಹೊಸಪೇಟೆ (ಬಳ್ಳಾರಿ)
- ❒ **ಸಾಮಾಜಿಕ ನ್ಯಾಯ ಮತ್ತು ಸಮಾಜವಾದಿ ಕ್ರಾಂತಿ, ಏಪ್ರಿಲ್ 23**
  ದಲಿತ ಹಕ್ಕುಗಳ ಸಮಿತಿ ಇತರ ಸಂಘಟನೆಗಳ ಜತೆ
- ❒ **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ ಏಪ್ರಿಲ್ 25-27, ಹುಬ್ಬಳ್ಳಿ**

ಬಜೆಟ್‌ನಲ್ಲಿ ಈಡೇರದ ಬೇಡಿಕೆ – ಉಡುಪಿಯಲ್ಲಿ ಅಂಗನವಾಡಿ ನೌಕರರ ಆಕ್ರೋಶ

ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಅನುಕ್ರಮವಾಗಿ ರೂ.6000 ಮತ್ತು ರೂ.3000 ಗೌರವಧನವನ್ನು ಮಾಸಿಕವಾಗಿ ಕರ್ನಾಟಕ ರಾಜ್ಯದಲ್ಲಿ ನೀಡಲಾಗುತ್ತಿದ್ದು ಅದನ್ನು ಅನುಕ್ರಮವಾಗಿ ರೂ.10,000 ಮತ್ತು ರೂ.7500ಕ್ಕೆ ಹೆಚ್ಚಿಸುವಂತೆ ಮಾಡಲು ಬೇಡಿಕೆಯನ್ನು ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದಿಂದ ರಾಜ್ಯ ಸರಕಾರ-ಕ್ಕೆ ಸಲ್ಲಿಸಲಾಗಿತ್ತು. ಆದರೆ ರಾಜ್ಯ ಸರಕಾರ ಆ ಬೇಡಿಕೆಗಳನ್ನು ಕಡೆಗಣಿಸಿ ಕೇವಲ ರೂ.1000 ಮತ್ತು ರೂ.500 ಮಾತ್ರ ಏರಿಕೆ ಮಾಡಿರುವುದನ್ನು ಖಂಡಿಸಿ ಉಡುಪಿ ಜಿಲ್ಲಾ ಘಟಕದ ಸದಸ್ಯರು ಬಜೆಟ್ ಮಂಡನೆಯಾದ ದಿನ ಮಾರ್ಚ್ 15 ರಂದು ಉಡುಪಿ ನಗರ ಸರ್ವಿಸ್ ಬಸ್ ನಿಲ್ದಾಣದ ಎದುರು ಪ್ರತಿಭಟನೆ ನಡೆಸಿದರು.

ಕೋರಿರುವ ನ್ಯಾಯಯುತ ಗೌರವಧನ, ಸೇವಾ ಜೇಷ್ಠತೆ ಆಧಾರದಲ್ಲಿ ಭತ್ತೆ, ಅರ್ಹ ಸಹಾಯಕಿಯರಿಗೆ, ಕಾರ್ಯಕರ್ತೆಯರಿಗೆ ಬಡ್ತಿ, ಸರಕಾರಿ ನೌಕರರೆಂದು ಪರಿಗಣನೆ ಇತ್ಯಾದಿ ಬೇಡಿಕೆಗಳನ್ನು ಪ್ರತಿಭಟನೆ ವೇಳೆ ಆಗ್ರಹಿಸಲಾಯಿತು. ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಕೇಂದ್ರ ಸರಕಾರ ಅನುದಾನ ಕಡಿಮೆ ಮಾಡಿದ ಕ್ರಮವನ್ನು ಹಿಂತೆಗೆದುಕೊಂಡು, ರಾಜ್ಯ ಸರ್ಕಾರಗಳಿಗೆ ಮತ್ತೆ ಅನುದಾನ ನೀಡಬೇಕೆಂದು ಆಗ್ರಹಿಸಲಾಯಿತು.

ಅಂಗನವಾಡಿ ನೌಕರರ ಸಂಘದ ಉಡುಪಿ ಜಿಲ್ಲಾ ಕಾರ್ಯದರ್ಶಿ ಸುಶೀಲಾ ನಾಡ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಂಘದ ಅಧ್ಯಕ್ಷೆ ಗೀತಾ ಶೆಟ್ಟಿ, ಖಜಾಂಚಿ ಬಿ. ಆಶಲತಾ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಮಾನತೆ ಮನೆಯಿಂದ ಶುರುವಾಗಲಿ: ಡಾ. ಶೈಲಾ ಯು.

ಹೆಣ್ಣು ಮಕ್ಕಳನ್ನು ಭಯದ ವಾತಾವರಣದಲ್ಲಿ ಬೆಳೆಸುತ್ತಿದ್ದೇವೆ. ಅವಳು ಹೊರಗಡೆ ಹೋದಾಗ ಅತ್ಯಾಚಾರ ಆದೀತೆಂಬ ಭಯವನ್ನು ಹುಟ್ಟಿಸಿ, ಮನೆಯಲ್ಲೇ ನಿರ್ಬಂಧಿಸಲಾಗುತ್ತಿದೆ. ರಾತ್ರಿ ಮಾತ್ರ ಮಹಿಳೆಯ ಮೇಲೆ ದೌರ್ಜನ್ಯ ನಡೆಯುವುದಲ್ಲ, ಹಗಲೂ ನಡೆಯುತ್ತದೆ ಎಂಬುದಾಗಿ ಪ್ರಾಧ್ಯಾಪಿಕೆ ಹಾಗೂ ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘದ ಅಧ್ಯಕ್ಷೆ ಡಾ.ಶೈಲಾ ಯು.ಹೇಳಿದರು. ಅವರು ಮಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘದ ದ.ಕ.ಜಿಲ್ಲಾ ಸಮಿತಿ ವತಿಯಿಂದ ಮಾರ್ಚ್ 12 ರಂದು ಏರ್ಪಡಿಸಿದ್ದ ವಿಶ್ವ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಸಮಾನತೆಗಾಗಿ ಮಹಿಳೆಯರು ನಡೆಸುವ ಹೋರಾಟ ಕುಟುಂಬದೊಳಗೆ ಅಭ್ಯಾಸವಾಗಬೇಕು. ಮನೆಯ ಗಂಡಸರು ಸಹಕಾರ ನೀಡದೆ ಹೋದರೆ ಸಮಾನತೆ ಬೆಳೆಸಲು ಸಾಧ್ಯವಿಲ್ಲ. ಇದಕ್ಕಾಗಿ ಗಂಡಸರು, ಮಕ್ಕಳಿಗೂ ಗೃಹ ಕೆಲಸ ಹಂಚಿಕೆಯಾಗಬೇಕು ಎಂದು ಡಾ.ಶೈಲಾ ಯು. ಹೇಳಿದರು.

ಸಂಘಟನೆಯ ಜಿಲ್ಲಾ ಸಮಿತಿ ಅಧ್ಯಕ್ಷೆ ಜಯಂತಿ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಹೇಮಲತಾ, ಪದ್ಮಾವತಿ ಶೆಟ್ಟಿ, ರಾಜ್ಯ ಸಮಿತಿ ಜೊತೆ ಕಾರ್ಯದರ್ಶಿ ಕಿರಣ ಪ್ರಭಾ, ಸಮುದಾಯ ಸಾಂಸ್ಕೃತಿಕ ಸಂಘಟನೆಯ ವಾಸುದೇವ ಉಚ್ಚಿಲ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯದರ್ಶಿ ರಾಧಾ ಮೂಡಬಿದ್ರೆ ಸ್ವಾಗತಿಸಿ ಖಜಾಂಚಿ ವಿಲಾಸಿನಿ ತೊಕ್ಕೊಟ್ಟು ವಂದಿಸಿದರು.



ಕೋಣಿ : ಗುರುತಿಸಿರುವ ನಿವೇಶನ ಸ್ಥಳಕ್ಕೆ ಹಕ್ಕು ಪತ್ರ ಕೊಡಲು ಆಗ್ರಹಿಸಿ–ಸಮಾವೇಶ



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಮನೆ ನಿವೇಶನ ರಹಿತರಿಗೆ ಸರಕಾರಿ ಸ್ಥಳ ಗುರುತಿಸಿ ಹಕ್ಕು ಪತ್ರ ಮಂಜೂರು ಮಾಡಲು ಆಗ್ರಹಿಸಿ ಕೋಣಿ ಮತ್ತು ಕಂದಾವರ ಗ್ರಾಮಗಳ ನಿವೇಶನ ರಹಿತರ ಬೃಹತ್ ಸಮಾವೇಶವು ಕೋಣಿ ವ್ಯವಸಾಯ ಸೇವಾ ಸಹಕಾರಿ ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿ-ತು.

ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕವಾಗಿ ಭಾಷಣ ಮಾಡುತ್ತಾ ಎಲ್ಲಾ ಕೃಷಿ ಕೂಲಿಕಾರರ ಕುಟುಂಬಗಳಿಗೆ ಯಾವುದೇ ಷರತ್ತು ವಿಧಿಸದೇ ಬಿ.ಪಿ.ಎಲ್ ರೇಷನ್‌ಕಾರ್ಡ್ ವಿತರಿಸಬೇಕು. ಕೇರಳ ಸರಕಾರದ ಮಾದರಿಯಲ್ಲಿ ರಿಯಾಯ್ತಿ ದರದಲ್ಲಿ ಮಾರಾಟಮಾಡಬೇಕು ಎಂದು ಸರಕಾರವನ್ನು ಆಗ್ರಹಿಸಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ನಾಗರತ್ನ ನಾಡ, ಪದ್ಮಾವತಿ ಶೆಟ್ಟಿ, ಕುಶಲ, ಸತೀಶ ಖಾರ್ವಿ, ರಮೇಶ ಕೋಣಿ ಉಪಸ್ಥಿತರಿದ್ದರು.

ಕಣ್ಣಳತೆ


ವರದಿ: ವಾ.ಉ.

ಉಡುಪಿಯಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ:

ಕಾರ್ಮಿಕರ ಕಲ್ಯಾಣ ಮಂಡಳಿ ಕೊಡಮಾಡುವ ಸೌಲಭ್ಯಗಳಿಗೆ ನೋಂದಾಯಿತ ಕಟ್ಟಡ ಕಾರ್ಮಿಕರು ಅರ್ಜಿ ಸಲ್ಲಿಸಿ ಸಹಾಯ ಧನ ಪಡೆಯುತ್ತಿದ್ದರು. ಆದರೆ 2013, 2014 ಮತ್ತು 2015ನೇ ಸಾಲಿನಲ್ಲಿ ಮದುವೆ ಸಹಾಯಧನ, ಶಸ್ತ್ರಚಿಕಿತ್ಸೆ, ಅಂತಿಮಸಂಸ್ಕಾರ, ವಿದ್ಯಾರ್ಥಿ ವೇತನ ಮತ್ತು ಪಿಂಚಣಿ ಮೊದಲಾದ ಯೋಜನೆಗಳಿಗೆ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಸಹಾಯಧನ ಮಂಜೂರಾಗಿಲ್ಲ. ಅಲ್ಲದೆ ಕೆಲವೊಂದು ಅರ್ಜಿಗಳಿಗೆ ಸಹಾಯಧನ ಮಂಜೂರಾಗಿದ್ದರೂ ಬ್ಯಾಂಕ್‌ಖಾತೆಗೆ ಹಣ ಜಮಾ ಆಗಿಲ್ಲ. ಹಾಗಾಗಿ ಕಾರ್ಮಿಕರು ದುಡಿಮೆ ಬಿಟ್ಟು ಕಚೇರಿ ಅಲೆದಾಡುವ ಪರಿಸ್ಥಿತಿ ಎದುರಾಗಿದೆ.

ನೋಂದಾಯಿತ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ ಸಹಾಯಧನ ಮಂಜೂರು ಮಾಡದಿರುವ ಕ್ರಮವನ್ನು ಖಂಡಿಸಿ ಮಾರ್ಚ್ 14ರಂದು ಸಿಐಟಿಯು ಸಂಯೋಜಿತ ಉಡುಪಿ ಜಿಲ್ಲಾ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಮನ್ವಯ ಸಮಿತಿಯ ಸದಸ್ಯರು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ ಮಾತನಾಡಿದರು. ಸಿಐಟಿಯು ಮುಖಂಡರಾದ ದಾಸು ಭಂಡಾರಿ, ಶೇಖರ ಬಂಗೇರ, ಸುರೇಶ ಕಲ್ಲಾಗರ, ವಿಠಲ ಪೂಜಾರಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರೊ॥ ನರೇಂದ್ರ ನಾಯ್ಕ್ ಮೇಲೆ ಹಲ್ಲೆ ಯತ್ನ



ತೀರ ಆತಂಕದ ಸುದ್ದಿಯೊಂದು ಮಂಗಳೂರಿನಿಂದ ವರದಿಯಾಗಿದೆ...

ಮೊನ್ನೆಯಷ್ಟೇ ಯೋಗೀಶ್ವರ ಮಾಸ್ಟರ್ ಮೇಲೆ ಹಲ್ಲೆ ಮರೆಯಾಗುವ ಮುನ್ನವೇ.....

ನಮ್ಮೆಲ್ಲರ ಪ್ರೀತಿಯ ವಿಚಾರವಾದಿಗಳು ಗುರುಗಳಾದ ಮತ್ತು ಎಲ್ಲಾ ರೀತಿಯ ಮೌಢ್ಯತೆಗಳ ವಿರುದ್ಧ ಹಲವು ದಶಕಗಳಿಂದ ಸಮಾಜವನ್ನು ಎಚ್ಚರಿಸುತ್ತಾ ಬಂದಿರುವ ವಿಚಾರವಾದ ಪ್ರೊ ;ನರೇಂದ್ರ ನಾಯ್ಕ್ ಮೇಲೆ ಹಲ್ಲೆ ಯತ್ನ ನಡೆದಿದೆ.

ನಿನ್ನೆ ಕಾರಲ್ಲಿ ಹೋಗ್ತಿರುವಾಗ ಬೈಕಲ್ಲಿ ಬಂದ ದುಷ್ಕರ್ಮಿಗಳು ಕಾರನ್ನ ತಡೆಯೋ ಯತ್ನ ನಡೆಸಿದ್ದಾರೆ. ಮಂಗಳೂರಿನ ಉರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಹೆಚ್ಚುವರಿ ಗನ್ ಮ್ಯಾನ್ ನೀಡಲಾಗಿದೆ. ನರೇಂದ್ರ ನಾಯ್ಕ್ ವಿನಾಯಕ್ ಬಾಳಿಗಾ ಕುಟುಂಬದ ಪರವಾಗಿ ಹೋರಾಟ ನಡೆಸುತ್ತಿದ್ದಾರೆ

ಇಂತಹ ಎಷ್ಟೋ ಜೀವ ಭಯಗಳನ್ನು ಈ ಹಿಂದೆಯೂ ಅವರು ಎದುರಿಸಿದ್ದಾರೆ. ಇಂತಹ ಬೆದರಿಕೆಗಳಿಗೆ ಅವರೆಂದು ಬಗ್ಗಿದವರಲ್ಲ ಮತ್ತು ಬಗ್ಗುವುದಿಲ್ಲ....

ಆದರೂ ಅವರ ಹೋರಾಟವನ್ನು ಹತ್ತಿಕ್ಕಲು ಸಮಾಜವಿರೋಧಿ ಶಕ್ತಿಗಳು ನಡೆಸುತ್ತಿರುವ ಷಢ್ಯಂತ್ರಗಳನ್ನು ಸೋಲಿಸಬೇಕು.ಪ್ರೊ: ನರೇಂದ್ರ ನಾಯಕ್ ಅವರ ಜೊತೆ ನಾವಿರಬೇಕು.

ಇದ್ದೇ ಇರುತ್ತೇವೆ.

ಈ ವಾರ ಚರಿತ್ರೆಯಲ್ಲಿ

20 ಮಾರ್ಚ್ 1929

ಮೀರತ್ ಪಿತೂರಿ ಮೊಕದ್ದಮೆ

ಮೀರತ್ ನಲ್ಲಿ ಸಭೆ ಸೇರಿ ಬ್ರಿಟಿಶ್ ಸಾಮ್ರಾಜ್ಯವನ್ನು ಉರುಳಿಸುವ ಪಿತೂರಿ ಮಾಡಿದ್ದಾರೆ ಎಂದು ಆಪಾದಿಸಿ 31 ಕಮ್ಯುನಿಸ್ಟರನ್ನು ಈ ದಿನ ಬಂಧಿಸಲಾಯಿತು. 1917ರ ಅಕ್ಟೋಬರ್ ಕ್ರಾಂತಿಯಿಂದ ಪ್ರೇರಿತವಾಗಿ ಭಾರತದ ಕಮ್ಯುನಿಸ್ಟ್ ಪಕ್ಷ 1921ರಲ್ಲಿ ಸ್ಥಾಪಿತವಾಗಿತ್ತು. ಕಮ್ಯುನಿಸ್ಟರು ಕಾರ್ಮಿಕರು, ರೈತರು, ಯುವಜನರನ್ನು ಸಂಘಟಿಸಲು ಪ್ರಾರಂಭಿಸಿದ್ದರು. ಇದರ ಅಪಾಯವನ್ನು ಮನಗಂಡ ಬ್ರಿಟಿಶ್ ಸರಕಾರ ಅದಕ್ಕೆ ಬ್ರೇಕ್ ಹಾಕಬೇಕೆಂದು ಈ ಪ್ರಕರಣ ದಾಖಲಿಸಿತು. ಈ ನಾಯಕರನ್ನು 4 ವರ್ಷಗಳ ಕಾಲ ಮೀರತ್ ಜೈಲಿನಲ್ಲಿ ಇಡಲಾಗಿತ್ತು. ಈ ವಿಚಾರಣೆಯನ್ನೇ ತಮ್ಮ ಸಿದ್ಧಾಂತ ಪ್ರಚಾರ ಮಾಡಲು ಅವರು ಬಳಸಿಕೊಂಡರು. ಆಪಾದಿತ ಮುಖಂಡರ ರಕ್ಷಣೆಗೆ ದೇಶದಾದ್ಯಂತ ಮಾತ್ರವಲ್ಲ, ಬ್ರಿಟನ್ ಮುಂತಾದ ವಿದೇಶಗಳಲ್ಲೂ ರಕ್ಷಣಾ ಸಮಿತಿಗಳು ರಚನೆಯಾದವು. ಈ 31 ಕಮ್ಯುನಿಸ್ಟರಲ್ಲಿ ಮುಂದೆ ಪ್ರಸಿದ್ಧ ನಾಯಕರಾದ ಮುಜಫರ್ ಅಹ್ಮದ್, ಎಸ್.ಎಸ್.ಡಾಂಗೆ, ಎಸ್.ವಿ.ಘಾಟೆ, ಪಿ.ಸಿ.ಜೋಶಿ ಮುಂತಾದವರಿದ್ದರು.



ಕೃಷಿ ಉತ್ಪಾದನಾ ವೆಚ್ಚಕ್ಕೆ ಶೇ.50 ರಷ್ಟನ್ನು ಸೇರಿಸಿ ಬೆಲೆ ನಿಗದಿ ಮಾಡಿದರೆ ಮಾತ್ರ ರೈತರು ಉಳಿಯಬಹುದು

ತೆಂಗು ಬೆಳೆಗಾರರ ಸಮಾವೇಶ



ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಮುಖ ಬೆಳೆ ತೆಂಗು ಇಲ್ಲಿಯ ಬಹುತೇಕ ರೈತರು ಇದೇ ಬೆಳೆಯ ಮೇಲೆ ಅವಲಂಬಿತರಾಗಿದ್ದಾರೆ. ತೆಂಗನ್ನ ಕಲ್ಪವೃಕ್ಷ ಎಂದು ಕರೆಯುತ್ತಾರೆ ಆದರೆ ಇದೇ ಕಲ್ಪವೃಕ್ಷದ ನಾಡು ಇಂದು ಬರಡಾಗಿ ಪರಿವರ್ತನೆಯಾಗುತ್ತಿದೆ. ಒಂದೆಡೆ ಮಳೆಯ ಅಭಾವ ಬರಗಾರದಿಂದಾಗಿ ಬೆಳೆ ನಷ್ಟವನ್ನು ಅನುಭವಿಸುತ್ತಿದ್ದರೆ ಇನ್ನೊಂದೆಡೆ ಕೈಗೆ ಬಂದ ಅಲ್ಪಸ್ವಲ್ಪ ಬೆಳೆಗೂ ಸರಿಯಾದ ಬೆಲೆ ಸಿಗದಿರುವುದರಿಂದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಬೆಳೆವಾರು ರೈತರನ್ನು ಸಂಘಟಿಸಲು ಮತ್ತು ಅವರ ಸಮಸ್ಯೆಗಳನ್ನು ಗುರುತಿಸಿ ಹೋರಾಟಗಳನ್ನು ಕಟ್ಟಿಬೆಳೆಸಲು ರಾಜ್ಯ ಮಟ್ಟದಲ್ಲಿ ಯೋಜನೆಯನ್ನು ರೂಪಿಸಿದೆ ಇದರ ಭಾಗವಾಗಿ ಚನ್ನರಾಯ ಪಟ್ಟಣ ತಾಲ್ಲೂಕಿನಲ್ಲಿ ನಡೆದ ತೆಂಗು ಬೆಳೆಗಾರರ ಸಮಾವೇಶದ ಕುರಿತು ಒಂದು ವರದಿ

ಕೃಷಿ ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ವೈಜ್ಞಾನಿಕ ಬೆಲೆ ಸಿಗದಿರುವುದರಿಂದ ರೈತರು ಅತ್ಯಂತ ಸಂಕಷ್ಟಕ್ಕೊಳಗಾಗಿ ಆತ್ಮಹತ್ಯೆಯ ದಾರಿಯನ್ನು ತುಳಿಯುತ್ತಿದ್ದಾರೆ. ರೈತರನ್ನು ಈ ಪರಿಸ್ಥಿತಿಯಿಂದ ಹೊರತರಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ತಜ್ಞರಾದ ಡಾ.ಎಂ.ಎಸ್.ಸ್ವಾಮಿನಾಥನ್‌ರವರ ಆಯೋಗದ ಶಿಫಾರಸ್ಸಿನಂತೆ ಕೃಷಿ ಉತ್ಮಾದನಾ ವೆಚ್ಚಕ್ಕೆ ಶೇ.50 ರಷ್ಟನ್ನು ಸೇರಿಸಿ ಬೆಲೆ ನಿಗದಿ ಮಾಡಿದರೆ ಮಾತ್ರ ರೈತರು ಉಳಿಯಬಹುದು ಆಮೂಲಕ ಕೃಷಿ ಮತ್ತು ದೇಶ ಉಳಿಯಲು ಸಾಧ್ಯ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಹೇಳಿದರು. ಇಂದು ಚನ್ನರಾಯಪಟ್ಟಣದ ಕರ್ನಾಟಕ ಭವನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಏರ್ಪಡಿಸಿದ್ದ ತೆಂಗು ಬೆಳೆಗಾರರ ಸಮಾವೇಶವನ್ನು ಉಧ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಸಿಗೆ ನೀರೆರೆಯುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದ ಮಾರುತಿ ಮಾನ್ಪಡೆಯವರು 1991 ರ ನವ ಉದಾರೀಕರಣ ನೀತಿಗಳ ಪರಿಣಾಮ ಕೃಷಿ ಅತ್ಯಂತ ಬಿಕ್ಕಟ್ಟಿಗೆ ಸಿಲುಕುತ್ತಿದೆ. ನಮ್ಮ ದೇಶದಲ್ಲಿ ಬೆಳೆಯುವ ತೆಂಗು, ರೇಷ್ಮೆ, ತೊಗರಿ ಮುಂತಾದ ಕೃಷಿ ಉತ್ಪನ್ನಗಳನ್ನು ವಿದೇಶಗಳಿಂದ ಆಮದು ಮಾಡಿಕೊಂಡು ಭಾರತದ ಮಾರುಕಟ್ಟೆಗಳಲ್ಲಿ ಕಡಿಮೆ ದರಗಳಿಗೆ ಮಾರಾಟ ಮಾಡುತ್ತಿರುವುದರಿಂದ ಇಲ್ಲಿಯ ರೈತರು ಬೆಳೆದ ಬೆಳೆಗಳಿಗೆ ಸರಿಯಾದ ಮಾರುಕಟ್ಟೆ ಸಿಗುತ್ತಿಲ್ಲ. ತೆಂಗು ಬೆಳೆಯುವ ರೈತರು ಕಳೆದ ಐದಾರು ವರ್ಷಗಳ ನಿರಂತರ ಬರಗಾಲದಿಂದಾಗಿ ಅಂತರ್ಜಲದ ಮಟ್ಟ ತೀವ್ರ ಕುಸಿತದಿಂದಾಗಿ ತೆಂಗಿನ ಬೆಳೆ ನಷ್ಟವಾಗುತ್ತಿದ್ದು ಇಳುವರಿ ಕುಸಿದಿದೆ. ಮತ್ತೊಂದೆಡೆ ಕೈಗೆ ಬಂದ ಬೆಳೆಗೆ ಸರಿಯಾದ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ ಇದರಿಂದ ರೈತರು ಕಂಗಾಲಾಗಿದ್ದಾರೆ. ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸಕಾರಗಳು ಕೇರಳ ಮಾದರಿಯಲ್ಲಿ ತೆಂಗು ಬೆಳೆ ನಷ್ಟ ಪರಿಹಾರಕ್ಕಾಗಿ ವಿಶೇಶ ಪ್ಯಾಕೇಶ್ ಘೋಷಿಸಿ ಈ ಭಾಗದ ಕೆರೆಗಳಿಗೆ ಕನಿಷ್ಟ ವರ್ಷಕ್ಕೆ ಒಂದು ಬಾರಿಯಾದರೂ ನೀರನ್ನು ತುಂಬಿಸಿದರೆ ಅಂತರ್ಜಲದ ಮಟ್ಟ ಉತ್ತಮಗೊಂಡು ತೆಂಗಿನ ಬೆಲೆ ಉತ್ತಮವಾಗಿ ಫಲ ನೀಡಲಿದೆ. ಇದಕ್ಕಾಗಿ ತೆಂಗುಬೆಳೆಗಾರರು ಸಂಘಟಿತರಾಗಿ ಹೋರಾಟಮಾಡಬೇಕಾದ ಅನಿವಾರ್ಯತೆಯಿದೆ ಎಂದು ಹೇಳಿದರು.

ಸಮಾವೇಶದ ಮೊದಲಿಗೆ ಪ್ರಾಸ್ಥಾವಿಕ ನುಡಿಗಳನ್ನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎಚ್.ಆರ್.ನವೀನ್ ಕುಮಾರ್ ರವರು ಜಿಲ್ಲೆಯಲ್ಲಿ 66,206 ಎಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯುತ್ತಿದ್ದು ಇದರಲ್ಲಿ ಚನ್ನರಾಯಪಟ್ಟಣ ಎರಡನೇ ಸ್ಥಾನದಲ್ಲಿದ್ದು 25,200 ಎಕ್ಟೇರ್‌ಗಳಲ್ಲಿ ಬೆಳೆ ಬೆಳೆಯಲಾಗುತ್ತಿದೆ. ಆದರೆ ಕಳೆದ ಹಲವು ವರ್ಷಗಳ ಬರಗಾಲ ಮತ್ತು ನುಸಿ ರೋಗ ಮತ್ತಿತರೆ ರೋಗಗಳಿಂದಾಗಿ ಸುಮಾರು 6 ಸಾವಿರ ಎಕ್ಟೇರ್ ಪ್ರದೇಶದ ತೆಂಗಿನ ಬೆಳೆ ನಾಶವಾಗಿದ್ದು ಈ ರೈತರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಇವರಿಗೆ ಸರ್ಕಾರಗಳಿಂದ ಯಾವುದೇ ರೀತಿಯ ಪರಿಹಾರಗಳನ್ನು ಇದುವರೆಗು ನೀಡಲಾಗಿಲ್ಲ. ಮತ್ರವಲ್ಲದೆ ಕೇರಳ ಮಾದರಿಯಲ್ಲಿ ತೆಂಗಿನ ಉತ್ಪಾದನೆಗಳನ್ನು ವಿವಿಧ ರೀತಿಯಲ್ಲಿ ಬಳಕೆಮಾಡಿ ಅವುಗಳಿಗೆ ಸ್ಥಳೀಯ ಮಾರುಕಟ್ಟೆಗಳನ್ನು ಒದಗಿಸುವು ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಇದರಿಂದ ಕೃಷಿಗಾಗಿ ಸಾಲ ಮಾಡಿದ ರೈತರು ಸಾಲಗಳನ್ನು ತೀರಿಸಲಾಗದೆ ಸಾವಿಗೆ ಶರಣಾಗುತ್ತಿದ್ದಾರೆ ಎಂದರು.

ಸಮಾವೇಶದ ಅದ್ಯಕ್ಷತೆ ವಹಿಸಿದ್ದ ಎಚ್.ಎಸ್.ಮಂಜುನಾಥ್‌ರವರು ಮಾತನಾಡುತ್ತ ಚನ್ನರಾಯಪಟ್ಟಣ ತಾಲ್ಲೂಕಿನ ರೈತರು ತೆಂಗು ಬೆಳೆದು ನಷ್ಟ ಅನುಭವಿಸುತ್ತಿದ್ದರೂ ಪರ್ಯಾಯ ಬೆಳೆ ಮಾಡದಂತಹ ಅತಂತ್ರ ಪರಿಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದಾರೆ. ತೆಂಗು ಬಹುವಾರ್ಷಿಕ ಬೆಳೆಯಾಗಿರುವುದರಿಂದ ಈ ಬೆಳೆಯನ್ನು ಉಳಿಸಲು ಆ ಮೂಲಕ ರೈತ ಸಮುದಾಯವನ್ನು ಉಳಿಸಲು ಪ್ರಭಲ ರೈತ ಚಳುವಳಿಯನ್ನು ಕಟ್ಟಿ ಬೆಳೆಸಬೇಕಿದೆ ಎಂದರು.

ಸಮಾವೇಶದಲ್ಲಿ ಕೆಪಿಆರ್‌ಎಸ್‌ನ ಜಿಲ್ಲಾ ಕಾರ್ಯದರ್ಶಿ ವಸಂತ್‌ಕುಮಾರ್, ತೋಟಗಾರಿ–ಕೆ ಇಲಾಖೆಯ ಅಧಿಕಾರಿ ರವಿ ನಾಯಕ್, ರೈತ ಮುಖಂಡರಾದ ಮಂಜೇಗೌಡ ಮತ್ತು ನಿವೃತ್ತ ಪ್ರಾಂಶುಪಾಲರಾದ ಮೇಲಗಿರಿಗೌಡರವರು ಉಪಸ್ಥಿತರಿದ್ದರು

ಸಮಾವೇಶದ ಸ್ವಾಗತವನ್ನು ವಾಸುದೇವ್ ಕಲ್ಕೆರೆ ಮಾಡಿದರು ನಿರೂಪಣೆಯನ್ನು ಡಿ.ಎಲ್.ರಾಘವೇಂದ್ರ ಮಾಡಿದರು.

ಸಮಾವೇಶದ ಕೊನೆಯಲ್ಲಿ 20 ಸದಸ್ಯರನ್ನೊಳಗೊಂಡ ಚನ್ನರಾಯಪಟ್ಟಣ ತಾಲ್ಲೂಕು ತೆಂಗು ಬೆಳೆಗಾರರ ಹೋರಾಟ ಸಮಿತಿಯನ್ನು ರಚಿಸಲಾಯಿತು. ಇದರ ಸಂಚಾಲಕರಾಗಿ ಎಚ್.ಎಸ್.ಮಂಜುನಾಥ್ ಆಯ್ಕೆಯಾದರು. ಮತ್ತು ಏಪ್ರಿಲ್ 1 ರಂದು ನಷ್ಟಕ್ಕೊಳಗಾಗಿರುವ ತೆಂಗಿಗೆ ಪರಿಹಾರಕ್ಕೆ ಆಗ್ರಹಿಸಿ ಮತ್ತು ತಾಲ್ಲೂಕಿನ ಎಲ್ಲಾ ಕೆರೆಗಳಿಗೆ ನೀರನ್ನು ತುಂಬಿಸಬೇಕೆಂದು ಒತ್ತಾಯಿಸಿ ತಹಸಿಲ್ದಾರ್ ಕಛೇರಿ ಎದುರು ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು.

ಸಾಹಿತಿ ಯೋಗೇಶ್ ಮಾಸ್ಟರ್ ಮೇಲಿನ ಮತೀಯವಾದಿಗಳ ದಾಳಿ ಖಂಡಿಸಿ ಪ್ರತಿಭಟನೆ



ಸಾಹಿತಿ ಯೋಗೇಶ್ ಮಾಸ್ಟರ್ ಮೇಲಿನ ಮತೀಯವಾದಿಗಳ ದಾಳಿ ಖಂಡಿಸಿ **SFI,AIDSO,AISF,AISA,KVS,DYFI,JMS,DHS,** ಸಮುದಾಯ ಕರ್ನಾಟಕ, ದಲಿತ ಸಂಘಟನೆ ಸೇರಿದಂತೆ ಅನೇಕ ಪ್ರಗತಿಪರ ಸಂಘಟನೆಗಳು ಟೌನ್ ಹಾಲ್ ಮುಂಭಾಗದ ಬಳಿ ಪ್ರತಿಭಟನೆ ನಡೆಸಿದರು.

ಪ್ರಗತಿಪರ ಸಾಹಿತಿ ಸಿದ್ಧನಗೌಡ ಪಾಟೀಲ್ ಮಾತನಾಡುತ್ತಾ "ಪೊಲೀಸರು ಕಿಡಿಗೇಡಿಗಳನ್ನು ಬೆಳಿಗ್ಗೆ ಬಂಧನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಬಂದಿತರನ್ನು ಕೇಳಿದಾಗ " ಯೋಗೇಶ್ ಅವರು ಹಿಂದು ದೇವರುಗಳ ಬಗ್ಗೆ ಬರೀತಾರೆ. ಹಿಂದೂ ದೇವರುಗಳ ವಿರುದ್ಧ ಬರೆದರೆ ನಾನು ಸುಮ್ಮನೇ ಇರಲ್ಲಾ ಎಂದು ಹೇಳಿದ್ದಾರೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಮುಂದಿನ ಚುನಾವಣೆಯಲ್ಲಿ ಕೋಮುವಾದಿ ಸರ್ಕಾರ ಬಂದರೆ ಕಾರ್ಯಕ್ರಮ ನಡೆಸಲು ಸಹ ನಮಗೆ ಒಪ್ಪಿಗೆ ಖಂಡಿತಾ ಸಿಗಲ್ಲಾ. ನಾವು ಇಲ್ಲಿರುವ ಸಂಗಾತಿಗಳನ್ನು ನಾನು ಕೇಳಿಕೊಳ್ಳುತ್ತೇನೆ ನಾವು ಕೇವಲ ಖಂಡನಾ ಸಭೆಯನ್ನು ಮಾಡಿದ್ರೆ ಸಾಕಾಗಲ್ಲಾ. ಮುಂದಿನ ದಿನಗಳಲ್ಲಿ ರಾಜ್ಯ ಮಟ್ಟದ ಖಂಡನಾ ಸಮಾವೇಶ ಮಾಡಬೇಕಾದ ಅಗತ್ಯತೆ ಇದೆ. ನಮ್ಮ ಬೆಂಬಲಿಗರನ್ನು ನಾವು ತಲುಪಬೇಕಾಗುತ್ತದೆ. ಅವರ ಭಾಷೆಯಲ್ಲೇ ನಾವು ಉತ್ತರ ನೀಡಬೇಕಾಗುತ್ತದೆ. ಮತಾಂದ ಶಕ್ತಿಗಳನ್ನು ಒಗ್ಗಟ್ಟಿನಿಂದ ಯದರುಸೋಣ. ಮತಾಂದ ಶಕ್ತಿಗಳು ದೊಡ್ಡ ಮಟ್ಟದಲ್ಲಿ ಒಗ್ಗಟ್ಟಿದ್ದಾರೆ. ನಾವು ಪ್ರತಿಕ್ರಿಯೆ ನೀಡುವುದಕ್ಕೆ ಮಾತ್ರ ಸೀಮಿತ ರಾಗದೆ ಕ್ರಿಯೆಗೆ ಇಳಿಯೋಣ. ರಾಜ್ಯ ಮಟ್ಟದ ದೊಡ್ಡ ಮಟ್ಟದ ಸಮಾವೇಶಗಳನ್ನ ನಡೆಸೋಣ ಅಂತಾ ಹೇಳ್ತಾ. ಯೋಗೇಶ್ ಮಾಸ್ಟರ್ ಅವರೊಂದಿಗೆ ನಾವಿದ್ದೇವೆ ಎಂದರು.

> "ನನ್ನ ಮೇಲೆ ದಾಳಿ ಮಾಡಿದ ಆ ಅಮಾಯಕ ಹುಡಗರನ್ನ ನೋಡಿ ನೋವಾಗುತ್ತಿದೆ. ನನ್ನ ಮೇಲೆ ದಾಳಿ ನಡೆಸುವುದಕ್ಕೆ ಪ್ರೇರೇಪಣೆ ಮಾಡಿದವರನ್ನು ನೋಡಿ ಅಸಹ್ಯವಾಗುತ್ತಿದೆ. ಆ ಅಮಾಯಕ ಹುಡುಗರ ತಲೆಯೊಳಗೆ ಹುಸಿ ಹಿಂದುತ್ವದ ಭಾವನೆಗಳನ್ನು ತುಂಬಿರುವ ಸಂಘ ಪರಿವಾರದವರ ತಂತ್ರಗಳನ್ನು ಖಂಡಿಸಬೇಕಾಗಿದೆ".
>
> **–ಯೋಗೇಶ್ ಮಾಸ್ಟರ್**

ಸಮಾಜ ವಿಜ್ಞಾನಿ GN ನಾಗರಾಜ್ ಮಾತನಾಡುತ್ತಾ

"ಇದು ಹಿಂದು ಧರ್ಮದ ಮೇಲೆ ನಡೆದಿರುವ ದಾಳಿ ಇದು. ಉಪನುಷ್ಯತ್ತಿನ ಮೇಲೆ ನಡೆದಿರುವ ದಾಳಿ ಇದು. ಮಾನವ ಸಮಾಜದ ಹುಟ್ಟಿನಿಂದಾಗಿರುವ ಈ ಸಾಂಸ್ಕತಿಕ ತೆ ಮೇಲೆ ನಡೆದಿರುವ ದಾಳಿ ಇದು. ಹಿಂದು ಎನ್ನುವ ಪದಕ್ಕೆ ದ್ರೋಹ ಬಗೆದಿದ್ದಾರೆ. ಅವರು ಹಿಂದೂ ಪ್ರೇಮಿಗಳಲ್ಲ ಅವರು ಹಿಂದು ಧರ್ಮದ ದ್ರೋಹಿಗಳು. ಹಿಂದೂ ಧರ್ಮದ ಬಗ್ಗೆ ಬಸವಣ್ಣ, ಫುಲೆ, ಅಂಬೇಡ್ಕರ್ ಹಾಗೂ ಇನ್ನಿತರ ಮಹಾನ್ ನಾಯಕರುಗಳು ಹಿಂದೂ ಧರ್ಮದ ಮೇಲೆ ಚರ್ಚೆ ನಡೆಸಿದ್ದಾರೆ ಹಾಗೂ ಇವರು ನಂಬಿರುವ ಹಿಂದೂ ಧರ್ಮದ ಬಗ್ಗೆ ಸಾವಿರಾರು ಪ್ರಶ್ನೆಗಳನ್ನು ಮಾಡಿದ್ದಾರೆ. ಬಹುಶಃ ಅವರೆನಾದ್ರು ಬೇಕಿದ್ದರೆ ಅವರ ಮೇಲೂ ದಾಳಿಗಳನ್ನ ಮಾಡ್ತಾ ಇದ್ರು ಅನಿಸುತ್ತೆ. ಮಂಗಳೂರಿನಲ್ಲೂ ಸಹ ಪಿಣರಾಯಿ ವಿಜಯನ್ ಅವರನ್ನು ಮಂಗಳೂರಿಗೆ ಕಾಲಿಡಿ ನೋಡೋಣ ಎಂದು ಹೆದರಿಸುವ ತಂತ್ರ ಹಾಕಿದ್ರು ಅದನ್ನ ನಾವು ಎದುರಿಸಿದ್ದಿವಿ. ಇವೆಲ್ಲಾ ಮುಂದಿನ ರಾಜಕೀಯಕ್ಕಾಗಿ ಮಾಡ್ತಾ ಇರುವ ತಂತ್ರಗಳು. ಕರ್ನಾಟಕದ ಮೂಲೆ ಮೂಲೆಯಲ್ಲಿರುವ ಸಾಂಸ್ಕೃತಿಕತೆಯನ್ನು ವಿರೋಧಿಸುವ ಕೆಲಸ ಕೋಮುವಾದಿಗಳು ನಡೆಸುತ್ತಿದ್ದಾರೆ. ಹಾಗಾಗಿ ರಾಜ್ಯದ ಯಾವುದೇ ಮೂಲೆಯಲ್ಲಿ ನಮ್ಮ ಸಂಗಾತಿಗಳ ಮೇಲೆ ದಾಳಿ ನಡೆದರೆ ನಾವೆಲ್ಲರೂ ಕೂಡಾ ಪ್ರತಿಕ್ರಿಯೆ ನೀಡೋಣ ಎಂದು ಹೇಳುತ್ತಾ ಕೋಮುವಾದಿ ಶಕ್ತಿಗಳನ್ನ ಹಿಮ್ಮೆಟ್ಟಿಸೋಣ."

ಮತೀಯವಾದಿಗಳ ದಾಳಿಗೊಳಗಾದ ಯೋಗೇಶ್ ಮಾಸ್ಟರ್ ಮಾತನಾಡಿ "ನಿನ್ನಯ ದಾಳಿ ನೆಪ ಮಾತ್ರ. ಹಾಗೇನೇ ನಾನು ಕೂಡಾ ಒಂದು ನೆಪ. ಮಾನವತಾವಾದಿಗಳ ಗುಂಪಿನಲ್ಲಿ ನಾನು ಗುರುತು ಮಾಡಿಕೊಳ್ಳುವುದರಲ್ಲಿ ಹೆಮ್ಮೆ ಆಗುತ್ತಿದೆ. ಹಾಗೆಯೇ ನನ್ನ ಮೇಲೆ ದಾಳಿ ಮಾಡಿದ ಆ ಅಮಾಯಕ ಹುಡಗರನ್ನ ನೋಡಿ ನೋವಾಗುತ್ತಿದೆ. ನನ್ನ ಮೇಲೆ ದಾಳಿ ನಡೆಸುವುದಕ್ಕೆ ಪ್ರೇರೇಪಣೆ ಮಾಡಿದವರನ್ನು ನೋಡಿ ಅಸಹ್ಯವಾಗುತ್ತಿದೆ. ಆ ಅಮಾಯಕ ಹುಡುಗರ ತಲೆಯೊಳಗೆ ಹುಸಿ ಹಿಂದುತ್ವದ ಭಾವನೆಗಳನ್ನು ತುಂಬಿರುವ ಸಂಘ ಪರಿವಾರದವರ ತಂತ್ರಗಳನ್ನು ಖಂಡಿಸಬೇಕಾಗಿದೆ. ನನ್ನ ಮೇಲೆ ದಾಳಿಯನ್ನು ರಾಜ್ಯಾದ್ಯಾಂತ ಖಂಡಿಸಿದ್ದಾರೆ. ಅವರಿಗೆಲ್ಲ ಅಭಿನಂದನೆಗಳು.

ಪ್ರತಿಭಟನೆಯಲ್ಲಿ ಗೌರಿ ಲಂಕೇಶ್, RG ಹಳ್ಳಿ ನಾಗರಾಜ, ನಗರಗೇರೆ ರಮೇಶ್, ಟಿ.ಸುರೇಂದ್ರರಾವ್, KS ವಿಮಲಾ, ಚಿಕ್ಕರಾಜು, ವೇಗಾನಂದ, ರೇಣುಕಾ ಕಹಾರ, ಮಲ್ಲಿಗೆ, ವಡ್ಡಗೇರೆ ನಾಗರಾಜ, ಎನ್,ನಾಗರಾಜ್, ರಾಮಕೃಷ್ಣ, ಶ್ರೀನಿವಾಸ, ಮುತ್ತುರಾಜ್ ಸೇರಿದಂತೆ ಅನೇಕರಿದ್ದರು.

ಪ್ರಾಸ್ಥಾವಿಕವಾಗಿ SFI ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಕೇಂದ್ರ ಸಮಿತಿ ಸದಸ್ಯ ಬಸವರಾಜ ಪೂಜಾರ ಕಾರ್ಯಕ್ರಮವನ್ನು ನಿರ್ವಹಿಸಿದರು. AIDSO ಅಜಯ್ ಕಾಮತ್ ವಂದಿಸಿದರು. KVS ಗೆಳೆಯರು ಕ್ರಾಂತಿಗೀತೆ ಹಾಡಿದರು.

ಕೇಳಿಸಿದ್ದು

ಗುತ್ತಿಗೆ ಪದ್ಧತಿ ಅನೌಪಚಾರಿಕ ಆಗಿರುವುದರಿಂದ ರಾಜ್ಯದಲ್ಲಿ ಈ ಕೃಷಿ ಸಂಬಂಧದ ಸ್ವರೂಪ ಮತ್ತು ಪ್ರಮಾಣದ ಬಗ್ಗೆ ವಿಶ್ವಾಸಾರ್ಹವಾದ ದತ್ತಾಂಶ ಲಭ್ಯ ಇಲ್ಲ. ತನ್ನಲ್ಲಿರುವ ಜಮೀನಿನಲ್ಲಿ ಬೇಸಾಯ ಮಾಡಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಮಾತ್ರ ಹಿಡುವಳಿದಾರ ಅದನ್ನು ಗುತ್ತಿಗೆಗೆ ನೀಡುತ್ತಾನೆ ಎಂಬುದನ್ನು ನಮಗೆ ಲಭ್ಯ ಇರುವ ಪುರಾವೆ ಸ್ಪಷ್ಟಪಡಿಸುತ್ತದೆ.

ಇಂದಿನ ಗ್ರಾಮೀಣ ಕರ್ನಾಟಕದಲ್ಲಿ ನಾವು ಕಾಣುತ್ತಿರುವ ಕೃಷಿ ಸಂಬಂಧಗಳ ಸಂದರ್ಭದಲ್ಲಿ ಪ್ರಸ್ತಾವಿತ ಗುತ್ತಿಗೆ ಕಾನೂನನ್ನು ಇರಿಸಿ ನೋಡಿದರೆ ಅದು ಸಮಾನತೆ ಮತ್ತು ದಕ್ಷತೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ.

ಬಡ ಸಣ್ಣ ಹಿಡುವಳಿದಾರನ ಬದಲಿಗೆ ಶ್ರೀಮಂತ ಗುತ್ತಿಗೆದಾರನಿಗೆ ಶಕ್ತಿ ತುಂಬುವ ರೀತಿಯಲ್ಲಿ ಗುತ್ತಿಗೆ ಪದ್ಧತಿಯನ್ನು ಕಾನೂನುಬದ್ಧಗೊಳಿಸಿದರೆ ಅಸಮಾನತೆ ಕಡಿಮೆಯಾಗುವ ಬದಲಿಗೆ ಹೆಚ್ಚಲಿದೆ

ಗುತ್ತಿಗೆ ನೀಡಿಕೆಯನ್ನು ಅಧಿಕೃತವಾಗಿ ನೋಂದಾಯಿಸಿಕೊಳ್ಳಬೇಕು ಎಂಬ ನಿಯಮ ಜಾರಿಗೆ ಬರುವುದರೊಂದಿಗೆ ಈಗ ಅನೌಪಚಾರಿಕವಾಗಿ ಜಮೀನು ಗುತ್ತಿಗೆ ನೀಡುತ್ತಿರುವವರು ಅದನ್ನು ನಿಲ್ಲಿಸಿಬಿಡಬಹುದು. ಇದು ಬೀಳು ಬಿದ್ದ ಜಮೀನಿನ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬಹುದು. ಕರ್ನಾಟಕದಲ್ಲಿ ಬೀಳು ಬಿದ್ದ ಜಮೀನು ಒಂದು ಮಟ್ಟಿಗೆ ಈಗಾಗಲೇ ಸಮಸ್ಯೆಯಾಗಿ ಕಾಡುತ್ತಿದೆ. ಅದರ ಪ್ರಮಾಣ ಇನ್ನಷ್ಟು ಹೆಚ್ಚಾದರೆ ಈಗಾಗಲೇ ಸಂಕಷ್ಟದಲ್ಲಿರುವ ಬೇಸಾಯ ಕ್ಷೇತ್ರವನ್ನು ಅದು ಇನ್ನಷ್ಟು ಸಂಕಟಕ್ಕೆ ದೂಡಬಹುದು.

– ಪ್ರೊ. ನರೇಂದ್ರ ಪಾಣಿ

(**ಪ್ರಜಾವಾಣಿ – ಮಾರ್ಚ್** 14, 2017)

ಬಂಡವಾಳಶಾಹಿ ಆರ್ಥಿಕತೆ ಮತ್ತು ಜಾಹಿರಾತು ಉದ್ಯಮ



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಜಾಹಿರಾತು ವ್ಯಾಪಾರದ ಅವಿಭಾಜ್ಯ ಅಂಗ. ದುಡಿಯುವ ಜನರ ಮುಂದಾಳತ್ವದಲ್ಲಿ ಸಂಘಟಿತಗೊಂಡ ಸಮಾಜವಾದೀ ಆರ್ಥಿಕತೆಯಲ್ಲಿ ವ್ಯಾಪಾರ ಎಂಬುದು ಕೇವಲ ಸರಕು ಮತ್ತು ಸೇವೆಗಳ ವಿನಿಮಯ ವ್ಯವಸ್ಥೆಯಾಗಿರುತ್ತದೆ. ಅಂಥ ವ್ಯಾಪಾರದಲ್ಲಿ ಜಾಹಿರಾತುಗಳು ಸರಕು ಮತ್ತು ಸೇವೆಗಳ ಬೆಲೆ, ಗುಣಮಟ್ಟ, ಲಭ್ಯತೆ ಮತ್ತು ಅವನ್ನು ಜನರಿಗೆ ಒದಗಿಸುವ ಸಂಸ್ಥೆಗಳ ಬಗ್ಗೆ ಅಗತ್ಯ ಮಾಹಿತಿಯನ್ನು ಕೊಡುವಂಥ ಪ್ರಕಟಣೆಗಳಾಗಿರುತ್ತವೆ.

ನಾವಿರುವ ಬಂಡವಾಳಶಾಹಿ ಆರ್ಥಿಕತೆಯಲ್ಲಿ ವ್ಯಾಪಾರ ಕೇವಲ ಸರಕು-ಸೇವೆಗಳ ವಿನಿಮಯ ವ್ಯವಸ್ಥೆ ಮಾತ್ರ ಅಲ್ಲ. ಜನರ ಗಳಿಕೆಯ ಬಹುಭಾಗವನ್ನು, ಲಾಭ, ಬಡ್ಡಿ, ಬಾಡಿಗೆ ಮತ್ತು ಕಮಿಷನ್‌ಗಳ ರೂಪದಲ್ಲಿ ಉದ್ಯಮಿಗಳು ಮತ್ತು ವ್ಯಾಪಾರಿಗಳಿಗೆ ವರ್ಗಾಯಿಸುವ ಆರ್ಥಿಕ ಚಟುವಟಿಕೆ. ಇದರಲ್ಲಿ ಹಣ ಕೇವಲ ಸರಕು-ಸೇವೆಗಳ ವಿನಿಮಯದ ಮಾಧ್ಯಮವಾಗಿರದೆ, ಬಂಡವಳಿಗರ ಪರವಾಗಿ ಉತ್ಪಾದನೆಯ ಮೌಲ್ಯದ ಮೇಲೆ ಸವಾರಿಮಾಡುವ ವಿಶೇಷ ಸರಕಾಗಿ ಬಳಕೆಯಾಗುತ್ತದೆ. ಅಂದರೆ ಹಣ ಯಾವುದೇ ಸರಕು-ಸೇವೆಯ ವಿನಿಮಯ ಮೌಲ್ಯದ ಅಳತೆಗೋಲು, ಗುಣಮಟ್ಟ, ಲಭ್ಯತೆ ಮತ್ತು ಬೇಡಿಕೆ-ಪೂರೈಕೆಗಳನ್ನು ನಿರ್ಧರಿಸುವ ಅಗೋಚರ ಶಕ್ತಿಯಾಗುತ್ತದೆ. ಹೀಗಾಗಿ ಹಣದ ಉತ್ಪಾದನೆ ಸರಕು-ಸೇವೆಗಳ ಉತ್ಪಾದನೆಗಿಂತ ಹೆಚ್ಚು ಮುಖ್ಯವಾಗುತ್ತದೆ. ಹಣದ ಉತ್ಪಾದನೆ ಮತ್ತು ಹರಿವನ್ನು ನಿಯಂತ್ರಿಸುವ ಸರ್ಕಾರ ಮತ್ತು ರಿಸರ್ವ್ ಬ್ಯಾಂಕು ಬಂಡವಳಿಗರ ಕೈಲೇ ಇರುವವರೆಗೆ ಹಣವೇ ಎಲ್ಲಕ್ಕಿಂತ ಮುಖ್ಯವಾದ ಬದುಕಿನ ಸಾಧನವಾಗಿರುತ್ತದೆ. ವ್ಯಾಪಾರವೇ, ಕೃಷಿ ಉತ್ಪನ್ನಗಳೂ ಸೇರಿದಂತೆ, ಎಲ್ಲ ಉತ್ಪಾದನೆಯನ್ನೂ ನಿಯಂತ್ರಿಸುವ ಆರ್ಥಿಕ ಚಟುವಟಿಕೆಯಾಗಿರುತ್ತದೆ. ಜನರ ಪ್ರತಿಭೆ, ಬುದ್ಧಿವಂತಿಕೆ, ಕ್ರಿಯಾಶೀಲತೆ, ಸೃಜನಶೀಲತೆ, ಕಲೆ-ಸಾಹಿತ್ಯಸೃಷ್ಟಿ, ಸೌಂದರ್ಯಪ್ರಜ್ಞೆ, ನೈತಿಕತೆ, ಸುಖ-ನ್ಯಾಯ-ನೆಮ್ಮದಿಗಳ ಪರಿಕಲ್ಪನೆಗಳು ಸಹ ಹಣವನ್ನು ಆಧರಿಸಿ ರೂಪುಗೊಳ್ಳುತ್ತವೆ. ಅಂಥ ಸಮಾಜದಲ್ಲಿ ಹಣ ಮಾಡುವವರು ಬುದ್ಧಿವಂತರೆಂದೂ, ಹಣವನ್ನು ಕಳೆದುಕೊಳ್ಳುವವರು ದಡ್ಡರೆಂದೂ ಪರಿಗಣಿಸಲ್ಪಡುತ್ತಾರೆ. ಜಾಹಿರಾತು ಸರಕು-ಸೇವೆಗಳ ಬಗೆಗಿನ ಮಾಹಿತಿಗಳ ಪ್ರಕಟಣೆಗೆ ಸೀಮಿತಗೊಳ್ಳದೆ ಜನರ ಅಗತ್ಯಗಳು ಯಾವುವು ಎಂಬುದನ್ನು ತಾನೇ ನಿರ್ಧರಿಸುವ, ನಿರ್ದೇಶಿಸುವ, ಸೃಷ್ಟಿಸುವ ಮತ್ತು ನಿಯಂತ್ರಿಸುವ ವಿಶೇಷ ವ್ಯಾಪಾರವಾಗುತ್ತದೆ.

ಸರಕು-ಸೇವೆಗಳ ಬೆಲೆ ಆಧಾರಿತ ವಿನಿಮಯದಲ್ಲಿ ಮಾರುವವರನ್ನು ವ್ಯಾಪಾರಿಗಳೆಂದೂ, ಕೊಳ್ಳುವವರನ್ನು ಗ್ರಾಹಕರೆಂದೂ ಗುರುತಿಸುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಕೊಳ್ಳುವವರಲ್ಲಿಯೂ 'ಬಳಕೆಗಾಗಿ ಕೊಳ್ಳುವವರು' ಮತ್ತು 'ಮಾರುವುದಕ್ಕಾಗಿ ಕೊಳ್ಳುವವರು' ಎಂಬ ಎರಡು ವಿಧದ ಗ್ರಾಹಕರಿದ್ದಾರೆ ಎಂಬುದನ್ನು ಎಲ್ಲರೂ ಗಮನಿಸುವುದಿಲ್ಲ. ಸರಕು-ಸೇವೆಗಳನ್ನು ಮತ್ತೆ ಮಾರುವುದಕ್ಕಾಗಿ ಕೊಳ್ಳುವ ಗ್ರಾಹಕರು ವ್ಯಾಪಾರಿಗಳೇ. ಮತ್ತೆ ಮಾರದೆ ತಮ್ಮ ಬಳಕೆಗಾಗಿ ಕೊಳ್ಳುವ ಗ್ರಾಹಕರು ಮಾತ್ರ ಬಳಕೆದಾರರು. ವ್ಯಾಪಾರಿಗೆ ಕೊಳ್ಳುವಾಗಲೂ ಲಾಭವಾಗಬೇಕು. ಮಾರುವಾಗಲೂ ಲಾಭವಾಗಬೇಕು. ತನ್ನ ವ್ಯಾಪಾರದ ಅಗತ್ಯಗಳಾದ, ಬಂಡವಾಳ ಹೂಡಿಕೆ, ದಾಸ್ತಾನುವೆಚ್ಚ, ಸಂಚಾರ-ಸಾಗಣೆವೆಚ್ಚ, ಕಟ್ಟಡದ ಬಾಡಿಗೆ, ವೈಯಕ್ತಿಕ ಜೀವನವೆಚ್ಚಗಳು ಮಾತ್ರವಲ್ಲ, ತನ್ನ ವೈಯಕ್ತಿಕ ಆದಾಯ ತೆರಿಗೆ, ವಾಣಿಜ್ಯ ತೆರಿಗೆ, ಜಾಹಿರಾತಿನ ವೆಚ್ಚ ಎಲ್ಲವನ್ನೂ ಸರಕು-ಸೇವೆಗಳ ಮಾರಾಟದ ಬೆಲೆಯಲ್ಲಿ ಸೇರಿಸಿ ಬಳಕೆದಾರನ ಮೇಲೆ ಹೇರುವುದು ಬಂಡವಾಳಶಾಹಿ ವ್ಯಾಪಾರದಲ್ಲಿ ಸರ್ವಸಮ್ಮತವಾದ ಕ್ರಮ. ಅಷ್ಟೇ ಅಲ್ಲ ಗ್ರಾಹಕರ ಪರವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆಯನ್ನೂ ಪೂರ್ಣವಾಗಿ ಸಲ್ಲಿಸದೆ, ಅಲ್ಲೂ ಲಾಭ ಮಾಡಿಕೊಳ್ಳುವ ವ್ಯಾಪಾರ ಬಂಡವಾಳಶಾಹಿ ಆರ್ಥಿಕತೆಯಲ್ಲಿ ಸುಲಭಸಾಧ್ಯ. ಅಂಥ ಲಾಭದ ಒಂದಂಶವನ್ನು ತೆರಿಗೆ ಅಧಿಕಾರಿಗಳಿಗೆ ಲಂಚವಾಗಿ, ರಾಜಕೀಯ ಪಕ್ಷಗಳಿಗೆ ದೇಣಿಗೆಯಾಗಿ ಕೊಟ್ಟು ಕ್ಷೇಮವಾಗಿರುವ ಸೌಲಭ್ಯ ಭಾರತದ ವಾಣಿಜ್ಯ ಪ್ರಪಂಚದಲ್ಲಿ ಎಲ್ಲ ಕಾಲದಲ್ಲೂ ಇದೆ.

ಉದ್ಯಮಿ-ವ್ಯಾಪಾರಿಗಳು ಜಾಹಿರಾತು ಸಂಸ್ಥೆಗಳಿಗೆ ಕೊಡುವ ಅಗಾಧ ಮೊತ್ತದ ಹಣ ವ್ಯಾಪಾರದ ಖರ್ಚು ಎಂದು ಪರಿಗಣಿತವಾಗುವುದರಿಂದ ಅದಕ್ಕೆ ತೆರಿಗೆ ಇಲ್ಲ. ಇದರ ಹೊರೆ ಜನಸಾಮಾನ್ಯ ಬಳಕೆದಾರರು ಮತ್ತು ದುಡಿಮೆಗಾರರ ಮೇಲೆ ಎರಡು ಪಟ್ಟಾಗಿ ಬೀಳುತ್ತಿದೆ. ಒಂದು: ಉದ್ಯಮಿ-ವ್ಯಾಪಾರಿಗಳು ಜಾಹಿರಾತಿನ ವೆಚ್ಚವನ್ನು ಸರಕು-ಸೇವೆಗಳ ಮಾರಾಟದ ಬೆಲೆಯಲ್ಲಿ ಸೇರಿಸುವುದರಿಂದ ಈ ಸಂಬಂಧ ಉದ್ಯಮಿ-ವ್ಯಾಪಾರಿಗಳು ಸರ್ಕಾರದಿಂದ ಪಡೆಯುವ ತೆರಿಗೆ ರಿಯಾಯತಿಯ ಹೊರೆಯನ್ನು ಬಳಕೆದಾರರೇ ಹೊತ್ತುಕೊಂಡಿದ್ದಾರೆ. ಎರಡು: ಸರ್ಕಾರದ ಒಟ್ಟು ಆದಾಯಕ್ಕೆ ಸೇರಬೇಕಾಗಿದ್ದ ಹಣದ ಮೊತ್ತ ಜಾಹಿರಾತು ಖರ್ಚಿನ ತೆರಿಗೆ ರಿಯಾಯಿತಿಯ ಹೆಸರಿನಲ್ಲಿ ಉದ್ಯಮಿ-ವ್ಯಾಪಾರಿಗಳಲ್ಲೇ ಉಳಿಯುವುದರಿಂದ ವಾರ್ಷಿಕ ಆಯ-ವ್ಯಯದ ಮಂಡನೆಯಲ್ಲಿ ತೋರಿಸುವ ವಿತ್ತೀಯ ಕೊರತೆ ಅನವಶ್ಯಕವಾಗಿ ದೊಡ್ಡದಾಗುತ್ತದೆ.

ಆದರೆ ಬಳಕೆದಾರರು ಮಾತ್ರ ವೃತ್ತ ಪತ್ರಿಕೆಗಳೂ ಸೇರಿದಂತೆ ಏನನ್ನು ಕೊಳ್ಳುವಾಗಲೂ ಮಾರುವವರು ಕೇಳಿದಷ್ಟನ್ನು ಕೊಡಲೇಬೇಕು. ಕೊಂಡದ್ದರಲ್ಲಿ ಬಳಸಿ ಉಳಿದದ್ದನ್ನು ಅಥವಾ ಹಳತಾದದ್ದನ್ನು ಮಾರುವಾಗ, ಅವನ್ನು ಕೊಳ್ಳುವ ವ್ಯಾಪಾರಿಯ ಕೊಟ್ಟಷ್ಟನ್ನು ಪಡೆದು ತೃಪ್ತರಾಗಬೇಕು. ಬಳಕೆದಾರರು ಕೊಳ್ಳುವಾಗ ಚಿನ್ನ-ಬೆಳ್ಳಿಯ ಆಭರಣ, ವೃತ್ತಪತ್ರಿಕೆ-ನಿಯತಕಾಲಿಕೆಗಳಿಗೆ ಕೊಡುವ ಬೆಲೆಯನ್ನು ಬಳಸಿದ ಚಿನ್ನ-ಬೆಳ್ಳಿಯ ಆಭರಣಗಳು, ರದ್ದಿಕಾಗದವನ್ನು ಮಾರುವಾಗ ಬಳಕೆದಾರರಿಗೆ ಸಿಗುವ ಬೆಲೆಗೆ ಹೋಲಿಸಿದರೆ ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ, ಬಳಕೆದಾರರು ಹೊಸದಾಗಿ ಕೊಳ್ಳಲಿ ಅಥವಾ ಹಳತನ್ನು ಮಾರಲಿ ಅವರು ಕಳೆದುಕೊಳ್ಳುವುದು ಹೆಚ್ಚು, ಪಡೆದುಕೊಳ್ಳುವುದು ಕಡಿಮೆ.

ಪ್ರತ್ಯಕ್ಷ ಪರೋಕ್ಷ ತೆರಿಗೆ

ಸರ್ಕಾರವೆಂದರೆ ಜನರು ತಮ್ಮ ಉದ್ಯೋಗ, ಶಿಕ್ಷಣ, ಆರೋಗ್ಯ, ನೀರು ಮತ್ತು ಆಹಾರಗಳ ಪೂರೈಕೆಯನ್ನು ಸಂಘಟಿಸಿ ನಿಯಂತ್ರಿಸಲು ಮಾಡಿಕೊಂಡಿರುವ ಏರ್ಪಾಡು. ಇದು ಚಲಾಯಿಸುವ ಅಧಿಕಾರ ಜನರು ಕೊಟ್ಟಿದ್ದು. ಇದರ ಬಳಕೆ ಜನರ ಒಳಿತಿಗಾಗಿ. ಈ ಏರ್ಪಾಡಿನ ಖರ್ಚು-ವೆಚ್ಚಗಳನ್ನು ನಿಭಾಯಿಸಲು ಜನರು ತಮ್ಮ ಗಳಿಕೆಯ ಒಂದು ಭಾಗವನ್ನು ಸರ್ಕಾರಕ್ಕೆ ಕೊಡುತ್ತಾರೆ. ಅದೇ ತೆರಿಗೆ. ಬಳಕೆದಾರರು ತಮ್ಮ ಆದಾಯದ ಮೇಲೆ ಕೊಡುವ ನೇರ ತೆರಿಗೆಯನ್ನಲ್ಲದೆ ಸರಕು ಮತ್ತು ಸೇವೆಗಳನ್ನು ಕೊಳ್ಳುವಾಗ ನಾನಾ ರೂಪದ ಪರೋಕ್ಷ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತಾರೆ. ಅದರಲ್ಲಿ ಸರ್ಕಾರವು ಜನರ ಹೆಸರಿನಲ್ಲಿ ಮಾಡುವ ದೇಶೀಯ ಮತ್ತು ಜಾಗತಿಕ ಸಾಲಗಳ ಮರುಪಾವತಿ, ಬಡ್ಡಿಗಳ ವೆಚ್ಚವೂ ಸೇರಿರುತ್ತದೆ. ಸಾಲಮಾಡುವ ಸರ್ಕಾರಗಳನ್ನು ಬಳಕೆದಾರರಾದ ಜನರು ಚುನಾಯಿಸಿದ್ದಾರೆಂಬ ಒಂದೇ ಕಾರಣಕ್ಕಾಗಿ ಈ ಸಾಲಗಳ ಅಗತ್ಯ, ಅನಿವಾರ್ಯತೆ, ಬಡ್ಡಿಯ ದರ ಮತ್ತು ಸಾಲಗಾರರು ವಿಧಿಸುವ ಶರತ್ತುಗಳ ಮೇಲೆ ಜನರಿಗೆ ಯಾವ ನಿಯಂತ್ರಣವೂ ಇಲ್ಲ.

ನೇರ ತೆರಿಗೆಯಲ್ಲಿ ಬಳಕೆದಾರರ ನಿಗದಿತ ಮೊತ್ತಕ್ಕಿಂತ ಕೆಳಗಿನ ಆದಾಯಕ್ಕೆ, ನಿರ್ದಿಷ್ಟ ಶರತ್ತುಗಳಿಗೊಳಪಟ್ಟು ಕೆಲವು ರಿಯಾಯಿತಿಗಳು ದೊರೆಯುತ್ತವೆ. ಆದರೆ ಪರೋಕ್ಷ ತೆರಿಗೆಯಲ್ಲಿ ಅಂಥಾ ಯಾವುದೇ ರಿಯಾಯಿತಿಗಳಿಲ್ಲ.

ಬಳಕೆದಾರ-ತೆರಿಗೆದಾರರಿಗೆ ಹೋಲಿಸಿದರೆ ವ್ಯಾಪಾರಿ-ತೆರಿಗೆದಾರರಿಗೆ ಸರ್ಕಾರ ಕೊಡುವ ತೆರಿಗೆ ವಿನಾಯಿತಿಗಳು ಸಂಖ್ಯೆಯಲ್ಲೂ, ಮೌಲ್ಯದಲ್ಲೂ ಅತಿ ಹೆಚ್ಚು. ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ವೃದ್ಧಿಸುವುದಕ್ಕಾಗಿ ಮಾಡುವ ಎಲ್ಲ ಖರ್ಚುಗಳನ್ನೂ ಅವರ ಒಟ್ಟು ಆದಾಯದಲ್ಲಿ ಕಳೆದು ಉಳಿದಿದ್ದಕ್ಕೆ ಮಾತ್ರ ತೆರಿಗೆಕೊಟ್ಟರೆ ಸಾಕು. ಇದಲ್ಲದೆ ಹೊಸದಾಗಿ ಪ್ರಾರಂಭಿಸುವ ಉದ್ಯಮಗಳಿಗೆ ಭೂಮಿ, ನೀರು, ವಿದ್ಯುತ್ ಮುಂತಾದ ಮೂಲ ಸೌಲಭ್ಯಗಳನ್ನು ಪುಕ್ಕಟೆಯಾಗಿ, ಅಥವಾ ನಂಬಲಸಾಧ್ಯವೆನಿಸುವಷ್ಟು ಕಡಿಮೆ ಬೆಲೆಯಲ್ಲಿ ಜನರಿಂದ ಚುನಾಯಿತವಾದ ಸರ್ಕಾರ ಒದಗಿಸುತ್ತದೆ. ಅತ್ಯಂತ ಕಡಿಮೆ ಬಡ್ಡಿಯಲ್ಲಿ ಕೋಟ್ಯಾಂತರ ರೂ. ಸಾಲ ಸೌಲಭ್ಯ ಸಿಗುವಂತೆ ನೋಡಿಕೊಳ್ಳುತ್ತದೆ. ಕೋಟ್ಯಾಂತರ ರೂ. ಮೌಲ್ಯದ ತೆರಿಗೆಗಳನ್ನು ಮನ್ನಾ ಮಾಡುತ್ತದೆ. ಉದ್ಯಮಿಗಳು ಪಡೆದ ಸಾಲವನ್ನು ಮರುಪಾವತಿಸದೆ ಸುಸ್ತಿದಾರರಾದರೆ ಆ ಹಣವನ್ನು ಬ್ಯಾಂಕುಗಳು ತಮ್ಮ ಒಟ್ಟು ಆಯದ ಲೆಕ್ಕದಿಂದ ಕೈಬಿಡುತ್ತಾರೆ.

ದುಡಿಮೆಗಾರರು ಮತ್ತು ರೈತರೂ ಸೇರಿದಂತೆ ಬಳಕೆದಾರರಿಗೆ ಈ ಯಾವ ಸೌಲಭ್ಯಗಳಾಗಲಿ, ರಿಯಾಯತಿಗಳಾಗಲಿ ಇಲ್ಲ. ಬಳಕೆದಾರರು ಮಾಡುವ ಸೀಮಿತ ಮೌಲ್ಯದ ಉಳಿತಾಯಕ್ಕೆ ಷರತ್ತಿಗೊಳಪಟ್ಟ ತೆರಿಗೆ ವಿನಾಯತಿ ಇದೆ. ಆದರೆ ಖರ್ಚಿಗೆ ಅವರ ಆದಾಯ ತೆರಿಗೆಯಲ್ಲಿ ಯಾವ ರಿಯಾಯಿತಿಯೂ ಇಲ್ಲ. ಆದರೆ ಉದ್ಯಮಿ-ಮಾರಾಟಗಾರರು ಅವರ ವ್ಯಾಪಾರವೃದ್ಧಿಗಾಗಿ ಮಾಡುವ ಎಲ್ಲ ಖರ್ಚುಗಳಿಗೂ ತೆರಿಗೆ ವಿನಾಯಿತಿ ಇದೆ.

ಉದ್ಯಮಿ-ವ್ಯಾಪಾರಿಗಳು ಜಾಹಿರಾತು ಸಂಸ್ಥೆಗಳಿಗೆ ಕೊಡುವ ಅಗಾಧ ಮೊತ್ತದ ಹಣ ವ್ಯಾಪಾರದ ಖರ್ಚು ಎಂದು ಪರಿಗಣಿತವಾಗುವುದರಿಂದ ಅದಕ್ಕೆ ತೆರಿಗೆ ಇಲ್ಲ. ಜಾಹಿರಾತು ಸಂಸ್ಥೆಗಳು ಮಾಡುವುದೂ ವ್ಯಾಪಾರವೇ. ಅವರು ತಮ್ಮ ವ್ಯಾಪಾರದ ವೃದ್ಧಿಗೆಂದು ಮಾಡಿದ ಖರ್ಚೆಂದು ಲೆಕ್ಕ ಕೊಡುವ ಆದಾಯಕ್ಕೂ ತೆರಿಗೆ ಇಲ್ಲ. ಇಷ್ಟು ಸಾಲದೆಂಬಂತೆ ವ್ಯಾಪಾರಿ-ಉದ್ಯಮಿಗಳು ದೇಶ-ವಿದೇಶಗಳಲ್ಲಿ, ತಮ್ಮ ವೈಯಕ್ತಿಕ, ಐಷಾರಾಮಿ ಪ್ರವಾಸಕ್ಕೆಂದು ಮನಸೋಇಚ್ಛೆ ಮಾಡುವ ಲಕ್ಷಾಂತರ ರೂಗಳ ಖರ್ಚುಗಳನ್ನೂ ವ್ಯಾಪಾರವೃದ್ಧಿಯ ಖರ್ಚೆಂದು ತೋರಿಸಿ ತೆರಿಗೆ ವಿನಾಯಿತಿ ಪಡೆಯಲು ಪ್ರಯತ್ನಿಸುತ್ತಾರೆ. ಭ್ರಷ್ಟ ಅಧಿಕಾರಿಗಳಾದರೆ ತೆರಿಗೆ ವಿನಾಯತಿಯು ಅನಾಯಾಸವಾಗಿ ಸಿಗುತ್ತದೆ. ಅಥವಾ ಅಧಿಕಾರಿಗಳೇ ತೆರಿಗೆ ತಪ್ಪಿಸುವ ಒಳದಾರಿಗಳನ್ನು ತೋರಿಸುತ್ತಾರೆ. ಅದಾಗದಿದ್ದರೆ ವಕೀಲರ ಸಹಾಯದಿಂದ ಕಾನೂನುವ್ಯಾಜ್ಯಗಳಲ್ಲಿ ಕಾಲಹರಣ ಮಾಡಿ ತೆರಿಗೆಯಾಗಿ ಕೊಡಬೇಕಾದ ಹಣವನ್ನೂ ವ್ಯಾಪಾರದಲ್ಲಿ ತೊಡಗಿಸುತ್ತಾರೆ. ವ್ಯಾಜ್ಯ ತೀರ್ಮಾನವಾಗುವ ಹೊತ್ತಿಗೆ ಸಲ್ಲಿಸಬೇಕಾಗಿದ್ದ ಮೊತ್ತದ ಅನೇಕಪಟ್ಟನ್ನು ಲಾಭವಾಗಿ ಪಡೆದಿರುತ್ತಾರೆ. ವಕೀಲರ ಖರ್ಚನ್ನೂ ಅದರಿಂದಲೇ ಸರಿದೂಗಿಸುತ್ತಾರೆ.



ಜಾಹಿರಾತು ಉದ್ದಿಮೆ

ಸಮಾಜವಾದೀ ಆರ್ಥಿಕತೆಯಲ್ಲಿ ಸರ್ಕಾರ ಜನರ ಪರವಾಗಿ ದೇಶದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಅವಕ್ಕೆ ಜನರು ಕೊಡುವ ತೆರಿಗೆಗಳನ್ನು ಸೇರಿಸಿ ಜನರ ಜೀವನಮಟ್ಟವನ್ನು ಸುಧಾರಿಸುವಂಥ ಯೋಜನೆಗಳಿಗಾಗಿ ಖರ್ಚುಮಾಡುತ್ತದೆ. ಇದನ್ನೇ ದೇಶದ ಅಭಿವೃದ್ಧಿ ಎನ್ನುವುದು. ಆದರೆ ಬಂಡವಾಳವಾದೀ ಆರ್ಥಿಕತೆಯಲ್ಲಿ ಸರ್ಕಾರ ಜನರ ಹೆಸರನ್ನು ಹೇಳಿ, ಬಂಡವಳಿಗರ ಹಿತವನ್ನು ಕಾಯುವಂತೆ 'ಅಭಿವೃದ್ಧಿ'ಯನ್ನು ಕೈಗೊಳ್ಳುತ್ತದೆ. ಜನರಿಂದ ಚುನಾಯಿತರಾದರೂ ದೇಶದ ಅಭಿವೃದ್ಧಿಯಲ್ಲಿ ಜನರ ಪ್ರತಿನಿಧಿ ಸಂಸ್ಥೆಯಾಗದೆ, ಬಂಡವಳಿಗರ ಪ್ರತಿನಿಧಿಯಾಗಿ, ಕೈಗೊಂಬೆಯಾಗಿ, ಏಜೆಂಟರಾಗಿ ಕಾರ್ಯ ನಿರ್ವಹಿಸುತ್ತದೆ. ಜಾಗತೀಕರಣೋತ್ತರ ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಾಂತ್ರಿಕವಾಗಿ ಜನರಿಂದಲೇ ಚುನಾಯಿತಗೊಂಡಿದ್ದರೂ ವಾಸ್ತವದಲ್ಲಿ ಬೆರಳೆಣಿಕೆಯ ಬಂಡವಳಿಗರ ಪಾರುಪತ್ತೆಗಾರರಾಗಿ ಕೆಲಸಮಾಡುತ್ತಿವೆ. ಕೆಲವು ಸಂದರ್ಭಗಳಲ್ಲಿ ಉದ್ಯಮಿ-ವ್ಯಾಪಾರಿಗಳೇ ನೇರವಾಗಿ ಜನಪ್ರತಿನಿಧಿಗಳಾಗಿ ಚುನಾಯಿತರಾಗಿ ಸರ್ಕಾರವನ್ನು ರಚಿಸಿದ್ದಾರೆ. ಬಂಡವಳಿಗರ ಹಿತಕಾಯುವ ಅಧಿಕಾರಿ, ವಕೀಲ ಮತ್ತು ನ್ಯಾಯಾಧೀಶರ ಕೂಟವನ್ನು ರಚಿಸಿಕೊಂಡು ಆಡಳಿತ ನಡೆಸುತ್ತಿದ್ದಾರೆ.

ಕಳೆದ 30 ವರ್ಷಗಳಲ್ಲಿ ಭಾರತದ ಆರ್ಥಿಕತೆಯಲ್ಲಿ ಜಾಹಿರಾತು ಉದ್ದಿಮೆ-ವ್ಯಾಪಾರ ಗಣನೀಯವಾಗಿ ಬೆಳೆದಿದೆ. ಜಾಹಿರಾತೆಂದರೆ ಬದುಕಲು ಅನಗತ್ಯವಾದ ಸರಕು-ಸೇವೆಗಳನ್ನು ಅಗತ್ಯವೆಂದು ನಂಬಿಸುವ ಪ್ರಚಾರ ಎಂಬ ಹಳೆಯ ನಿರ್ವಚನೆ ಈಗ ಬದಲಾಗಿದೆ. ಯಾವುದನ್ನೆಲ್ಲಾ ಬದುಕಿನ ಅಗತ್ಯಗಳೆಂದು, ಪ್ರತಿಷ್ಠಿತ ಜೀವನದ ಪೂರ್ವಾಗತ್ಯಗಳೆಂದು ಜಾಹಿರಾತು ಉದ್ಯಮಿಗಳು ಸರಕು-ಸೇವೆಗಳ ಉದ್ಯಮಿ-ವ್ಯಾಪಾರಿಗಳ ಪರವಾಗಿ ಪ್ರಚಾರ ಮಾಡುತ್ತಾರೋ ಅವೆಲ್ಲವೂ ಆಧುನಿಕ ಜೀವನದ ಅಗತ್ಯಗಳಾಗಿ ಮಾರ್ಪಟ್ಟಿವೆ. 2016ರಲ್ಲಿ ಸುಮಾರು 51 ಸಾವಿರ ಕೋಟಿ ಎಂದು ಅಂದಾಜಿಸಲಾದ ಜಾಹೀರಾತು ಉದ್ಯಮ ವಾರ್ಷಿಕವಾಗಿ ಶೇ. 16 (ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರಗಳಲ್ಲಿ ಒಂದು) ದರದಲ್ಲಿ ಬೆಳೆಯುತ್ತಿದೆ. ಇದು ಒಟ್ಟು ಜಿಡಿಪಿಯ ಶೇ. 0.4 ಪಾಲು ಹೊಂದಿದೆ.


ಪ್ರಮುಖ ನಗರಗಳಲ್ಲಿ ದೊಡ್ಡ ದೊಡ್ಡ ಫಲಕಗಳಲ್ಲಿ, ಬಣ್ಣ ಬಣ್ಣದ ಬೆಳಕುಗಳಲ್ಲಿ ಕಣ್ಣಿಗೆ ರಾಚುತ್ತಿದ್ದ ಜಾಹಿರಾತುಗಳು ಈಗ ಎಲ್ಲೆಂದರಲ್ಲಿ ಜಾಗಪಡೆದಿವೆ. ಖಾಲಿನಿವೇಶನ, ಕಟ್ಟಡ, ಗೋಡೆ, ಲೈಟುಕಂಬ, ವಾಹನಗಳು ಎಲ್ಲಿ ನೋಡಿದರೂ ಜಾಹಿರಾತುಗಳೇ. ವೃತ್ತ ಪತ್ರಿಕೆ-ನಿಯತಕಾಲಿಕೆಗಳ ಒಳಪುಟ, ಹಿಂಪುಟಗಳಲ್ಲಿ, ವಿಶೇಷ ಸಂಚಿಕೆ, ಸ್ಮರಣ ಸಂಚಿಕೆಗಳ ನಿಯಮಿತ ಸ್ಥಳಾವಕಾಶಗಳಲ್ಲಿ ಮಾತ್ರ ಪ್ರಕಟವಾಗುತ್ತಿದ್ದ ಜಾಹಿರಾತುಗಳು ಈಗ ಮುಖಪುಟವನ್ನೇ ಆಕ್ರಮಿಸುವಷ್ಟು ಬಲ ಪಡೆದಿವೆ. ಜನಪ್ರಿಯ ಪತ್ರಿಕೆಗಳ ಶೇಕಡ 45 ಭಾಗ ಜಾಹಿರಾತುಗಳಿಗೆಂದೇ ಬಳಕೆಯಾಗುತ್ತಿದೆ. ಅತ್ಯಧಿಕ ಪ್ರಸಾರ ಹೊಂದಿರುವ ಪತ್ರಿಕೆಗಳಲ್ಲಿ ಮೊದಲು ಜಾಹಿರಾತಿಗೆ ಜಾಗಕೊಟ್ಟು ಉಳಿದ ಸ್ಥಳವನ್ನು ಮಾತ್ರ ಸುದ್ದಿ ಪ್ರಕಟಣೆಗೆ ಬಳಸಬೇಕೆಂದು ಮಾಲೀಕರು ತಾಕೀತು ಮಾಡುತ್ತಿದ್ದಾರೆ. ಮಾರುಕಟ್ಟೆ, ಅಂಗಡಿ-ಮುಂಗಟ್ಟು ಮತ್ತು ಹಾದಿ-ಬೀದಿಗಳಿಗೆ ಸೀಮಿತವಾಗಿದ್ದ ಸರಕು-ಸೇವೆಗಳ ವ್ಯಾಪಾರವನ್ನು ಮನೆಯೊಳಕ್ಕೇ ನುಗ್ಗಿಸಿರುವ ಟೀವಿ ವಾಹಿನಿಗಳನ್ನು ಜಾಹಿರಾತುಗಳ ಮೂಲಕ ಉದ್ಯಮಿ-ವ್ಯಾಪಾರಿಗಳು ತಮ್ಮ ತೆಕ್ಕೆಗೆ ತೆಗೆದುಕೊಂಡು ತಮ್ಮ ಹಿತಾಸಕ್ತಿಯನ್ನು ಆರ್ಥಿಕವಾಗಿ ಮಾತ್ರವಲ್ಲ, ರಾಜಕೀಯವಾಗಿಯೂ ಬೆಂಬಲಿಸುವಂಥ ಜನಾಭಿಪ್ರಾಯವನ್ನು ಸೃಷ್ಟಿಸುತ್ತಿದ್ದಾರೆ. ಜನಸಮುದಾಯದ ವಿರಾಮವನ್ನು ಬೆರಳೆಣಿಕೆಯ ಉದ್ಯಮಿಗಳ ಕೇಂದ್ರೀಕೃತ ನಿಯಂತ್ರಣಕ್ಕೆ ಒಳಪಡಿಸಲು ಜಾಲತಾಣಗಳು ಮತ್ತು

ಪುಟ 11 ಕ್ಕೆ

ಆಪತ್ತಿನ ಮುನ್ಸೂಚನೆ ನೀಡಿರುವ ಉತ್ತರ ಪ್ರದೇಶ ತೀರ್ಪು



ಉತ್ತರ ಪ್ರದೇಶದಲ್ಲಿ ಬಿಜೆಪಿ ಗೆಲವು, ಲೋಕಸಭೆ ಚುನಾವಣೆಗಳ ನಂತರ ಆರಂಭವಾದ ಬಲಪಂಥೀಯ ಆಕ್ರಮಣದ ಮುಂದುವರಿಕೆಯನ್ನು ಸಂಕೇತಿಸುತ್ತದೆ. ಈಗ ನವ-ಉದಾರವಾದ ಮತ್ತು ಹಿಂದುತ್ವದ ಬೆಸುಗೆ ಇನ್ನಷ್ಟು ಗಟ್ಟಿಗೊಳ್ಳಲಿದೆ. ಜಾತ್ಯತೀತ ಮೌಲ್ಯಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿಗಳು ಹೆಚ್ಚಲಿವೆ. ಇದನ್ನು ಎದುರಿಸಲು ಒಂದು ಸ್ಪಷ್ಟ ಪರ್ಯಾಯ ರಾಜಕೀಯ ಮತ್ತು ಸೈದ್ಧಾಂತಿಕ ವೇದಿಕೆ ರೂಪಿಸುವುದು ಅಗತ್ಯ . ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದು ಪರ್ಯಾಯ ಕಾರ್ಯಕ್ರಮದ ಸುತ್ತ ಒಗ್ಗೂಡಿಸುವುದು, ಅದಕ್ಕಾಗಿ ಎಲ್ಲಾ ಸಾಮೂಹಿಕ ಸಂಘಟನೆಗಳು, ಪ್ರಜಾಸತ್ತಾತ್ಮಕ ಸಂಘಟನೆಗಳು ಮತ್ತು ಸಾಮಾಜಿಕ ಚಳವಳಿಗಳ ಐಕ್ಯತೆಯನ್ನು ಕಟ್ಟುವುದು ತುರ್ತು ಅಗತ್ಯವಾಗಿದೆ.



ಪ್ರಕಾಶ್ ಕಾರಟ್

ಉತ್ತರ ಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆ ಭಾರತೀಯ ಜನತಾ ಪಕ್ಷಕ್ಕೆ ಅಭೂತಪೂರ್ವ ವಿಜಯುವನ್ನು ತಂದು ಕೊಟ್ಟಿದೆ. ತನ್ನ ಸಣ್ಣ ಪುಟ್ಟ ಮಿತ್ರಪಕ್ಷಗಳ ಜತೆಗೂಡಿ ಬಿಜೆಪಿ ಒಟ್ಟು 403 ಸ್ಥಾನಗಳ ಪೈಕಿ 325ರಲ್ಲಿ ಗೆಲವು ಸಾಧಿಸಿದೆ ಹಾಗೂ ಶೇಕಡಾ 41.4 ಮತಗಳನ್ನು ಪಡೆದಿದೆ. ಇದು 2014ರ ಲೋಕಸಭೆ ಚುನಾವಣೆಗಳಲ್ಲಿ ಅದು ಗಳಿಸಿದ ಶೇಕಡಾವಾರು ಮತಗಳಿಗಿಂತ ಸ್ವಲ್ಪ ಕಡಿಮೆ.

ಬಿಜೆಪಿಗೆ ಎದುರಾಗಿ ಒಂದು ಸ್ಪಷ್ಟವಾದ ರಾಜಕೀಯ ವೇದಿಕೆಯನ್ನು ಮತ್ತು ಪರ್ಯಾಯವನ್ನು ರೂಪಿಸಬೇಕಾದರೆ ಬಿಜೆಪಿ ಹೇಗೆ ಇಂಥ ಯಶಸ್ಸನ್ನು ಸಾಧಿಸಿತು ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಮಹತ್ವದ್ದಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಮತ್ತು ರಾಜಕೀಯ ವಿಶ್ಲೇಷಕರಿಂದ ಹಲವು ವಿಚಾರಗಳು ಬಂದಿವೆ. ಭಾರತದ ರಾಜಕೀಯ ರಚನೆಯಲ್ಲೇ ಒಂದು ಭಾರೀ ಪಲ್ಲಟ ಉಂಟಾಗಿದೆ; ಇಂದಿರಾ ಗಾಂಧಿ ಶೈಲಿಯಲ್ಲಿ ಮೋದಿ ಹೊಸ ಜನನಾಯಕರಾಗಿ ಹೊರಹೊಮ್ಮಿದ್ದಾರೆ; ಹೇಗೆ ಬಡವರ-ಪರ ನಾಯಕನೆಂಬ ಪಟ್ಟವನ್ನು ತಮ್ಮದಾಗಿಸಿಕೊಂಡಿದ್ದಾರೆ ಮತ್ತು ಮೋದಿ ಹಾಗೂ ಬಿಜೆಪಿ ಜಾತಿ ಆಧರಿತ ರಾಜಕಾರಣವನ್ನು ಹೇಗೆ ನಿರರ್ಥಕಗೊಳಿಸಿದ್ದಾರೆ ಇತ್ಯಾದಿ ಇತ್ಯಾದಿಯಾಗಿ ವಿಶ್ಲೇಷಣೆಗಳನ್ನು ಮಾಡಲಾಗುತ್ತಿದೆ.

ಈ ಪೈಕಿ ಬಹುತೇಕ ವಿಶ್ಲೇಷಣೆಗಳು ಬಿಜೆಪಿಯ ಚುನಾವಣಾ ಯಶಸ್ಸಿಗೆ ಕಾರಣವಾದ ಅಂಶಗಳನ್ನು ಉತ್ಪ್ರೇಕ್ಷಿಸುತ್ತಿವೆ ಅಥವಾ ವಿರೂಪಗೊಳಿಸುತ್ತಿವೆ. ಕೆಲವು ವಿಶ್ಲೇಷಣೆಗಳಂತೂ ಕೋಮುವಾದಿ ಕ್ರೋಡೀಕರಣವನ್ನು ಉಪೇಕ್ಷಿಸಿವೆ ಅಥವ ಅದಕ್ಕೆ ಸಾಕಷ್ಟು ಗಮನ ಕೊಡುತ್ತಿಲ್ಲ, ಇನ್ನು ಕೆಲವು ಮೋದಿಯ ವ್ಯಕ್ತಿಪೂಜೆ ಕಟ್ಟಿ ಬೆಳೆಸಲೆಂದು ಬರೆದಂತಿವೆ.

ನರೇಂದ್ರ ಮೋದಿ ಮತ್ತು ಅಮಿತ್ ಷಾ ಜೋಡಿಗೆ ಲೋಕಸಭಾ ಚುನಾವಣೆಯ ವಿಜಯದ ಪ್ರಮಾಣ ಮತ್ತು ತೀವ್ರತೆಯನ್ನು ಪುನರಾವರ್ತಿಸಲು ಸಾಧ್ಯವಾಗಿರುವುದು ಹಿಂದೂ ಕೋಮುವಾದಿ ಕ್ರೋಡೀಕರಣ ಮತ್ತು ಜೊತೆಗೆ ಒಂದು ಕೋಮುವಾದಿ ರಾಷ್ಟ್ರೀಯವಾದದ ಲೇಪನದ ವ್ಯಾಪಕ ಜಾತಿ ಮೈತ್ರಿಯ ಬೆಸುಗೆ ಈ ಬಾರಿ ಕೂಡ ಕೆಲಸ ಮಾಡಿದೆ ಎನ್ನುವುದನ್ನು ತೋರಿಸುತ್ತದೆ. ಮೋದಿ ಅಭಿವೃದ್ಧಿ ತೋರಿಸಬಲ್ಲ ಒಬ್ಬ ಪ್ರಬಲ ಹಿಂದೂ ರಾಷ್ಟ್ರೀಯವಾದಿ ನಾಯಕನೆಂಬ ಆಕರ್ಷಣೆಯನ್ನು ಈಗಲೂ ಉಳಿಸಿಕೊಂಡಿದ್ದಾರೆ. ಆದರೆ ಈ ಕೊನೆಯ ಅಂಶವು ಬಹುಸಂಖ್ಯಾತವಾದಿ ಆಕರ್ಷಣೆಯ ಲೇಪವನ್ನು ಹೊಂದಿದೆ.

ಮೇ 2014ರ ಲೋಕಸಭೆ ಚುನಾವಣೆಯ ಪೂರ್ವದಲ್ಲಿ ಒಂದುವರೆ ವರ್ಷ ಕಾಲ ಉತ್ತರ ಪ್ರದೇಶದ ಅನೇಕ ಭಾಗಗಳಲ್ಲಿ ಕೋಮು ಗಲಭೆಗಳಾದವು. ಅವು ಸಪ್ಟಂಬರ್ 2013ರ ಮುಜಫರ್‌ನಗರದ ಗಲಭೆಗಳಲ್ಲಿ ಪರ್ಯಾವಸಾನಗೊಂಡವು. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಕೋಮು ಧ್ರುವೀಕರಣ ಮುಂದುವರಿಯಿತು. ಅದೀಗ ಈ ವಿಧಾನಸಭೆ ಚುನಾವಣೆಗಳಲ್ಲಿ ಕೂಡ ವ್ಯಕ್ತಗೊಂಡಿದೆ. ಜಾಟ್ ಸಮುದಾಯದವರು ಬಿಜೆಪಿ ಕೈಬಿಟ್ಟಿರುವುದರಿಂದ ಕೋಮುವಾದಿ ವಿಭಜನೆ ದುರ್ಬಲಗೊಳ್ಳುತ್ತದೆ ಎಂಬ ಕೆಲವು ಭವಿಷ್ಯವಾಣಿಗಳು ಹುಸಿಯಾಗಿವೆ. ಯಾಕೆಂದರೆ ಬಹುತೇಕ ಪಶ್ಚಿಮ ಉತ್ತರ ಪ್ರದೇಶವನ್ನು ಒಳಗೊಂಡ ಮೊದಲ ಎರಡು ಹಂತಗಳ ಒಟ್ಟು 140 ಸ್ಥಾನಗಳಲ್ಲಿ ಬಿಜೆಪಿ 116ರಲ್ಲಿ ಜಯ ಗಳಿಸಿದೆ.

ಮೇಲ್ಜಾತಿಗಳು, ಯಾದವೇತರ ಇತರೆ ಹಿಂದುಳಿದ ವರ್ಗಗಳು (ಓಬಿಸಿ) ಮತ್ತು ಜಾಟವೇತರ ಪರಿಶಿಷ್ಟ ಜಾತಿಗಳ ಜಾತಿ ಲೆಕ್ಕಾಚಾರದಲ್ಲಿ ಹಿಂದೂ ಮತಗಳ ಕ್ರೋಡೀಕರಣದಿಂದಾಗಿ ಎಲ್ಲಾ ಹಂತಗಳಲ್ಲಿನ ಚುನಾವಣೆಗಳಲ್ಲಿ ಬಿಜೆಪಿ ಈ ಭರ್ಜರಿ ಜಯವನ್ನು ಗಳಿಸಲು ಕಾರಣವಾಯಿತು.

ಲೋಕಸಭೆ ಚುನಾವಣೆಗಳಲ್ಲಿ ಮಾಡಿದಂತೆ, ಅಥವಾ ಅದಕ್ಕೂ ಹೆಚ್ಚಿನ ಧಾರ್ಷ್ಟ್ಯದಿಂದ ಮೋದಿ-ಷಾ ಜೋಡಿ ಕೋಮುವಾದಿ ಶಬ್ದಾಡಂಬರದ ಪ್ರದರ್ಶನದಲ್ಲಿ ತೊಡಗಿದರು- ಕಬರಿಸ್ತಾನ ಮತ್ತು ಸ್ಮಶಾನದ ಮಾತುಗಳು ಬಂದವು, ಪ್ರತಿಪಕ್ಷಗಳಿಗೆ 'ಕಸಬ್' ಎಂಬ ಹಣೆಪಟ್ಟಿ ಹಚ್ಚಲಾಯಿತು. ಮೋದಿ ಭರವಸೆ ನೀಡಿದ 'ವಿಕಾಸ' ಕೂಡ ಕೋಮುವಾದಿ ಅರ್ಥಗಳನ್ನು ಹೊಮ್ಮಿಸಿದವು- ವಿದ್ಯುತ್ ಸರಬರಾಜಿನಲ್ಲಿ ಮುಸ್ಲಿಂ ಪ್ರದೇಶಗಳ ಪರ ಪಕ್ಷಪಾತವಿದೆ ಎಂಬ ಪ್ರಚಾರ ನಡೆಯಿತು. ಅಭಿವೃದ್ಧಿ ವಿಚಾರದಲ್ಲಿ ಈ ರೀತಿಯ ಓಲೈಕೆ ಬಿಜೆಪಿ ಆಡಳಿತದಲ್ಲಿ ನಿಲ್ಲಿಸಲಾಗುವುದು ಎಂಬ ಆಶ್ವಾಸನೆ ಇದಾಗಿತ್ತು.

ಎಸ್‌ಪಿ ಮತ್ತು ಬಿಎಸ್‌ಪಿ ಉತ್ತರ ಪ್ರದೇಶದ ಪ್ರಾದೇಶಿಕ ಪಕ್ಷಗಳಾದರೂ ಅವುಗಳು ಪ್ರಾದೇಶಿಕ ಅಸ್ಮಿತೆಯನ್ನು ಹೊಂದಿಲ್ಲ. ಹಾಗೂ ರಾಜ್ಯದಲ್ಲಿ ಪ್ರಾದೇಶೀಕೃತ ರಾಜಕೀಯವೂ ಇಲ್ಲ. ಉತ್ತರ ಪ್ರದೇಶದ ಜನರು ತಮ್ಮನ್ನು ಯಾವುದೇ ಪ್ರಾದೇಶಿಕ-ರಾಜ್ಯ ಅಸ್ಮಿತೆಯೊಂದಿಗೆ ಗುರುತಿಸಿಕೊಳ್ಳುವುದಿಲ್ಲ, ಬದಲಿಗೆ ರಾಷ್ಟ್ರೀಯ ಅಸ್ಮಿತೆಯೊಂದಿಗೆ ಗುರುತಿಸಿಕೊಳ್ಳ ಬಯಸುತ್ತಾರೆ. ಹೀಗಾಗಿ ಅವರು ರಾಷ್ಟ್ರೀಯ ಮನವಿಗಳಿಗೆ ಮರುಳಾಗುವುದು ಸಹಜವೇ ಆಗಿದೆ. ಈಗಿನ ಸಂದರ್ಭದಲ್ಲಿ ಒಂದು ರಾಷ್ಟ್ರೀಯವಾದಿ ಮನವಿಯೊಳಗೆ ಕೋಮುವಾದಿ ಸಂದೇಶ ಅಡಕವಾಗಿತ್ತು. ಹೀಗಾಗಿ, ಹತೋಟಿ ರೇಖೆಯ ಆಚೆ ಮಿಂಚಿನ ಪ್ರಹಾರವಾಗಲೀ, ಅಥವಾ ನೋಟುರದ್ಧತಿಯೇ ಆಗಲಿ ಎಲ್ಲವನ್ನೂ ರಾಷ್ಟ್ರದ ಹಿತದೃಷ್ಟಿಯಿಂದ ಅಗತ್ಯ ಎಂದು ಬಿಂಬಿಸಲಾಯಿತು.

ಶೇಕಡಾ 44ಕ್ಕಿಂತ ಅಧಿಕ ಮತಗಳನ್ನು ಹೊಂದಿರುವ ಪ್ರಮುಖ ಬಿಜೆಪಿಯೇತರ ಪಕ್ಷಗಳಾದ ಎಸ್‌ಪಿ ಮತ್ತು ಬಿಎಸ್‌ಪಿ ಬಳಿ ಈ ಕೋಮುವಾದಿ-ರಾಷ್ಟ್ರೀಯವಾದಿ ವೇದಿಕೆ ಮತ್ತು ಮೋದಿಯ ಆರ್ಥಿಕ ನೀತಿಗಳಿಗೆ ಎದುರಾಗಿ ಏನೂ ಇರಲಿಲ್ಲ. ಸಂಕುಚಿತ ಜಾತಿ ಅಸ್ಮಿತೆಯ ರಾಜಕಾರಣ ಮತ್ತು ಮುಸ್ಲಿಮ್ ಮತದಾರರನ್ನು ಓಲೈಸಲು ಅವರಲ್ಲೇ ಇದ್ದ ಸ್ಪರ್ಧೆಯು ಜಾತಿಯ ಎಲ್ಲೆಗಳನ್ನೂ ಮೀರಿದ ಹಿಂದೂ ರಾಷ್ಟ್ರೀಯತಾವಾದಿ ಆಕರ್ಷಣೆಗೆ ಸರಿಸಮನಾಗಿ ನಿಲ್ಲಲು ಅಸಮರ್ಥವಾಯಿತು.

ದುಡಿಯುವ ಜನರು, ರೈತರು, ಕೃಷಿ ಕೂಲಿಕಾರರು, ಅಸಂಘಟಿತ ಕ್ಷೇತ್ರದ ಕಾರ್ಮಿಕರು, ಸಣ್ಣ ವ್ಯಾಪಾರಸ್ಥರು ಮತ್ತು ಕೈಕಸುಬುದಾರರು ನೋಟು ರದ್ಧತಿಯ ನಂತರ ತಮ್ಮ ಜೀವನೋಪಾಯ ಮತ್ತು ಆದಾಯಗಳ ಮೇಲೆಯೇ ದಾಳಿಗಳಿಂದ ನರಳುತ್ತಿದ್ದಾಗ ಈ ಪಕ್ಷಗಳು ಪ್ರತಿಭಟನೆಗಳನ್ನು ಸಂಘಟಿಸಲಿಲ್ಲ ಹಾಗೂ ಜನರ ಹಕ್ಕುಗಳನ್ನು ರಕ್ಷಿಸಲು ಅವರನ್ನು ಅಣಿನೆರೆಯಿಸಲಿಲ್ಲ. ಅವರು ಹೇಳಿಕೆಗಳನ್ನು ನೀಡುವುದು ಹಾಗೂ ಸಂಸತ್ತಿನಲ್ಲಿ ಭಾಷಣ ಮಾಡುವುದಕ್ಕಷ್ಟೇ ಸೀಮಿತರಾದರು. ಹೀಗಾಗಿ ನೋಟುರದ್ಧತಿ ಬಹುತೇಕವಾಗಿ ಶ್ರೀಮಂತರ ಕೈಯಲ್ಲಿರುವ ಕಪ್ಪುಹಣದ ವಿರುದ್ಧದ ಒಂದು ಪ್ರಹಾರ ಎಂಬ ಮೋದಿ ಪ್ರಚಾರದ ಅಬ್ಬರವೇ ಮೇಲುಗೈ ಸಾಧಿಸಿತು.

ಕೃಷಿ ಸಂಕಟ, ಕಬ್ಬು ಬೆಳೆಗಾರರ ಸಮಸ್ಯೆಗಳು ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ನಿಭಾಯಿಸುವಲ್ಲಿ ಸಮಾಜವಾದಿ ಪಕ್ಷ ಸರಕಾರದ ಸಾಧನೆ ತೀರಾ ನಿರಾಶಾದಾಯಕವಾದುದು. ಒಂದು ಪರ್ಯಾಯ ಆರ್ಥಿಕ ಅಜೆಂಡಾ ಇಲ್ಲದಿದ್ದುದರಿಂದ ಉತ್ತರ ಪ್ರದೇಶದ ಜನರಿಗೆ ಅಖಿಲೇಶ್ ಯಾದವ್ ಮತ್ತು ನರೇಂದ್ರ ಮೋದಿ 'ವಿಕಾಸ' ವೇದಿಕೆಯಲ್ಲಿ ಯಾವುದೇ ವ್ಯತ್ಯಾಸ ಕಾಣಿಸಲಿಲ್ಲ. ಮೋದಿಯವರ 'ವಿಕಾಸ' ಘೋಷಣೆಯೇ ಜನರಿಗೆ ಹೆಚ್ಚು ಬಲಿಷ್ಟವಾಗಿ ಕಂಡಿತು. ಯಾಕೆಂದರೆ ಅದನ್ನು ಭಾರತದ ಪ್ರಧಾನಿಯವರು ಎತ್ತಿದ್ದರು, ಅದನ್ನು ಅವರು ಈಗಲೂ ಮಾಡಿಸ ಬಲ್ಲರು ಎಂದು ಬಹಳಷ್ಟು ಜನರು ನಂಬಿದ್ದಾರೆ.


ಉತ್ತರ ಪ್ರದೇಶದ ತೀರ್ಪು ರಾಜಕೀಯ ಪಕ್ಷಗಳ ಮೈತ್ರಿಗಳು ಸಾಮಾನ್ಯ ಕಾರ್ಯಕ್ರಮಗಳು ಮತ್ತು ಧೋರಣೆಗಳ ಆಧಾರದಲ್ಲಿ ಇರುವುದು ಅಗತ್ಯ ಎಂಬುದನ್ನು ಕೂಡ ಎತ್ತಿ ತೋರಿವೆ. ಎಸ್‌ಪಿ-ಕಾಮಗ್ರೆಸ್ ಮೈತ್ರಿಯ ವಿಫಲತೆ ಈ ಸಂಗತಿಯತ್ತ ಬೊಟ್ಟು ಮಾಡುತ್ತದೆ.

ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಒಂದು ಸ್ಪಷ್ಟ ಪರ್ಯಾಯ ರಾಜಕೀಯ ಮತ್ತು ಸೈದ್ಧಾಂತಿಕ ವೇದಿಕೆ ರೂಪಿಸುವುದು ಅಗತ್ಯ ಎಂಬುದನ್ನು ಉತ್ತರಪ್ರದೇಶದ ತೀರ್ಪು ತೋರಿಸಿದೆ. ಇದಕ್ಕೆ ಹಿಂದೂ ಕೋಮುವಾದಿ ಅಜೆಂಡಾಕ್ಕೆ ಒಂದು ರಾಜಕೀಯ ಪರ್ಯಾಯವೂ ಬೇಕು ಮತ್ತು ನವ ಉದಾರವಾದಿ ನೀತಿಗಳಿಗೆ ಒಂದು ಪರ್ಯಾಯ ಧೋರಣೆಯ ವೇದಿಕೆಯೂ ಅಗತ್ಯ. ಬಾಹುಬಲದ ಹಿಂದೂ ರಾಷ್ಟ್ರೀಯವಾದವನ್ನು ಎದುರಿಸಲು ಒಂದು ದೃಢ ಜಾತ್ಯತೀತ, ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯವಾದದಿಂದ ಎದುರಿಸಬೇಕಾಗಿದೆ

ಉತ್ತರ ಪ್ರದೇಶದಲ್ಲಿ ಬಿಜೆಪಿ ಗೆಲವು, ಲೋಕಸಭೆ ಚುನಾವಣೆಗಳ ನಂತರ ಆರಂಭವಾದ ಬಲಪಂಥೀಯ ಆಕ್ರಮಣದ ಮುಂದುವರಿಕೆಯನ್ನು ಸಂಕೇತಿಸುತ್ತದೆ. ನವ-ಉದಾರವಾದ ಮತ್ತು ಹಿಂದುತ್ವದ ಬೆಸುಗೆ ಇನ್ನಷ್ಟು ಗಟ್ಟಿಗೊಳ್ಳಲಿದೆ. ಇದು ಜಾತ್ಯತೀತ ಮೌಲ್ಯಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹೆಚ್ಚಿನ ದಾಳಿಗಳಿಗೆ ಮುನ್ನುಡಿ ಬರೆಯಲಿದೆ. ಹೆಚ್ಚುತ್ತಿರುವ ಸರ್ವಾಧಿಕಾರಶಾಹಿಯನ್ನು ಎಲ್ಲಾ ರಂಗಗಳಲ್ಲೂ ಸಂಯುಕ್ತ ಚಳವಳಿಗಳ ಮೂಲಕ ಪ್ರತಿರೋಧಿಸಬೇಕಾಗಿದೆ, ಅದನ್ನು ಎದುರಿಸಿ ಹೋರಾಡಬೇಕಾಗಿದೆ.

ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದು ಪರ್ಯಾಯ ಕಾರ್ಯಕ್ರಮದ ಸುತ್ತ ಒಗ್ಗೂಡಿಸುವುದು ತುರ್ತು ಅಗತ್ಯವಾಗಿದೆ. ಅದಕ್ಕಾಗಿ ಎಲ್ಲಾ ಸಾಮೂಹಿಕ ಸಂಘಟನೆಗಳು, ಪ್ರಜಾಸತ್ತಾತ್ಮಕ ಸಂಘಟನೆಗಳು ಮತ್ತು ಸಾಮಾಜಿಕ ಚಳವಳಿಗಳ ಐಕ್ಯತೆಯನ್ನು ಕಟ್ಟುವುದು ಅಗತ್ಯ. ಈ ಎಲ್ಲಾ ಶಕ್ತಿಗಳನ್ನೊಳಗೊಂಡ ವಿಶಾಲ ವೇದಿಕೆಯೊಂದನ್ನು ಕಟ್ಟುವುದು ಅತ್ಯಗತ್ಯ. ಇಂಥ ಒಂದು ವಿಶಾಲ ಐಕ್ಯತೆ ಮತ್ತು ಐಕ್ಯ ಸಾಮೂಹಿಕ ಚಳವಳಿಗಳನ್ನು ಬೆಳೆಸುವ ಮೂಲಕ ಜನಸಮೂಹಗಳನ್ನು, ಕೋಮುವಾದಿ-ರಾಷ್ಟ್ರೀಯವಾದಿ ಪ್ರಚಾರದತ್ತ ಸೆಳೆಯಲ್ಪಟ್ಟ ಜನಗಳನ್ನೂ ಜಾತ್ಯತೀತ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕಾಗಿನ ಸಮರದೊಳಕ್ಕೆ ತರಲು ಸಾಧ್ಯ.

ಎ.ಟಿ.ಎಂ. ಅಂದರೆ ಈಗ ಎನಿ ಟೈಮ್ ಮೋದಿ. ಆದರೆ ಇದು ಮತಗಳೆಂಬ ಠೇವಣಿಗಳಿಗೆ ಮಾತ್ರ ಮೀಸಲು.



ವ್ಯಂಗ್ಯಚಿತ್ರ: ನೈನನ್, ಟೈಮಸ್ ಆಫ್ ಇಂಡಿಯ

ಜನ–ವಿರೋಧಿ ಅಭಿವೃದ್ಧಿ–ವಿರೋಧಿ

ಸಿದ್ಧರಾಮಯ್ಯ ಅವರ ಈ ಅವಧಿಯ ಕೊನೆಯ ಬಜೆಟ್ ಹೊರಬಿದ್ದಿದೆ. ಈ ಬಜೆಟ ದುಡಿಯುವ ಜನರ ಮತ್ತು ಜನತೆಯ ಪ್ರಮುಖ ವಿಭಾಗಗಳ – ಕಾರ್ಮಿಕರು, ರೈತರು, ಕೃಷಿ–ಕೂಲಿಕಾರರ, ವಿದ್ಯಾರ್ಥಿಗಳ ಮತ್ತು ಮಹಿಳೆಯರ – ನಿರೀಕ್ಷೆಗಳಿಗೆ ನೀರೆರಚಿದೆ. ಅವರಿಗೆ ನಿರಾಶೆ ತಂದಿದೆ. ಬಜೆಟಿನ ಮುಖ್ಯ ಅಂಕೆಸಂಖ್ಯೆಗಳು ಇಲ್ಲಿವೆ. ದುಡಿಯುವ ಜನರ ಮತ್ತು ಜನತೆಯ ಪ್ರಮುಖ ವಿಭಾಗಗಳನ್ನು ಪ್ರತಿನಿಧಿಸುವ ಸಂಘಟನೆಗಳ ಪ್ರತಿಕ್ರಿಯೆಗಳು ಈ ನಿರಾಶೆಯನ್ನು ಪ್ರತಿಬಿಂಬಿಸುತ್ತಿವೆ.


ಕೃಷಿ ಕಾರ್ಮಿಕರ ಗಾಯದ ಮೇಲೆ ಕೃಷಿ ಯಾಂತ್ರೀಕರಣದ ಬರೆ

ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2017–18ನೇ ಸಾಲಿನ ಮುಂಗಡಪತ್ರವು ದುಡಿಮೆಗಾರರಿಗೆ, ಮುಖ್ಯವಾಗಿ ರಾಜ್ಯದ ಜನಸಂಖ್ಯೆಯ 20% ರಷ್ಟಿರುವ ಕೃಷಿ ಕಾರ್ಮಿಕರಿಗೆ ತೀವ್ರ ನಿರಾಸೆಯನ್ನು ಉಂಟು ಮಾಡಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಆಕ್ಷೇಪ ವ್ಯಕ್ತಪಡಿಸಿದೆ. ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿರುವ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರು ಸಿದ್ದರಾಮಯ್ಯನವರು ಇದುವರೆಗೆ ಮಂಡಿಸಿದ ಯಾವುದೇ ಒಂದು ಮುಂಗಡ ಪತ್ರದಲ್ಲಿಯೂ ಕೃಷಿ ಕಾರ್ಮಿಕರಿಗೆ ನ್ಯಾಯ ದೊರಕಿಸಿಲ್ಲ ಎಂದು ಆರೋಪಿಸಿದ್ದಾರೆ.


ಮುಂಗಡ ಪತ್ರದ 'ಕೃಷಿ' ಕುರಿತಾದ ಭಾಗದಲ್ಲಿ 'ಕೃಷಿ ಉತ್ಪಾದನಾ ವೆಚ್ಚ ತಗ್ಗಿಸಲು ಮತ್ತು ಕೃಷಿ ಕಾರ್ಮಿಕರ ಕೊರತೆ ನಿವಾರಿಸಲು ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಒದಗಿಸಲಾಗಿದೆ. ಸೇವಾ ಕೇಂದ್ರಗಳ ಮೂಲಕ ರಿಯಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ನೀಡುವ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ 10.5 ಲಕ್ಷ ರೈತರಿಗೆ ಕೃಷಿ ಯಂತ್ರಗಳು ಮತ್ತು ಕೃಷಿ ಸಂಸ್ಕರಣೆ ಸಲಕರಣೆಗಳನ್ನು ವಿತರಿಸಲಾಗಿದೆ. ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ನೀಡಲು 305 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು 4.3 ಲಕ್ಷ ರೈತರು ಈ ಕೇಂದ್ರಗಳ ಸೇವೆ ಪಡೆದಿರುತ್ತಾರೆ.' ಎನ್ನಲಾಗಿದ್ದು ಮುಂದುವರೆದು 'ಕೃಷಿ ಯಂತ್ರಧಾರೆ ಕಾರ್ಯಕ್ರಮ'ದಿಂದ ಹೆಚ್ಚಿನ ಸಂಖ್ಯೆಯ ರೈತರಿಗೆ ಪ್ರಯೋಜನವಾಗಿರುವುದರಿಂದ ಈ ಕಾರ್ಯಕ್ರಮವನ್ನು ಉಳಿದ ಹೋಬಳಿಗಳಿಗೂ ವಿಸ್ತರಿಸಲಾಗುವುದು. ಹೋಬಳಿಗಳಲ್ಲಿ 250 ಕ್ಕೂ ಹೆಚ್ಚು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 122 ಕೋಟಿ ರೂ. ಗಳನ್ನು ಮೀಸಲಿರಿಸಿದೆ. ಎಂದು ಹೇಳಲಾಗಿದೆ. ಮುಂದುವರೆಯುತ್ತಾ 'ಗ್ರಾಮೀಣ ಯುವಕರನ್ನು ಕೃಷಿಯ ಕಡೆಗೆ ಆಕರ್ಷಿಸಲು ಮತ್ತು ಸ್ಥಳೀಯವಾಗಿ ಸಣ್ಣ ಕೃಷಿ ಉಪಕರಣಗಳ ತಯಾರಿಕೆ ಸೌಲಭ್ಯದೊಂದಿಗೆ ಕೃಷಿ ಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಒಂದರಂತೆ 174 'ಗ್ರಾಮೀಣ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರಗಳನ್ನು' ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕೇಂದ್ರಗಳ ಸ್ಥಾಪನೆಗೆ 10 ಕೋಟಿ ರೂ. ಗಳ ಅನುದಾನ ಒದಗಿಸಲಾಗಿದ್ದು ಪ್ರತಿ ಕೇಂದ್ರದ ಸ್ಥಾಪನೆಗೆ ಬ್ಯಾಂಕ್ ಲಿಂಕೇಜ್‌ನೊಂದಿಗೆ 5 ಲಕ್ಷ ರೂ. ಗಳ ಸಹಾಯಧನ ಅಥವ ಗರಿಷ್ಠ ಶೇ. 50 ರಷ್ಟು ಮೊತ್ತವನ್ನು ಒದಗಿಸಲಾಗುವುದು ಎಂದು ಹೇಳಲಾಗಿದೆ.

ಸಿದ್ದರಾಮಯ್ಯ ಸರ್ಕಾರದ ಕೃಷಿಯಲ್ಲಿ ಯಾಂತ್ರೀಕರಣದ ಈ ಧೋರಣೆಯಿಂದಾಗಿ ರಾಜ್ಯದ ಕೃಷಿ ಕಾರ್ಮಿಕರು ಈಗಾಗಲೇ ಸಾಕಷ್ಟು ಅನಾಹುತವನ್ನು ಅನುಭವಿಸಿದ್ದಾರೆ. ಅನುಕೂಲಸ್ಥ ರೈತರು ಕೃಷಿ ವೆಚ್ಚವನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಕೃಷಿ ಕೆಲಸಗಳಿಗೆ ಹೆಚ್ಚೆಚ್ಚಾಗಿ ಯಂತ್ರಗಳನ್ನೇ ಬಳಸುತ್ತಿದ್ದಾರೆ. ಕೃಷಿಯಲ್ಲಿನ ಯಾಂತ್ರೀಕರಣ ಕೃಷಿ ಕಾರ್ಮಿಕರ ಕೂಲಿಯನ್ನು ಕದಿಯುತ್ತದೆ. ಅವರ ಕೆಲಸದ ದಿನಗಳನ್ನು ಕುಗ್ಗಿಸುತ್ತದೆ. ಇದರೊಂದಿಗೆ ಕೃಷಿಯಲ್ಲಿ ಸರ್ಕಾರ ಅನುಸರಿಸುತ್ತಿರುವ ಉದಾರೀಕರಣದ ನೀತಿಗಳಿಂದಾಗಿ ಕೃಷಿ ಒಂದು ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ಸಣ್ಣ ಮತ್ತು ಮಧ್ಯಮ ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಭೂಮಿಯನ್ನು ಮಾರಿಕೊಳ್ಳುತ್ತಿದ್ದಾರೆ. ಈ ಆಘಾತಕಾರಿ ಬೆಳವಣಿಗೆಯಿಂದಾಗಿ ಕೃಷಿ ಕೂಲಿಕಾರರಿಗೆ ಕೃಷಿ ರಂಗದಲ್ಲಿ ನೆಲೆ ಇಲ್ಲದಂತಾಗಿದೆ. ಇದರ ಜತೆಯಲ್ಲೆ ರಾಜ್ಯದಲ್ಲಿ ನಿರಂತರವಾಗಿ ಬರಗಾಲ ಆವರಿಸುತ್ತಿರುವುದರಿಂದ ಕೃಷಿ ಕಾರ್ಮಿಕರರಿಗೆ ಗ್ರಾಮೀಣ ಪ್ರದೇಶದಲ್ಲಿ ಕೆಲಸವೇ ಸಿಗದಂತಾಗಿದೆ. ಉದ್ಯೋಗ ಅರಸಿಕೊಂಡು ನಗರಪ್ರದೇಶಗಳಿಗೆ ವಲಸೆ ಹೋಗುವುದು ಅವರಿಗೆ ಅನಿವಾರ್ಯವಾಗಿದೆ. ಹೀಗಾಗಿ

ಪುಟ 10 ಕ್ಕೆ



ವೆಚ್ಚ – ೨೦೧೭–೧೮ ಆಯವ್ಯಯ ಅಂದಾಜು
ರೂಪಾಯಿ ಯಾವ ಭಾಗ ಎಷ್ಟೆಷ್ಟು?



ಸಾಲಮನ್ನಾ ಮಾಡದ ಬರಪರಿಹಾರವಿಲ್ಲದ ತೀವ್ರ ನಿರಾಶೆಯ ರೈತ–ಕೂಲಿಕಾರರ ವಿರೋಧಿ ರಾಜ್ಯ ಬಜೆಟ್

ಮುಖ್ಯಮಂತ್ರಿ ಸಿಧ್ಧರಾಮಯ್ಯನವರು ಮಂಡಿಸಿದ 2017–18ರ ಸಾಲಿನ ಕರ್ನಾಟಕದ ಬಜೆಟ್ ರೈತ ಹಾಗೂ ಕೃಷಿಕೂಲಿಕಾರರ ವಿರೋಧಿ ಹಾಗೂ ರಾಜ್ಯದ ಅಭಿವೃಧ್ಧಿಯ ವಿರೋಧಿ ಬಜೆಟ್ ಆಗಿದ್ದು, ರಾಜ್ಯದ ರೈತರು– ಕೂಲಿಕಾರರು ಮತ್ತು ನಾಗರೀಕರು ಈ ಜನವಿರೋದಿ ಅಗ್ಗದ ಪ್ರಚಾರದ ಚುನಾವಣಾ ಬಜೆಟ್‌ನ್ನು ತಿರಸ್ಕರಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ರಾಜ್ಯದ ಜನತೆಗೆ ಕರೆ ನೀಡಿದೆ.

ಕರ್ನಾಟಕ ರಾಜ್ಯವು ಕಳೆದ 6–7 ವರ್ಷಗಳಿಂದ ನಿರಂತರವಾದ ಬರಗಾಲಕ್ಕೆ ತುತ್ತಾಗುತ್ತಿದೆ. ಈ ವರ್ಷವೂ ಮಲೆನಾಡು ಮತ್ತು ಕರಾವಳಿ ಪ್ರದೇಶವೂ, ಹಾಗೂ ನೀರಾವರಿ ಪ್ರದೇಶವೂ ಮಳೆಯ ಕೊರತೆಯಿಂದ ತೀವ್ರ ಬರಗಾಲವನ್ನು ಅನುಭವಿಸಿದೆ. ಅದೇ ರೀತಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಗಿಲ್ಲದೇ ಜಾರಿಗೆ ತರುತ್ತಿರುವ ಜಾಗತೀಕರಣದ ನೀತಿಗಳು, ಒಟ್ಟಾರೆ ರಾಜ್ಯದ ಹಾಗೂ ಮುಖ್ಯವಾಗಿ ಗ್ರಾಮೀಣ ಪ್ರದೇಶದ ಮೇಲೆ ತೀವ್ರ ತೆರನಾದ ದಾಳಿ ನಡೆಸಿವೆ. ರಾಜ್ಯದಲ್ಲಿ ರೈತರು ಬೆಳೆದ ಯಾವುದೇ ಅಲ್ಪಸ್ವಲ್ಪ ಬೆಳೆಗೆ ನ್ಯಾಯವಾದ ಬೆಲೆಗಳು, ಒಂದೆಡೆ ಅಗ್ಗದರದ ಆಮದು ದಾಸ್ತಾನುಗಳಿಂದ ಮತ್ತು ಇನ್ನೊಂದೆಡೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ರೈತರು ಬೆಳೆದ ಬೆಳೆಗೆ ವೈಜ್ಞಾನಿಕವಾಗಿ ನಿಗಧಿಸದ ಕಾರಣಕ್ಕೆ ಮತ್ತು ಅಂತಹ ವೈಜ್ಞಾನಿಕವಾಗಿ ಬೆಲೆ ನಿಗದಿಸಿ, ಮಾರುಕಟ್ಟೆಯಲ್ಲಿ ಖರೀದಿಸಲು ವ್ಯವಸ್ಥೆ ಮಾಡದ ಕಾರಣಕ್ಕೆ ಈ ಅವಧಿಯಲ್ಲಿ ರೈತರು ಭಾರೀ ಸಾಲಗಾರರಾಗಿದ್ದಾರೆ.

ಕಳೆದ ವರ್ಷದಲ್ಲಿ 1,500ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಇಳಿದಿದ್ದಾರೆ. ಕಳೆದ ಒಂದೂವರೆ ತಿಂಗಳ ಅವಧಿಯಲ್ಲಿ 125ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಜೆಟ್‌ನಲ್ಲಿ ಸಾಲಮನ್ನಾದ

ಪುಟ 10 ಕ್ಕೆ

ಬಜೆಟ್ – ಮುಖ್ಯ ಅಂಕೆ ಸಂಖ್ಯೆಗಳು

ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ			
	2015–16(%)	2017–18(%)	
ರಾಜ್ಯ ಜಿಡಿಪಿ ಬೆಳವಣಿಗೆ ದರ	7.3	6.9	ಇಳಿಕೆ
ಕೃಷಿ ವಲಯ ಬೆಳವಣಿಗೆ ದರ		1.5	
ಕೈಗಾರಿಕೆ ವಲಯ ಬೆಳವಣಿಗೆ ದರ	4.9	2.2	ಇಳಿಕೆ
ಸೇವಾ ವಲಯ ಬೆಳವಣಿಗೆ ದರ	10.4	8.5	ಇಳಿಕೆ

ಬಜೆಟ್ ಸ್ವೀಕೃತಿ ಮತ್ತು ವೆಚ್ಚ 2017–18			
ಸ್ವೀಕೃತಿಗಳು	**ಕೋಟಿ ರೂ.**	**ವೆಚ್ಚ**	**ಕೋಟಿ ರೂ**
ರಾಜಸ್ವ	1,44,892	ರಾಜಸ್ವ	1,44,755
ಸಾಲ	37,092	ಸಾಲ ಮರುಪಾವತಿ	33,630
ಬಂಡವಾಳ	135	ಬಂಡವಾಳ	8,176
ಒಟ್ಟು ಸ್ವೀಕೃತಿಗಳು	**1,82,119**	**ಒಟ್ಟು ವೆಚ್ಚಗಳು**	**1,86,561**

ಒಟ್ಟು ಸಾಲ 2.08 ಲಕ್ಷ ಕೋಟಿ ರೂ., ಮುಂದಿನ ವರ್ಷದ ಹೊತ್ತಿಗೆ 2.42 ಲಕ್ಷ ಕೋಟಿ ರೂ.

ವಿತ್ತೀಯ ಕೊರತೆ 33,359 ಕೋಟಿ ರೂ. – ರಾಜ್ಯದ ಆಂತರಿಕ ಉತ್ಪನ್ನದ ಶೇ. 2.61

2017–18ರ ಕೊನೆಯಲ್ಲಿ 2,42,420 ಕೋಟಿ ರೂ.ಗಳ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇ.18.93

(ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಡಿ 2017–18ಕ್ಕೆ ನಿಗದಿಪಡಿಸಿರುವ ಶೇ.25 ರ ಮಿತಿಯೊಳಗಿದೆ)

ಚುನಾವಣಾ–ಗಿಮಿಕ್ ಬಜೆಟ್

ಮಹಿಳೆಯರ ಸಬಲೀಕರಣದತ್ತ ಗಮನವಿರದ ನಿರಾಶಾದಾಯಕ ಬಜೆಟ್

ರಾಜ್ಯದ 2017–18 ರ ಸಾಲಿನ ಬಜೆಟ್ ಮಂಡನೆಯಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಹಲವು ಮಹತ್ವದ ಯೋಜನೆಗಳನ್ನು ಘೋಷಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಘೋಷಿಸಿದ ಬಜೆಟ್‌ನಲ್ಲಿ ಅತ್ಯಂತ ಮಹತ್ವ ಪೂರ್ಣ ಅಂಶಗಳು ಮೇಲ್ನೋಟಕ್ಕೆ ಕಾಣುತ್ತಿಲ್ಲ. ರಾಜ್ಯದ 30 ಜಿಲ್ಲೆಗಳಿಗೆ 'ಮಾತೃ ಪೂರ್ಣ' ಯೋಜನೆಯನ್ನು ವಿಸ್ತರಿಸಿರುವುದನ್ನು ಬಿಟ್ಟರೆ ವಿಶೇಷವಾದ ಯಾವ ಸೌಲಭ್ಯಗಳೂ ಪ್ರಸ್ತಾಪಿತವಾಗಿಲ್ಲದಿರುವುದರಿಂದ, ನಿಜವಾದ ಅರ್ಥದಲ್ಲಿ ಮಹಿಳಾ ಸಬಲೀಕರಣದತ್ತ ಗಮನ ಹರಿಸುವ ಯಾವ ಪ್ರಯತ್ನಗಳೂ ಕಂಡು ಬರುತ್ತಿಲ್ಲ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ.

ಅಂಗನವಾಡಿಯಲ್ಲಿ ದಣಿವರಿಯದ ಕೆಲಸ ಮಾಡುತ್ತಿರುವ ನೌಕರರ ಪಾಲಿಗೆ ಇದು ಆಶಾದಾಯಕವಾಗಿಯೇನೂ ಇಲ್ಲ. ಕನಿಷ್ಟ ವೇತನವೂ ಇಲ್ಲದೇ ಕೆಲಸ ಮಾಡುವ ಈ ವಲಯಕ್ಕೆ ಕನಿಷ್ಟ ಜೀವನಾವಶ್ಯಕ ವೇತನವನ್ನಾದರೂ ನಿಗದಿ ಮಾಡುವ ಬದಲು ಗೌರವಧನ ಹೆಚ್ಚಳವನ್ನು ಮಾಡಲಾಗಿದೆ. ಅವರಿಂದ ತೆಗೆಯುತ್ತಿರುವ ಕೆಲಸ ಮತ್ತು ಕೊಡುತ್ತಿರುವ 'ಗೌರವ ಧನ' ಕ್ಕೆ ತಾಳಮೇಳವಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪ್ರತಿನಿಧಿಗಳ ಗೌರವ ಧನ ಹೆಚ್ಚಿಸುವಾಗ ಇರುವ ಕಾಳಜಿ ಮಹಿಳೆಯರ ಮತ್ತು ಮಕ್ಕಳ ಯೋಗಕ್ಷೇಮದ ಸಂಪೂರ್ಣ ನಿರ್ವಹಣೆ ಮಾಡುವ ಅಂಗನವಾಡಿ ಬಿಸಿಯೂಟದ ಕಾರ್ಯಕರ್ತರ ವೇತನದ ಬಗ್ಗೆ ಕಂಡು ಬರುತ್ತಿಲ್ಲ. ಅಸಂಘಟಿತ ವಲಯದ ದುಡಿಮೆಗಾರರ ಬದುಕಿಗೆ ಅಗತ್ಯವಾದ ವೇತನ ಹೆಚ್ಚಳ ಮಾಡದ ನಡೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸುತ್ತದೆ.

ರಾಜ್ಯದಲ್ಲಿ ತೀವ್ರ ಬರಗಾಲವಿದ್ದು ಮಹಿಳೆಯರ ಬದುಕು ದುರ್ಭರವಾಗುತ್ತಿದೆ. ಆದ–ರೆ ಅದನ್ನು ನಿವಾರಿಸಲು ಅಗತ್ಯವಾದ ಉದ್ಯೋಗ ಖಾತ್ರಿಯಂಥಹ ಯಾವ ಭರವಸೆಗಳೂ ಬಜೆಟ್ ನಲ್ಲಿ ಪ್ರತಿಫಲಿತವಾಗಿಲ್ಲ. ಗ್ರಾಮೀಣ ಭಾಗದಲ್ಲಿ ಕುಸಿಯುತ್ತಿರುವ ಆರ್ಥಿಕತೆಯನ್ನು ತಡೆಗಟ್ಟದಿದ್ದರೆ ದಿಕ್ಕೆಟ್ಟ ಜನ ನಗರಗಳತ್ತ ವಲಸೆ ಬರುವುದು ಅನಿವಾರ್ಯವಾಗುತ್ತದೆ. ನಗರಗಳಲ್ಲಿ ಕೂಡ ಕುಡಿಯುವ ನೀರಿಗೆ ತೀವ್ರ ಸಮಸ್ಯೆಯಾಗುತ್ತಿದ್ದು ಜನ ಜಾನುವಾರುಗಳು ತೊಂದರೆಗೆ ಒಳಗಾಗುತ್ತಿವೆ. ಇದರ ದುಷ್ಪರಿಣಾಮಕ್ಕೆ ಮಹಿಳೆಯರು ನೇರ ಬಲಿಯಾಗುತ್ತಾರೆ. ಬಜೆಟ್ ನಲ್ಲಿ ಈ ವಲಯಕ್ಕೆ ವಿಶೇಷ ಗಮನ ನೀಡಬೇಕಾದ ಅಗತ್ಯವನ್ನು ಸರ್ಕಾರ ಪರಿಗಣಿಸಿಲ್ಲ.

ಇಡೀ ರಾಜ್ಯದಲ್ಲಿರುವ ಹಲವಾರು ಕೆರೆ ಕುಂಟೆಗಳು ಭೂಗಳ್ಳರ ಪಾಲಾಗುತ್ತಿದ್ದು ಅವುಗಳನ್ನು ಕಾಪಾಡುವ ಕೆಲಸ ಈ ಕ್ಷಣದ ತುರ್ತಿನ ಅಗತ್ಯವಾಗಿದೆ. ಅಲ್ಲೊಂದಿಲ್ಲೊಂದು ಕೆರೆಗಳ ಪುನಶ್ಚೇತನ ಮಾಡುವ ಪ್ರಸ್ತಾಪ ಬಿಟ್ಟು ಇಡೀ ರಾಜ್ಯದಲ್ಲಿರುವ ಜೀವಂತ ಕೆರೆಗಳು ಮತ್ತು ಪುನಃಶ್ಚೇತನಗೊಳಿಸುವ ಕೆರೆಗಳಾಗಿ ಪರಿವರ್ತಿಸುವತ್ತ ಯುದ್ಧೋಪಾದಿಯಲ್ಲಿ ಕೆಲಸ ನಡೆಯಬೇಕಿದೆ. ನೀರಿನ ಅಲಭ್ಯತೆಯ ತೀವ್ರತೆ ಕೂಡ ಮಹಿಳೆಯರನ್ನೇ ಹೆಚ್ಚು ಬಾಧಿಸುತ್ತದೆ. ಆದರೆ ಅತಿ ಹೆಚ್ಚು ಗಮನವನ್ನು ನೀಡಬೇಕಿದ್ದ ಕ್ಷೇತ್ರವಿದಾಗಿದ್ದು ಇದನ್ನು ಕಡೆಗಣಿಸಿರುವುದನ್ನು ಸಂಘಟನೆ ಟೀಕಿಸುತ್ತದೆ.

ಸ್ತ್ರೀ ಶಕ್ತಿ ಸಂಘಗಳ ಮೂಲಕ 'ಸವಿರುಚಿ' ಕ್ಯಾಂಟೀನ್ ಪ್ರಾರಂಭಿಸುವುದನ್ನು ಸ್ವಾಗತಿಸುತ್ತೇವೆ. ಆದರೆ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಗಳಿಗೆ ಕೌಶಲ್ಯ ತರಬೇತಿ, ಪ್ರೋತ್ಸಾಹ ಧನ, ಮತ್ತು ಉತ್ಪಾದನೆಗೆ ಮಹತ್ವ ನೀಡಿ ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಎಷ್ಟೋ ವರ್ಷಗಳಿಂದ ಕೇಳುತ್ತಲೇ ಇದ್ದೇವೆ. ಆದರೆ ಅಂಥಹ ಯಾವುದೇ ಪ್ರಸ್ತಾಪವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿಲ್ಲ.

ಮಹಿಳೆಯರು ಮತ್ತು ಮಕ್ಕಳ ಮೇಲೆ ವಿವಿಧ ಸ್ವರೂಪಗಳಲ್ಲಿ ದೌರ್ಜನ್ಯಗಳು ನಡೆ–

ಪುಟ 10 ಕ್ಕೆ


'ದುಡಿಯುವ ಜನರ ನಿರೀಕ್ಷೆ ಹುಸಿಗೊಳಿಸಿದ' ರಾಜ್ಯ ಬಜೆಟ್–ಸಿಐಟಿಯು

ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀ ಸಿದ್ದರಾಮಯ್ಯನವರು ಮಂಡಿಸಿದ 4ನೇ ಬಜೆಟ್‌ನಲ್ಲಿ ಈ ರಾಜ್ಯದ ದುಡಿಯುವ ಜನರ ಹಲವು ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿಯು ಟೀಕಿಸಿದೆ.

2009ರಲ್ಲಿ ರಾಜ್ಯದಲ್ಲಿ ಸ್ಥಾಪಿಸಲಾದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಹಣಕಾಸು ನಿಧಿಯನ್ನು ನೀಡುವ ಮೂಲಕ ಕರ್ನಾಟಕ ರಾಜ್ಯ ಸಾಮಾಜಿಕ ಭದ್ರತಾ ನಿಧಿ ಸ್ಥಾಪನೆ ಮಾಡದೆ ಕೇಂದ್ರ ಸರ್ಕಾರದ ಬಜೆಟ್ ಹಾದಿಯನ್ನೇ ರಾಜ್ಯ ಸರ್ಕಾರ ಮುಂದುವರಿಸಿದೆ. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ಯೋಜನೆಯನ್ನು ಪಶ್ಚಿಮ ಬಂಗಾಳ ಮಾದರಿಯಲ್ಲಿ ನೀಡುವ ಕರಡು ಮಸೂದೆಯನ್ನು ಸಿದ್ದಪಡಿಸಿದ್ದರೂ ಸಹಾ ಅದನ್ನು ಜಾರಿಗೊಳಿಸುವ ಇಚ್ಛಾಶಕ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ತೋರಿಸಿಲ್ಲ. ಬದಲಾಗಿ ಮನೆಕೆಲಸಗಾರರು, ಹಮಾಲಿಗಳು, ಬೀದಿ ಬದಿ ಮಾರಾಟಗಾರರು ಹಾಗೂ ಚಿಂದಿ ಆಯುವವರಿಗೆ ಸ್ಮಾರ್ಟ್ ಕಾರ್ಡ್ ನೀಡುವ ಯೋಜನೆ ಮೂಲಕ ಅಪಘಾತ ಪರಿಹಾರ ಯೋಜನೆಯೊಂದಿಗೆ ಭವಿಷ್ಯನಿಧಿ ಪಿಂಚಣಿ ಅನುಕೂಲವನ್ನು ಕಲ್ಪಿಸಿರುವುದು ಕೇವಲ ಮೂಗಿಗೆ ತುಪ್ಪ ಸವರುವ ಪ್ರಯತ್ನವಾಗಿದೆ. ಪರಿಣಾಮಕಾರಿ ಸಮಗ್ರ ಭವಿಷ್ಯನಿಧಿಯನ್ನು ಅದು ಒಳಗೊಂಡಿಲ್ಲ. ಅದಕ್ಕಾಗಿ ಮೀಸಲಿಟ್ಟಿರುವ 10 ಕೋಟಿ ರೂ.ಗಳು ಸಾಕಾಗುವುದಿಲ್ಲ ಎನ್ನುವುದು ಸಿಐಟಿಯು ಅಭಿಪ್ರಾಯ. ಸಿಐಟಿಯುವಿನ ಹೋರಾಟಕ್ಕೆ ಮಣಿದು ಈ ಕ್ರಮ ಕೈಗೊಂಡಿದ್ದರೂ ಸಹಾ ಅದು ನೆಪ ಮಾತ್ರಕ್ಕೆ ಎಂಬಂತಿದೆ. ಎಲ್ಲಾ ಅಸಂಘಟಿತ ಕಾರ್ಮಿಕರ ಸಮಗ್ರ ಭವಿಷ್ಯ ನಿಧಿಯನ್ನು ರೂಪಿಸಲು ಅಗತ್ಯವಾದ ಹಣಕಾಸು ನಿಧಿಯನ್ನು ಮೀಸಲಿಡಲು ವಿಫಲವಾಗಿರುವ ರಾಜ್ಯ ಸರ್ಕಾರವು ತನ್ನ ಇಚ್ಛಾಶಕ್ತಿಯ ಕೊರತೆಯನ್ನು ಪ್ರದರ್ಶಿಸಿದೆ. ಕಟ್ಟಡ ಕಾರ್ಮಿಕರಿಗೆ ವಸತಿ ಯೋಜನೆಯನ್ನು ರೂಪಿಸುವ ಕ್ರಮ ಸ್ವಾಗತಾರ್ಹವಾಗಿದ್ದು, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿನ ನಿಧಿಯನ್ನು ಸಮರ್ಥವಾಗಿ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಬಳಸಲು ಅಗತ್ಯವಿರುವ ಮುನ್ನೋಟವನ್ನು ಬಜೆಟ್ ಪ್ರತಿಫಲಿಸಿಲ್ಲ. ಇದನ್ನು ಖಂಡಿಸಿ ರಾಜ್ಯಾದ್ಯಂತ ಮಾರ್ಚ 18 ರಂದು ಹಮಾಲಿ ಕಾರ್ಮಿಕರು ಪ್ರತಿಭಟನೆ ನಡೆಸಲಿದ್ದಾರೆ.

ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಅಂಗನವಾಡಿ ನೌಕರರ ಗೌರವಧನ ರೂ.10

ಪುಟ 10 ಕ್ಕೆ



ವಿದ್ಯಾರ್ಥಿಗಳಿಗಿಲ್ಲ ಬಜೆಟ್ ಭಾಗ್ಯ, ಗಾಳಿ ತುಂಬಿದ ಬಲೂನ್ ನಂತಿರುವ ಬಜೆಟ್


ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾಗಿರುವ ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮಂಡಿಸಿರುವ ಬಜೆಟ್ ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕಡಿಮೆ ಹಣ ನೀಡುವ ಮೂಲಕ ನಿರ್ಲಕ್ಷ ಮಾಡಲಾಗಿದೆ. ಬಜೆಟ್ ಭಾಗ್ಯದಿಂದ ವಿದ್ಯಾರ್ಥಿಗಳನ್ನು ಹೊರಗಿಟ್ಟಿರುವ ರಾಜ್ಯ ಸರಕಾರದ ಬಜೆಟ್ ಗಾಳಿ ತುಂಬಿದ ಬಲೂನ್ ನಂತಿದೆ. ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸಿರುವು ಸರಕಾರದ ನೀತಿಯನ್ನು ಖಈಖ ವಿರೋಧಿಸುತ್ತದೆ.

ಹಣ ಕಡಿತ:

2016_17ನೇ ಸಾಲಿನ ಒಟ್ಟು ಬಜೆಟ್ ಗಾತ್ರ 1,63,419 ಕೋಟಿ ಇತ್ತು. ಅದರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ 17,373 ಕೋಟಿ (10,63%). ಉನ್ನತ ಶಿಕ್ಷಣಕ್ಕೆ 4651 ಕೋಟಿ (2,84%) ನೀಡಲಾಗಿತ್ತು. ಒಟ್ಟಾರೆ ಶಿಕ್ಷಣಕ್ಕೆ12% ಹಣ ನೀಡಲಾಗಿತ್ತು. ಈ ಬಾರಿಯ ಬಜೆಟ್ ಗಾತ್ರ 1,86,596 ಕೋಟಿ ಇದ್ದು, ಅದರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ 18,266 ಕೋಟಿ (9,78%). ಕಾಲೇಜು ಶಿಕ್ಷಣಕ್ಕೆ 4401 ಕೋಟಿ (2,35%) ಒಟ್ಟಾರೆ 12% ಹಣ ಮೀಸಲಾಡಿಲಾಗಿದೆ. ಕಳೆದ ಬಾರಿಯ ಬಜೆಟ್ ಗೆ ಹೋಲಿಕೆ ಮಾಡಿದರೆ ಪ್ರಾಥಮಿಕ ಶಿಕ್ಷಣಕ್ಕೆ 0.85% ಹಣ ಕಡಿತ ಮಾಡಲಾಗಿದೆ. ಉನ್ನತ ಶಿಕ್ಷಣಕ್ಕೆ 0.49% ಹಣವನ್ನು ಕಡಿತ ಮಾಡಲಾಗಿದೆ. ಹಣ ಕಡಿತ ಮಾಡಿರುವ ಸರಕಾರದ ನಡೆಯನ್ನು ಖಈಖ ವಿರೋಧಿಸುತ್ತದೆ.

ಸರಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲೀಷ ಭಾಷೆಯನ್ನು ಕಲಿಸಲು ಆಸಕ್ತಿ ತೋರಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಪುಟ 10 ಕ್ಕೆ



ಕೃಷಿ ಕಾರ್ಮಿಕರ ಗಾಯದ ಮೇಲೆ.........

ಪುಟ 8 ರಿಂದ

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಮಿಕರ ಕೊರತೆ ಎದ್ದು ಕಾಣುತ್ತದೆ. ಆದರೆ ಸಿದ್ದರಾಮಯ್ಯನವರು ಕೂಲಿಕಾರರ ಕೊರತೆಗೆ ಸೂಚಿಸುವ ಪರಿಹಾರ ಸಮಸ್ಯೆಗಿಂತಲೂ ಕ್ರೂರವಾಗಿದೆ. ಶ್ರೀಮಂತ ರೈತರು ಕೃಷಿ ಯಂತ್ರೋಪಕರಣಗಳನ್ನು ಬಳಸಿ ಲಾಭ ಮಾಡಿಕೊಳ್ಳಬಹುದು. ಆದರೆ ಅದರಿಂದ ಕೆಲಸ ಕಳೆದುಕೊಳ್ಳದ ಕೃಷಿ ಕಾರ್ಮಿಕರ ಗತಿಯೇನು? ಕೃಷಿ ಕಾರ್ಮಿಕರ ಮತ್ತು ಒಟ್ಟಾರೆ ಅಸಂಘಟಿತ ವಲಯದ ದುಡಿಮೆಗಾರರ ಆದಾಯ ಹೆಚ್ಚಾಗದೆ, ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳ ಮಾರಾಟ ಸಾಧ್ಯವಾಗದು. ದೇಶದ ನೈಜ ಅಭಿವೃದ್ಧಿ ಈ ವಿಭಾಗದ ಜನರ ಆದಾಯ ಹೆಚ್ಚಾಗುವುದನ್ನೇ ಅವಲಂಭಿಸಿದೆ. ರೈತರಿಗೆ ಯಂತ್ರೋಪಕರಣಗಳನ್ನು ಒದಗಿಸುವುದಕ್ಕಿಂತಲೂ ಕೃಷಿ ಕಾರ್ಮಿಕರ ಮತ್ತು ಗ್ರಾಮೀಣ ದುಡಿಮೆಗಾರರ ಕುಶಲತೆ, ಪರಿಣತಿಯನ್ನು ಹೆಚ್ಚಿಸಲು ಅವರಿಗೆ ಪ್ರಯೋಜನಕಾರಿಯಾಗುವ ಯಂತ್ರೋಪಕರಣಗಳನ್ನು ಒದಗಿಸುವುದು ಹೆಚ್ಚು ಸೂಕ್ತ. ಸ್ವಂತ ಆಸ್ತಿ ಇಲ್ಲದೆ ಈ ಕೃಷಿ ಕಾರ್ಮಿಕರು ಬಹುತೇಕವಾಗಿ ಸಿದ್ದರಾಮಯ್ಯನವರು ತಮ್ಮ ಆದ್ಯತೆಯ ವಿಭಾಗವೆಂದು ಹೇಳಿಕೊಳ್ಳುವ ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರೇ ಆಗಿದ್ದಾರೆ. ಆದರೆ ಇವರನ್ನು ಸಬಲೀಕರಣಗೊಳಿಸುವುದು ಸಿದ್ದರಾಮಯ್ಯ ಸರ್ಕಾರದ ಆದ್ಯತೆ ಆಗಿಲ್ಲ.

ದೇಶದಲ್ಲಿ ಗಿಡ ಮರಗಳಿಗೆ, ಪಶುಪಕ್ಷಿಗಳಿಗೆ ರಕ್ಷಣೆ ಒದಗಿಸುವ ಕಾನೂನುಗಳಿವೆ. ಆದರೆ ಕೃಷಿ ಕಾರ್ಮಿಕರ ಹಿತ ಕಾಪಾಡುವ ಒಂದು ಕಾನೂನು ಸಹ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಪಾಸ್ ಮಾಡಿಲ್ಲ. ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಬಹಳ ಹಿಂದೆಯೇ ಕೃಷಿ ಕಾರ್ಮಿಕರಿಗಾಗಿ ಒಂದು ಕಲ್ಯಾಣ ಕಾಯ್ದೆ ಮತ್ತು ಕಲ್ಯಾಣ ನಿಧಿಯನ್ನು ಸ್ಥಾಪಿಸಿ ಕೃಷಿ ಕಾರ್ಮಿಕರಿಗೆ ಸಾಮಾಜಿಕ ಸುರಕ್ಷೆಯನ್ನು ಒದಗಿಸುತ್ತದೆ. ಕೃಷಿ ಕಾರ್ಮಿಕನಾಗಿ ಕೆಲಸಮಾಡಿ 60 ವರ್ಷದಾಟಿದವರಿಗೆ ಪ್ರಸಕ್ತ ಕಮ್ಯೂನಿಸ್ಟ್ ಸರ್ಕಾರ ರೂ. 1100 ರಂತೆ ಮಾಸಿಕ ನಿವೃತ್ತಿ ವೇತನ ನೀಡುತ್ತದೆ. ಮುಂದಿನ 5 ವರ್ಷಗಳಲ್ಲಿ ಅದು ತಿಂಗಳಿಗೆ 1500 ರೂ. ಆಗಲಿದೆ. ಕೇರಳದಂತಹ ಒಂದು ಸಣ್ಣ ರಾಜ್ಯಕ್ಕೆ ಇದು ಸಾಧ್ಯವಾಗುವುದಾದರೆ ಕರ್ನಾಟಕ ಸರ್ಕಾರಕ್ಕೆ ಏಕೆ ಸಾಧ್ಯವಾಗುವುದಿಲ್ಲ?

ಮಹಿಳೆಯರ ಸಬಲೀಕರಣದತ್ತ.........

ಪುಟ 9 ರಿಂದ

ಯುತ್ತಿದ್ದು ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಇನ್ನಷ್ಟು ನಿರ್ದಾಕ್ಷಿಣ್ಯ ಕ್ರಮಗಳ ಅಗತ್ಯವಿತ್ತೆಂದು ಜನವಾದಿ ಮಹಿಳಾ ಸಂಘಟನೆ ಭಾವಿಸುತ್ತದೆ. ಮಹಿಳೆಯರ ಸುರಕ್ಷೆಗಾಗಿ ಆಪ್ ಪ್ರಸ್ತಾಪ ಬಜೆಟ್ ನಲ್ಲಿ ಬಂದದ್ದು ಆಘಾತಕಾರಿಯಾಗಿದೆ. ಸಿ.ಸಿ.ಟೀವಿ, ಆಪ್ ಗಳ ಮೂಲಕ ಸುರಕ್ಷತೆಯನ್ನು ಪಡೆಯುವುದಕ್ಕಿಂತ ಜನರ ನಡವಳಿಕೆಗಳನ್ನು ತಿದ್ದುವ ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗುವ ಬಗ್ಗೆ ಖಾತ್ರಿ ನೀಡುವ ಬಗ್ಗೆ ಸರ್ಕಾರ ಜಾರಿಗೆ ತರುವ ಅಗತ್ಯವಿದೆ ಎಂದು ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ.

ದುಡಿಯುವ ಮಹಿಳೆಯರ ಹಾಸ್ಟೆಲ್ ನಿರ್ಮಾಣದ ಪ್ರಸ್ತಾಪವನ್ನು ಸ್ವಾಗತಿಸುತ್ತೇವೆ. ಇದು ರಾಜ್ಯದಾದ್ಯಂತ ವಿಸ್ತರಣೆಯಾಗಬೇಕೆಂದು ಅಭಿಪ್ರಾಯ ಪಡುತ್ತೇವೆ.

ಇ.ಎಸ್.ಐ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದನ್ನು ಸ್ವಾಗತಿಸುತ್ತೇವೆ. ಆದರೆ ಹೊರಗುತ್ತಿಗೆಯ ಮೂಲಕ ನಿರ್ವಹಣೆಯನ್ನು ಜನಾವಾದಿ ಮಹಿಳಾ ಸಂಘಟನೆ ವಿರೋಧಿಸುತ್ತದೆ.

ಒಟ್ಟಾರೆಯಾಗಿ ಜೆಂಡರ್ ಬಜೆಟ್ ಬಗ್ಗೆ ವಿಸ್ತಾರವಾದ ಚರ್ಚೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಮತ್ತು ಆರ್ಥಿಕತೆಗೆ ತನ್ನ ಮಹತ್ತರ ಕೊಡುಗೆಯನ್ನು ಮಹಿಳೆಯರು ಕೊಡುತ್ತಿರುವುದನ್ನು ಪರಿಗಣಿಸಿ ಇದಕ್ಕಿಂತ ಉತ್ತಮವಾದ ಲಿಂಗ ಸ್ನೇಹಿ ಬಜೆಟ್ನ್ನು ನಿರೀಕ್ಷಿಸುತ್ತಿದ್ದ ರಾಜ್ಯದ ಜನರಿಗೆ ನಿರಾಶಾದಾಯಕ ಬಜೆಟ್ನ್ನು ಕೊಡಲಾಗಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ.

ವಿದ್ಯಾರ್ಥಿಗಳಿಗಿಲ್ಲ ಬಜೆಟ್ ಭಾಗ್ಯ.........

ಪುಟ 9 ರಿಂದ

ಅಂಗನವಾಡಿ ಮಕ್ಕಳಿಗೆ ವಾರದಲ್ಲಿ ಎರಡು ಮೊಟ್ಟೆ ನೀಡಲು ಮುಂದಾಗಿರುವುದು ಉತ್ತಮ ಬೆಳವಣಿಗೆಯಾಗಿದ್ದು ಅದನ್ನು ಬಿಸಿಯೂಟಕ್ಕೂ ವಿಸ್ತರಿಸಬೇಕಿತ್ತು. ಐಟಿ ಸ್ಕೂಲ್ ಬಗ್ಗೆ ಆಲೋಚಿಸಿರುವ ಸರಕಾರ ಸೌಲಭ್ಯಗಳಿಲ್ಲದೆ ನರಳುತ್ತಿರುವ ಶಾಲೆಗಳಿಗೆ ಶೌಚಾಲಯ, ಕುಡಿಯುವ ನೀರು, ಕಟ್ಟಡ ಇತ್ಯಾದಿಗಳ ಬಗ್ಗೆ ನಿರ್ದಿಷ್ಟ ಪ್ರಸ್ಥಾಪಗಳಿಲ್ಲ.

ಕೌಶಲ್ಯಾಭಿವೃದ್ಧಿ ಬಗ್ಗೆ ಹೇಳಿರುವ ಸರಕಾರ ಶಾಲೆ ಬಿಟ್ಟ ಮಕ್ಕಳನ್ನು ವಾಪಸ್ಸು ಕರೆ ತರುವುದು ಹೇಗೆ ಎಂಬುದನ್ನು ಪ್ರಸ್ತಾಪಿಸಿಲ್ಲ. ಜನಸಾಮಾನ್ಯರಿಗೆ ಅನುಕೂಲಕ್ಕಾಗಿ ಕ್ಯಾಂಟೀನ್ ತೆರೆಯಲು ಮುಂದಾಗಿರುವ ಸರಕಾರಕ್ಕೆ ಶಾಲಾ_ಕಾಲೇಜ್_ವಿ.ವಿ ಕ್ಯಾಂಪಸ್ ಗಳಲ್ಲಿ ಕ್ಯಾಂಟೀನ್ ಆರಂಭಿಸುವ ಚಿಂತನೆ ನಡೆಸಿಲ್ಲ.

ಹಾಸ್ಟಲ್ ವಿದ್ಯಾರ್ಥಿಗಳ ನಿರ್ಲಕ್ಷ್ಯ:

ಹಾಸ್ಟೇಲ್ ವಿದ್ಯಾರ್ಥಿಗಳನ್ನು ಬಜೆಟ್ ನಲ್ಲಿ ನಿರ್ಲಕ್ಷ್ಯ ಮಾಡಲಾಗಿದೆ. ಕೇವಲ 100ರೂ ಆಹಾರ ಭತ್ಯೆ ಹೆಚ್ಚಳ ಮಾಡಿದೆ. ಮೆಟ್ರಿಕ್ ಪೂರ್ವ ಹಾಸ್ಟೇಲ್ ಗಳಿಗೆ ಈ ಮುಂಚೆ 1300ರೂ ನೀಡಲಾಗುತ್ತಿತ್ತು 100ರೂ ಹೆಚ್ಚಳದೊಂದಿಗೆ 1300 ರೂ ಆಗುತ್ತದೆ. ಮೆಟ್ರಿಕ್ ನಂತರದ ಹಾಸ್ಟೇಲ್ ಗಳಿಗೆ ಈ ಮುಂಚೆ 1400ರೂ ನೀಎಲಾಗುತ್ತಿತ್ತು. 100ರೂ ಹೆಚ್ಚಳದೊಂದಿಗೆ 1500 ರೂ ಆಗಿದೆ. ಬೆಲೆ ಏರಿಕೆಯ ಈ ಸಂಧರ್ಭದಲ್ಲಿ ಕಡಿಮೆ ಹಣದಲ್ಲಿ ಮಕ್ಕಳಿಗೆ ಗುಣ ಮಟ್ಟದ, ಪೌಷ್ಟಿಕಾಂಶದಿಂದ ಕೂಡಿರುವ ಆಹಾರವನ್ನು ಕೊಡಲು ಸಾಧ್ಯವಿಲ್ಲ.

ಹುಸಿಯೋಜನೆ: ಪ್ರತಿ ಭಾರಿಯಂತೆ ಈ ಬಾರಿಯು ಹೊಸ ಯೋಜನೆಗಳನ್ನು ಪರಿಚಯಿಸಲಾಗಿದೆ. ಕಳೆದ ಬಾರಿಯ ಯೋಜನೆಗಳು ಹಳ್ಳ ಹಿಡದಿರುವುದನ್ನು ಮರೆತಿರುವ ಸರಕಾರ "ಶಿಕ್ಷಣ ಕಿರಣ, ವಿಶ್ವಾಸ ಕಿರಣ, ಶರಣರ ಹೆಸರಿನಲ್ಲಿ ಅಧ್ಯಯನ ಪೀಠ ಆರಂಭಿಸವುದಾಗಿ ಪ್ರಸ್ಥಾಪಿಸಲಾಗಿದೆ. ಇದನ್ನಾದರೂ ಜಾರಿ ಮಾಡಲು ಸರಕಾರ ಮುಂದಾಗಬೇಕಿದೆ. ಹೊಸದಾಗಿ ಐಐಐ ಮತ್ತು ಪಾಲಿಟೆಕ್ನಿಕ್, ಎಂಜನೀಯರಿಂಗ್, ಮೆಡಿಕಲ್ ಕಾಲೇಜ್, ಹಾಸ್ಟೇಲ್ ಗಳನ್ನು ಆರಂಭಿಸಲು ಪ್ರಸ್ತಾಪಿಸಲಾಗಿದೆ. ಸೌಲಭ್ಯವನ್ನು ನೀಡಿ ಇವಗಳನ್ನು ಆರಂಭಿಸದಿದ್ದಲ್ಲಿ ಮತ್ತೆ ಮುಚ್ಚುವ ಹಂತ ತಲುಪುತ್ತವೆ. ಬರಗಾಲವಿರುವ ಕಾರಣ ಎಲ್ಲಾ ಹಂತದ ಶಿಕ್ಷಣವನ್ನು ಉಚಿತವಾಗಿ ನೀಡುವ ಬಗ್ಗೆ ಪ್ರಸ್ಥಾಪಿಸಿದ್ದರೆ ಉತ್ತಮವಾಗಿರುತ್ತಿತ್ತು. ರೈತರ ಸಾಲ ಮನ್ನಾ ಮಾಡದ ಸರಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿರುವುದು ಸ್ಪಷ್ಟವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿರುವ "ಕರ್ನಾಟಕ ಶಿಕ್ಷಣ ನೀತಿಯನ್ನು ಜಾರಿ ಮಾಡುವ ಪ್ರಸ್ತಾಪದ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳ ಋಣವನ್ನು ತೀರಿಸಿದೆ.

ಒಟ್ಟಾರೆ ರಾಜ್ಯ ಸರಕಾರ ವಿದ್ಯಾರ್ಥಿಗಳನ್ನು ನಿರ್ಲಕ್ಷ್ಯ ಮಾಡುವ ಮೂಲಕ ವಿದ್ಯಾರ್ಥಿ ವಿರೋಧಿ ಬಜೆಟ್ ಆಗಿದ್ದು ಮುಂಬರುವ ಚುನಾವಣೆಯ ಪ್ರಣಾಳಿಕೆಯಂತೆ ಕಾಣುತ್ತಿದೆ ಎಂದು SFI ಆರೋಪಿಸುತ್ತಿದೆ.

ರೈತ–ಕೂಲಿಕಾರರ ವಿರೋಧಿ.........

ಪುಟ 8 ರಿಂದ

ನಿರೀಕ್ಷೆಯಿಂದ ಟಿವಿ ವೀಕ್ಷಣೆ ಮಾಡುತ್ತಿದ್ದ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಹೆಚ್ ಮಲ್ಲಿಗೆರೆ ಪ್ರಕಾಶ್ ಎಂಬ ಯುವ ರೈತ, ಬಜೆಟ್ನಲ್ಲಿ ರೈತರ ಸಾಲ ಮನ್ನಾ ಇಲ್ಲವೆಂಬ ಅಂಶವನ್ನು ನೋಡಿ ವಿಷ ಕುಡಿದ ಧಾರುಣ ಘಟನೆ ಸಂಬವಿಸಿದ ವರದಿ ಬಂದಿದೆ.

ಸತತ ಬರಗಾಲ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಿಗದ ಉದ್ಯೋಗದ ಕಾರಣದಿಂದಲೂ, ಕೂಲಿಕಾರರೂ ಸಾಲಬಾಧಿತರಾಗಿದ್ದಾರೆ. ಸಾರ್ವಜನಿಕ ಬ್ಯಾಂಕುಗಳು, ಸಹಕಾರ ಸಂಘಗಳು, ಖಾಸಗೀ ಸಾಲ ನೀಡಿಕೆಯ ಸಂಸ್ಥೆಗಳು ಮತ್ತು ಖಾಸಗಿ ಬಡ್ಡಿ ವ್ಯಾಪಾರಿಗಳು, ಗೊಬ್ಬರ– ಕ್ರಿಮಿನಾಶಕ ವ್ಯಾಪಾರಿಗಳು ತಾವು ನೀಡಿದ ಸಾಲ ಮತ್ತು ದುಬಾರಿ ಬಡ್ಡಿಗಾಗಿ ಸತತ ಒತ್ತಡವನ್ನು ಹೇರುತ್ತಿವೆ ಮತ್ತು ಇದ್ದ ಬದ್ದ ಆಸ್ತಿ ಪಾಸ್ತಿಗಳನ್ನು ಅಗ್ಗದರದಲ್ಲಿ ಸಾಲ ಮತ್ತು ಬಡ್ಡಿಗಾಗಿ ಜಮಾ ಮಾಡಿಕೊಳ್ಳುತ್ತಿವೆ. ವ್ಯವಸಾಯ ಮತ್ತು ಜೀವನ ಮುನ್ನಡೆಸಲು ಹೊಸ ಸಾಲ ಸಿಗುತ್ತಿಲ್ಲ. ಗ್ರಾಮೀಣ ಪ್ರದೇಶ ಮತ್ತು ವ್ಯವಸಾಯ ರೈತಾಪಿ ಜನತೆ ತೀವ್ರ ಬಿಕ್ಕಟ್ಟಿನಲ್ಲಿ ತತ್ತರಿಸುತ್ತಿದೆ.

ಇಂತಹ ಸಂದರ್ಭದಲ್ಲಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಬಜೆಟ್ ನೀಡುವ ರೈತರು ಹಾಗೂ ಕೂಲಿಕಾರರ ಸಾಲ ಮನ್ನಾದ ಮೇಲೆ ಮತ್ತು ಬರಪರಿಹಾರದ ಮೇಲೆ ಅಪಾರ ನಿರೀಕ್ಷೆ ಇಟ್ಟಿದ್ದ ಗ್ರಾಮೀಣ ಜನತೆಗೆ ಕಳೆದ ತಿಂಗಳು ಮಂಡಿಸಿದ ನರೇಂದ್ರ ಮೋದಿಯವರ ಕೇಂದ್ರ ಸರಕಾರದ ಬಜೆಟ್ ತೀವ್ರ ನಿರಾಶೆಯನ್ನು ಮೂಡಿಸಿತ್ತು. ಅದೇ ರೀತಿ, ಕೇಂದ್ರ ಸರಕಾರ ಸಾಲ ಮನ್ನಾ ಮಾಡಲಿ ಬಿಡಲಿ, ರಾಜ್ಯ ಸರಕಾರ ಸಾಲ ಮನ್ನಾ ಮಾಡಲಿದೆಯೆಂದು ಹೇಳುವ ಮೂಲಕ ಅಪಾರ ನಿರೀಕ್ಷೆಯನ್ನು ಮರಳಿ ಹುಟ್ಟು ಹಾಕಿದ್ದ ಸಿದ್ದರಾಮಯ್ಯನವರು, ತಮ್ಮ ಬಜೆಟ್ನಲ್ಲಿ ಆ ಕುರಿತು ಪ್ರಸ್ತಾಪ ಮಾಡದೇ ಹೋದುದು, ರಾಜ್ಯದ ಗ್ರಾಮೀಣ ಜನತೆ ಮತ್ತು ರೈತರಲ್ಲಿ ಭಾರೀ ನಿರಾಶೆಯನ್ನುಂಟು ಮಾಡಿದೆ. ಮಾತ್ರವಲ್ಲಾ ಅವರನ್ನು ಅಪಾರ ಬಿಕ್ಕಟ್ಟಿನಲ್ಲಿ ಸಂಕಷ್ಟದಲ್ಲಿ ತೊಡಗಲು ಬಿಟ್ಟಿರುವುದು ಅಕ್ಷಮ್ಯ ಮತ್ತು ತೀವ್ರ ಖಂಡನೀಯ ವಿಚಾರವಾಗಿದೆ. ಅದೇ ರೀತಿ, ಈ ಜನತೆಯನ್ನು ತೀವ್ರ ಸಂಕಷ್ಠದಲ್ಲಿ ಬಿಟ್ಟು ಮುಂಬರುವ ಚುನಾವಣೆಯಲ್ಲಿ ಓಟುಗಳನ್ನು ಪಡೆಯಲು ಅಗ್ಗದ ಪ್ರಚಾರದಲ್ಲಿ ತೊಡಗುವಂತಹ ಬಜೆಟ್ ಮಂಡಿಸಿರುವುದು ಸರಕಾರದ ಕುಹಕವನ್ನು ಬಯಲಿಗಿಟ್ಟಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘ ಕಟುವಾಗಿ ಟೀಕಿಸಿದೆ.

ಸಾಲ ಮನ್ನಾದ ವಿಚಾರವೂ ಮಾತ್ರವೇ ಅಲ್ಲಾ, ವ್ಯವಸಾಯವನ್ನು ಬಿಕ್ಕಟ್ಟಿನಿಂದ ಹೊರ ತರಲು ಮತ್ತು ಅದನ್ನು ಲಾಭದಾಯಕ ಗೊಳಿಸಲು ಯಾವುದೇ ಒಂದು ಸಣ್ಣ ಕ್ರಮಗಳಿಲ್ಲವಾಗಿದೆ. ಆದ್ದರಿಂದ ಇದೊಂದು ರೈತ– ಕೂಲಿಕಾರರ ವಿರೊಧಿ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ರಾಜ್ಯದ ಅಭಿವೃದ್ಧಿ–ವಿರೋಧಿ ಬಜೆಟ್ ಆಗಿದ್ದು ಇದನ್ನು ತಿದ್ದುಪಡಿ ಮಾಡುವಂತೆ ಮತ್ತು ರೈತರು– ಕೂಲಿಕಾರರ ಸಾಲ ಮನ್ನಾ ಮತ್ತು ಬರ ಪರಿಹಾರ ಘೋಷಷಿ ಬರಪರಿಹಾರದ ಬಜೆಟ್ ಆಗಿ ಪರಿವರ್ತಿಸುವಂತೆ ಒತ್ತಾಯಿಸಿ ರಾಜ್ಯದಾದ್ಯಂತ ಪ್ರತಿಭಟನೆಯನ್ನು ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ಕರೆ ನೀಡಿದೆ.

ದುಡಿಯುವ ಜನರ ನಿರೀಕ್ಷೆ.........

ಪುಟ 9 ರಿಂದ

ಸಾವಿರಕ್ಕೆ ಹೆಚ್ಚಿಸಲು ಸಹಾಯಕಿಯರ ಗೌರವ ಧನ ರೂ.7500ಕ್ಕೆ ಹೆಚ್ಚಿಸಲು ಪ್ರಸ್ತಾಪ ಇದ್ದರೂ ಸಹ ಕೇವಲ ರೂ.1,000 ಹಾಗೂ ರೂ.500 ಹೆಚ್ಚಿಸಿರುವ ಕ್ರಮ ಏನೇನು ಸಾಲದು. ವೇತನದ ಹೆಚ್ಚಳಕ್ಕಾಗಿ ಅಂಗನವಾಡಿ ನೌಕರರ ಹೋರಾಟ ಮಾರ್ಚ್ 20 ರಿಂದ ನಡೆಯಲಿದೆ. ಬಿಸಿ ಊಟ ನೌಕರರ ವೇತನದ ಬಗ್ಗೆ ತುಟಿ ಬಿಚ್ಚದ ಸರ್ಕಾರದ ಕ್ರಮವನ್ನು ಸಿಐಟಿಯು ಸಂಘಟನೆಯು ಖಂಡಿಸಿ ಆ ವಿಭಾಗದ ಕಾರ್ಮಿಕರು ನಡೆಸುವ ಮಾರ್ಚ 17 ಹೋರಾಟಕ್ಕೂ ಬೆಂಬಲ ವ್ಯಕ್ತಪಡಿಸಿದೆ. ಖಾಸಗಿ ಕೈಗಾರಿಕ ಕಾರ್ಮಿಕರ ನಿವೃತ್ತಿ ವಯಸ್ಸನ್ನು 58ರಿಂದ 60ಕ್ಕೆ ಹೆಚ್ಚಿಸಿರುವ ಕ್ರಮವನ್ನು ಮತ್ತು ಆಶಾ ನೌಕರರಿಗೆ 1000 ಗೌರವಧನ ಹೆಚ್ಚಿಸಿರುವ ಕ್ರಮವನ್ನು ಸಿಐಟಿಯು ಸ್ವಾಗತಿಸುತ್ತದೆ. ಆದರೆ ಕಾರ್ಮಿಕ ಸಂಘ ಮಾನ್ಯ ಮಾಡಲು ತಯಾರಾಗಿರುವ ಕರಡು ಮಸೂದೆ, ಗುತ್ತಿಗೆ ಹಾಗೂ ಖಾಯಮೇತರರ ಖಾಯಂಗೆ ಸಿದ್ದವಾಗಿರುವ ಕರಡು ಮಸೂದೆ ಅಂಗೀಕರಿಸುವ ಯಾವುದೇ ಪ್ರಸ್ತಾಪ ಮಾಡದೆ ಕಾರ್ಮಿಕರಿಗೆ ಇದ್ದ ನಿರೀಕ್ಷೆಗಳನ್ನು ಬಜೆಟ್ ಸಂಪೂರ್ಣವಾಗಿ ಹುಸಿಗೊಳಿಸಿದೆ.

47 ಅನುಸೂಚಿತ ಹುದ್ದೆಗಳಿಗೆ ಕನಿಷ್ಟ ವೇತನ ಪರಿಷ್ಕರಣೆ ಆಗಿದ್ದರೂ ಉಳಿದ 27 ಉದ್ದಿಮೆಗಳ ವೇತನ ಪರಿಷ್ಕರಣೆ ಗೊಳಿಸುವಲ್ಲಿ ವಿಳಂಬ ನೀತಿ ಅನುಸರಿಸಲಾಗುತ್ತಿದೆ. ಈಗಾಗಲೇ ಪರಿಷ್ಕರಿಸಿರುವ ಕನಿಷ್ಟ ವೇತನ 01.04.2015 ರಿಂದ ಜಾರಿಯಾಗಬೇಕಿದ್ದು ಅದನ್ನು 01–01–2017 ರಿಂದ ಜಾರಿಗೊಳಿಸುವ ಮತ್ತು ತುಟ್ಟಿಭತ್ಯೆಯನ್ನು 01–04–2016 ರಲ್ಲಿದ್ದಂತೆ ವಿಲೀನಗೊಳಿಸುವ ಮೂಲಕ ಮಾಲೀಕರಿಗೆ ಸಾವಿರಾರು ಕೋಟಿ ರೂಗಳ ಲಾಭ ಮಾಡಿಕೊಟ್ಟು ಕಾರ್ಮಿಕರಿಗೆ ರಾಜ್ಯ ಸರ್ಕಾರವು ಭಾರಿ ವಂಚನೆಯನ್ನು ಎಸಗಿದೆ.

2016ರ ಅಕ್ಟೋಬರ್ 26 ರಂದು ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ ಹಾಗೂ ಹೊರಮೂಲ ನೌಕರರಿಗೆ ಜಾರಿಗೊಳಿಸಿ ಮಾದರಿಯಾಗಿರಬೇಕಾದ ರಾಜ್ಯ ಸರ್ಕಾರ ತನ್ನ ಬಜೆಟ್ನಲ್ಲಿ ಅದರ ಬಗ್ಗೆ ಚಕಾರ ಎತ್ತದಿರುವುದು ಹಾಗೂ ಅಗತ್ಯ ಹಣಕಾಸು ಮೀಸಲಿಡದೆ ಇರುವುದು ಸರ್ಕಾರದ ನೌಕರ ವಿರೋಧಿ ಧೋರಣೆಯನ್ನು ತೋರಿಸುತ್ತದೆ. ಅಂತೆಯೇ ಕೇಂದ್ರ ಸರ್ಕಾರದ ಹಾದಿಯಲ್ಲಿ ಯೋಜನೆ ಹಾಗೂ ಯೋಜನೇತರ ವೆಚ್ಚಗಳನ್ನು ವಿಲೀನಗೊಳಿಸುವ ಮೂಲಕ ಕೇಂದ್ರ ಸರ್ಕಾರದ ಬಂಡವಾಳಗಾರರ ಪರ ಹಾದಿಯನ್ನು ರಾಜ್ಯ ಸರ್ಕಾರ ಸಹ ಅನುಸರಿಸಿದೆ. ಈ ಮೂಲಕ ಕೇಂದ್ರ ರಾಜ್ಯ ಸರ್ಕಾರಗಳ ಮಾಲೀಕ ಪರ ಧೋರಣೆಗಳಲ್ಲಿ ವ್ಯತ್ಯಾಸವಿಲ್ಲ ಎನ್ನುವುದನ್ನು ತೋರುತ್ತ ಬಂಡವಾಳಗಾರರ ಓಲೈಕೆಗೆ ಕೇಂದ್ರದೊಂದಿಗೆ ರಾಜ್ಯ ಸರ್ಕಾರ ಪೈಪೋಟಿಗಿಳಿದಿದೆ. ರಾಜ್ಯದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಿಸುವ ಹುನ್ನಾರವನ್ನು ಮೋದಿ ನೇತೃತ್ವದ ಸರಕಾರ ಕೈಗೊಳ್ಳುತ್ತಿರುವ ಸನ್ನಿವೇಶದಲ್ಲಿ ರಾಜ್ಯದಲ್ಲಿರುವ ಸಾರ್ವಜನಿಕ ಉದ್ಯಮಗಳ ರಕ್ಷಣೆಗಾಗಿ ರಾಜ್ಯ ಸರಕಾರ ಯಾವ ಕ್ರಮ ವಹಿಸಲಿದೆ ಎನ್ನುವ ಬಗೆಗೆ ಮೌನ ವಹಿಸಿರುವುದು ಸರಿಯಲ್ಲ.

ಹೆಚ್ಚುತ್ತಿರುವ ಕೈಗಾರಿಕಾ ವಿವಾದಗಳ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯ ಸ್ಥಾಪನೆಗೆ ಕ್ರಮವಹಿಸಿಲ್ಲ. ಇಎಸ್ಐ ಆಸ್ಪತ್ರೆಗಳಲ್ಲಿ ಐಸಿಯು ಮುಂತಾದ ಸೇವೆಗಳನ್ನು ಹೊರಗುತ್ತಿಗೆ ನೀಡುವ ಮೂಲಕ ಇಎಸ್ಐ ಆಸ್ಪತ್ರೆಗಳ ಖಾಸಗೀಕರಣಕ್ಕೆ ಬಜೆಟ್ ನಾಂದಿ ಹಾಡಿದೆ.

ಬರಗಾಲ ಹಾಗೂ ನೋಟ್ ರದ್ಧತಿಯಿಂದ ಸಂಕಷ್ಟಕ್ಕೆ ರೈತರು ಈಡಾಗಿರುವ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡದೇ ಕೇಂದ್ರದ ಬಿಜೆಪಿಗಿಂತ ನಾವೇನು ಕಡಿಮೆ ಇಲ್ಲ ಎಂಬಂತೆ ರೈತ ವಿರೋಧಿ ಬಜೆಟನ್ನು ಮಂಡಿಸಿರುವ ಕ್ರಮವನ್ನು ಸಿಐಟಿಯು ತೀವ್ರವಾಗಿ ಖಂಡಿಸುತ್ತದೆ.

ಉದ್ಯಮಿಯ 'ಘನತೆಗೆ ಧಕ್ಕೆ': 'ದಿ ವೈರ್' ವರದಿಗಳಿಗೆ ನ್ಯಾಯಾಲಯದ ತಡೆಯಾಜ್ಞೆ

ದೇಶದ ಡಿಜಿಟಲ್ ಪತ್ರಿಕೋದ್ಯಮದಲ್ಲಿ 'ಸ್ವತಂತ್ರ' ಮಾಧ್ಯಮವಾಗಿ ದಾಪುಗಾಲಿಡುತ್ತಿರುವ 'ದಿ ವೈರ್ ಡಾಟ್ ಇನ್' ಪ್ರಕಟಿಸಿದ ಎರಡು ವರದಿಗಳಿಗೆ ಬೆಂಗಳೂರಿನ ನ್ಯಾಯಾಲಯವೊಂದು ಅನೀಕ್ಷಿತ ನಡೆಯಲ್ಲಿ ತಡೆಯಾಜ್ಞೆ ನೀಡಿದೆ. ಇದೇ ತಿಂಗಳ ಕೊನೆಯಲ್ಲಿ ಪ್ರಕರಣದ ವಿಚಾರಣೆ ನಡೆಯಲಿದೆ.

ಸಂಸದ, ಉದ್ಯಮಿ ರಾಜೀವ್ ಚಂದ್ರಶೇಖರ್ ಬೆಂಗಳೂರಿನ 40ನೇ ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮಾ. 2 ರಂದು 'ಘನತೆಗೆ ಧಕ್ಕೆ ಮಾಡುವ' ವರದಿಗಳ ವಿರುದ್ಧ ತಡೆಯಾಜ್ಞೆ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಾಧೀಶ ಜಿನರಲ್ಕರ್ ಭೀಮರಾವ್ ಲಗಮಪ್ಪ 'ದಿ ವೈರ್' ಪ್ರಕಟಿಸಿದ ಎರಡು ವರದಿಗಳ ವಿರುದ್ಧ ತಡೆಯಾಜ್ಞೆ ನೀಡಿದ್ದಾರೆ. ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಮಾ. 6ರಂದು ಸುದ್ದಿ ತಾಣ ರಾಜೀವ್ ಚಂದ್ರಶೇಖರ್ ಕುರಿತು ಪ್ರಕಟಿಸಿದ ಎರಡು ವರದಿಗಳನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದೆ.

ಏನೀ ವರದಿಗಳು?:

'ದಿ ವೈರ್' ಜನವರಿ 25ರಂದು ಅರ್ನಾಬ್ ಗೋಸ್ವಾಮಿ ನೇತೃತ್ವದಲ್ಲಿ ಆರಂಭವಾಗಲಿರುವ 'ರಿಪಬ್ಲಿಕ್' ಮಾಧ್ಯಮದಲ್ಲಿ ಹೂಡಿಕೆಗಳ ಕುರಿತು ವರದಿ ಮಾಡಿತ್ತು. 'ರಿಪಬ್ಲಿಕ್' ಪ್ರಚಾರ ಸಭೆಗಳಲ್ಲಿ ಪತ್ರಕರ್ತ ಅರ್ನಾಬ್ ಗೋಸ್ವಾಮಿ ಸ್ವತಂತ್ರ ಮಾಧ್ಯಮವನ್ನು ಕಟ್ಟುತ್ತಿರುವುದಾಗಿ ಘೋಷಿಸಿದ್ದರು. ಅದರಲ್ಲಿ ರಾಜೀವ್ ಚಂದ್ರಶೇಖರ್ ಹೂಡಿಕೆ ಮಾಡುತ್ತಿರುವುದರಿಂದ ಸಹಜವಾಗಿಯೇ 'ಸ್ವತಂತ್ರ' ಮಾಧ್ಯಮದ ಕುರಿತು ಪ್ರಶ್ನೆಗಳು ಎದ್ದಿದ್ದವು. ಈ ಕುರಿತು ವಿಶ್ಲೇಷಣಾತ್ಮಕ ವರದಿಯೊಂದನ್ನು 'ದಿ ವೈರ್' ಪ್ರಕಟಿಸಿತ್ತು.



ಮಾಧ್ಯಮ ದೊರೆಯ 'ಸೆನ್ಸಾರ್'

ಬೆಂಗಳೂರಿನ ನಾಗರಿಕ ಹಕ್ಕುಗಳ ಹೋರಾಟಗಾರನೆಂದು ಪೋಸು ಕೊಡುವ, ಆದರೆ ತೀವ್ರ 'ಕಮ್ಯುನಿಸ್ಟ್–ವಿರೋಧಿ' ಪ್ರಚಾರಕ, ಕೇರಳದ ಎನ್.ಡಿ.ಎ. ನಾಯಕ, ಏಶ್ಯಾನೆಟ್–ಸುವರ್ಣ ಮಾಧ್ಯಮ ದೊರೆ, ಕರ್ನಾಟಕದಿಂದ ರಾಜ್ಯಸಭೆ ಸೀಟು ಖರೀದಿಸಿದ ಭೂಪ, ಕಾರ್ಮಿಕ–ವಿರೋಧಿ ಬಿ.ಪಿ.ಎಲ್. ಗುಂಪಿನ ಮಾಲಕ – ಮುಂತಾದ ಹಲವು 'ಮುಖ'ಗಳಿರುವ, ಡಾ. ರಾಜೀವ ಚಂದ್ರಶೇಖರ್ ಅವರ ಹೊಸದೆರಡು 'ಮುಖ'ಗಳನ್ನು ಬಯಲು ಮಾಡಿದ 'ದಿ ವೈರ್' ಪತ್ರಿಕೆ ಮೇಲೆ 'ಸೆನ್ಸಾರ್ ಶಿಪ್' ಹೊರಿಸಿ ತಮ್ಮ ನಿಜವಾದ ಪ್ರಜಾಪ್ರಭುತ್ವ–ವಿರೋಧಿ ಮುಖ ತೋರಿಸಿರುವ ಬಗೆಗಿನ ವರದಿ ಓದಿ:

(ಕೃಪೆ: ಸಮಾಚಾರ. ಕಾಮ್)

ಇದೇ ಸುದ್ದಿ ತಾಣದಲ್ಲಿ ಫೆ. 17ರಂದು ಮತ್ತೊಂದು ವರದಿ ಪ್ರಕಟಗೊಂಡಿತ್ತು. ಕೇರಳ ಮೂಲದ ಉದ್ಯಮಿ, ಮಾಧ್ಯಮ ಸಂಸ್ಥೆಗಳ ಮಾಲೀಕ ರಾಜೀವ್ ಚಂದ್ರಶೇಖರ್ ಮಿಲಿಟರಿಗೆ ಸಂಬಂಧಪಟ್ಟ ಕಂಪನಿಗಳಲ್ಲಿ ಹೂಡಕೆ ಮಾಡಿದ್ದಾರೆ. ಇದೇ ವೇಳೆ ಅವರು ಸೇನೆಯ ಸಂಸದೀಯ ಸಮಿತಿಯ ಸದಸ್ಯರಾಗಿದ್ದಾರೆ. ಇದು 'ಹಿತಾಸಕ್ತಿಗಳ ಸಂಘರ್ಷ'ವಾಗುತ್ತಿದೆ ಎಂದು 'ದಿ ವೈರ್' ವರದಿ ಪ್ರತಿಪಾದಿಸಿತ್ತು.

ಸದ್ಯ ಈ ಎರಡೂ ವರದಿಗಳಿಂದ ತಮ್ಮ 'ಘನತೆ'ಗೆ ಧಕ್ಕೆ ಆಗುತ್ತಿದೆ ಎಂದು ಆರೋಪಿಸಿರುವ ರಾಜೀವ್ ಚಂದ್ರಶೇಖರ್ ವರದಿಗಳ ವಿರುದ್ಧ ತಡೆಯಾಜ್ಞೆ ತಂದಿದ್ದಾರೆ. ವಿಶೇಷ ಅಂದರೆ ಮಾ. 2 ರಂದು ನ್ಯಾಯಾಲಯ ತಡೆಯಾಜ್ಞೆ ಆದೇಶವನ್ನು ನೀಡಿದ ನಂತರವೇ 'ದಿ ವೈರ್' ಸಂಸ್ಥೆಗೆ ನೋಟಿಸ್ ನೀಡಲಾಗಿದೆ. ಅದಕ್ಕೂ ಮುಂದೆ ಎರಡೂ ಕಡೆಯವರ ವಾದಗಳನ್ನು ಆಲಿಸದಿರುವುದು ಅನಿರೀಕ್ಷತ ನಡೆಯಾಗಿದೆ ಎಂದು 'ಸ್ಕ್ರಾಲ್ ಡಾಟ್ ಇನ್' ವರದಿ ಪ್ರಕಟಿಸಿದೆ.

ಇದೇ ಸುದ್ದಿತಾಣದಲ್ಲಿ ಪ್ರತಿಕ್ರಿಯೆ ನೀಡಿರುವ 'ದಿ ವೈರ್' ಸಂಪಾದಕ ಸಿದ್ಧಾರ್ಥ್ ವರದರಾಜನ್, "ವಿಚಾರಣೆ ಸಮಯದಲ್ಲಿ ಯಾವುದೇ ಮಾಹಿತಿ ಇರಲಿಲ್ಲ. ರಾಜೀವ್ ಚಂದ್ರಶೇಖರ್ ಕಡೆಯ ವಕೀಲರು ನೋಟಿಸ್ ನೀಡಿದ ನಂತರವೇ ಮಾಹಿತಿ ಗೊತ್ತಾಯಿತು. ಈ ಕುರಿತು ಕಾನೂನು ಹೋರಾಟ ಮುಂದುವರಿಸಲಾಗುವುದು," ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಇದೇ ಹೇಳಿಕೆಯನ್ನು 'ದಿ ವೈರ್' ತನ್ನೆರಡು ವರದಿಗಳ ಕೆಳಗೂ ಈಗ ಪ್ರಕಟಿಸಿದೆ. ಇದೇ ತಿಂಗಳ ಕೊನೆಯಲ್ಲಿ ಪ್ರಕರಣದ ವಿಚಾರಣೆ ನಡೆಯಲಿದೆ.

ನ್ಯಾಯಾಲಯದಲ್ಲಿ ದಾವೆ ಹೂಡಿದ ಕುರಿತು ಪ್ರತಿಕ್ರಿಯಸಿರುವ ರಾಜೀವ್ ಚಂದ್ರಶೇಖರ್, "ನನ್ನ ವಿರುದ್ಧ ಕಾಂಗ್ರೆಸ್ ಮತ್ತು ಅವರ ಜತೆ ಸಂಬಂಧ ಹೊಂದಿರುವ ಮಾಧ್ಯಮಗಳಿಂದ ಅಪಪ್ರಚಾರ ನಡೆಯುತ್ತಿದೆ," ಎಂದು ಆರೋಪಿಸಿದ್ದಾರೆ.

"ಬೆಂಗಳೂರಿನ ನ್ಯಾಯಾಲಯ ನೀಡಿರುವ ತಾತ್ಕಾಲಿಕ ತಡೆಯಾಜ್ಞೆಯನ್ನು ಪ್ರಶ್ನಿಸಬೇಕಿದೆ. ಇಲ್ಲವಾದರೆ, ಅಧಿಕಾರ ಕೇಂದ್ರದಲ್ಲಿರುವ ಜನರಿಂದ ಮಾಧ್ಯಮ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಇಂತಹ ನಡೆಗಳು ಹೆಚ್ಚಾಗುತ್ತವೆ," ಎಂದು ಸಿದ್ಧಾರ್ಥ್ ವರದರಾಜನ್ ಹೇಳಿದ್ದಾರೆ ಎಂದು 'ಸ್ಕ್ರಾಲ್' ಪ್ರಕಟಿಸಿದೆ. ●

ಬಂಡವಾಳಶಾಹಿ ಆರ್ಥಿಕತೆ......... ಪುಟ 6 ರಿಂದ

ಮೊಬೈಲ್ ಫೋನ್ ಮೂಲದ ಜಾಹಿರಾತುಗಳು ಬಳಕೆಯಾಗುತ್ತಿವೆ. ಬಹುಶಃ ಆಹಾರ ಧಾನ್ಯಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸರಕು–ಸೇವೆಗಳ ಬಗೆಗೂ ಜಾಹಿರಾತುಗಳು ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ.

ಜಾಹಿರಾತಿನ ವೆಚ್ಚ ಯಾರು ಕೊಡುತ್ತಾರೆ?

ಜಾಹಿರಾತುಗಳ ಹಿಂದೆ ಬಹು ಮುಖ್ಯವಾದ ಮನೋವೈಜ್ಞಾನಿಕ ತತ್ವವೊಂದಿದೆ. ಬಳಕೆದಾರರನ್ನು ಸೆಳೆಯುವ ಎಲ್ಲ ವ್ಯಾಪಾರ ತಂತ್ರಗಳೂ ಬಳಕೆದಾರರನ್ನು ಅವರ ವೈಚಾರಿಕ ಮತ್ತು ವಿಮರ್ಶಾತ್ಮಕ ಪ್ರಜ್ಞೆಗಳು ಎಚ್ಚರಗೊಳ್ಳುವ ಮೊದಲೇ ಮಗುವಿನ ಸ್ಥಿತಿಯಲ್ಲಿ ಮುಟ್ಟುವಂತಿರಬೇಕು. ಮೆದುಳಿನಲ್ಲಿರುವ ಕಣ್ಣು–ಕಿವಿ–ಮೂಗು–ನಾಲಗೆ–ಸ್ಪರ್ಶಗಳ ಕೇಂದ್ರಗಳನ್ನು ಉದ್ದೀಪಿಸುವ ಬಣ್ಣ, ಧ್ವನಿ–ಶಬ್ದ, ಸುವಾಸನೆ, ರುಚಿ ಮತ್ತು ನಯಸ್ಪರ್ಶದ ಭ್ರಮೆಯನ್ನು ಕಲ್ಪಿತ ಅನುಭವದ ಮೂಲಕ ಸೃಷ್ಟಿಸಬೇಕು. ಉದಾಹರಣೆಗೆ, ಜಾಹಿರಾತು ತಾರೆಯ ಗುಲಾಬಿಯ ನಸುಗೆಂಪಿನ ಕೆನ್ನೆ, ಮನಮೋಹಕ ಧ್ವನಿ, ಹಿನ್ನೆಲೆಯಲ್ಲಿ ಚಿತ್ತಾಕರ್ಷಕ ಸಂಗೀತವಿರುವ ಆಹ್ಲಾದಕರ ಬಣ್ಣಗಳ ಕೋಣೆ, ಸುವಾಸನೆಯಿದೆ ಎಂಬಂತೆ ಮೂಗರಳಿಸಿ ಮೇಲೆತ್ತಿದ ತಲೆ, ಆಹಾ ಎಂದು ಚಪ್ಪರಿಸುವ ಚೆರಿ ಅಥವಾ ಕಿತ್ತಲೆ ಬಣ್ಣದ ಪಾನಕ, ಉಟ್ಟಿರುವ ಅರೆ ಪಾರದರ್ಶಕ ನವಿರು ಬಣ್ಣಗಳ ಉಡುಪು ಎಲ್ಲವೂ ಸೇರಿ ಬ್ಲೇಡಿನಿಂದ ಹಿಡಿದು ಕಾಂಡೋಮಿನ ತನಕ ಯಾವ ಸರಕನ್ನು ಬೇಕಾದರೂ ಬಳಕೆದಾರರ ಮೆದುಳಿನೊಳಕ್ಕೆ ನುಗ್ಗಿಸಬಹುದು. ಅವರು ಅದೇನೆಂದು ಅರ್ಥಮಾಡಿಕೊಳ್ಳುವ ಮೊದಲೇ ಆ ಸರಕಿನ ಬಗ್ಗೆ ಅವರ ಸಮ್ಮತಿ ಬೇರೂರಿರುತ್ತದೆ. ಇಂಥ ಸಂದೇಶವನ್ನು ಅರೆಜಾಗೃತ, ಕಾತರದ ಮನಸ್ಥಿತಿಯಲ್ಲಿನ ಯಾವುದೇ ವಯಸ್ಸಿನ ವ್ಯಕ್ತಿಯ ಕಣ್ಣು–ಕಿವಿಗಳಿಗೆ ಪದೇ ಪದೇ ರಾಚಿದರೆ ಆ ಸಂದೇಶ ಅಲ್ಲಿ ತಳವೂರಿ, ಸರಕು–ಸೇವೆಗಳನ್ನು ಕೊಳ್ಳುವ ಸಂದರ್ಭದಲ್ಲಿ ಬಳಕೆದಾರರ ಆಯ್ಕೆ–ಸಮ್ಮತಿಗಳನ್ನು ಮಾರಾಟಗಾರರ ಪರವಾಗಿ ನಿಯಂತ್ರಿಸುತ್ತದೆ. ಹೀಗಾಗಿ ಜಾಹಿರಾತುಗಳಿಗೆ ಉದ್ಯಮಿ–ವ್ಯಾಪಾರಿಗಳು ಹೇರಳವಾಗಿ ಹಣ ಸುರಿಯುತ್ತಾರೆ. ಹೀಗೆ ಅಗಾಧ ಮೊತ್ತದ ಹಣವನ್ನು ಪಡೆಯುವ ಜಾಹಿರಾತು ಉದ್ಯಮಕ್ಕೆ ಪ್ರತಿಭಾನ್ವಿತ ಕಲಾವಿದರು, ಅನುಭವಿ ತಂತ್ರಜ್ಞರು ಬೇಕು. ಆದ್ದರಿಂದ ಅವರ ಪ್ರತಿಭೆ–ಜನಪ್ರಿಯತೆಗಳನ್ನು ಬಳಸಿಕೊಳ್ಳಲು ಧಾರಾಳವಾಗಿ ಹಣ ಕೊಟ್ಟು ಅವರನ್ನು ಜಾಹಿರಾತು ಉದ್ಯಮ ಆಕರ್ಷಿಸುತ್ತದೆ. ಸೂಪರ್ ಸ್ಟಾರ್‌ಗಳು, ದೈತ್ಯ ಪ್ರತಿಭೆಯ ಕ್ರೀಡಾಪಟುಗಳು ಮತ್ತು ಧೃಶ್ಯ–ಶ್ರವ್ಯ ಮಾಧ್ಯಮಗಳ ಕಲಾವಿದರು ಉದ್ಯಮ–ವ್ಯಾಪಾರಿಗಳ ಉತ್ಪನ್ನಗಳನ್ನು ಜಾಹಿರಾತುಗಳ ಮೂಲಕ ಕೀರ್ತಿಸುವ ಬುಡುಬುಡುಕೆ ದಾಸರಾಗುವುದೂ ಸುಲಭವಾಗಿ ಕೈಗೆ ಬರುವ ಈ ಹಣಕ್ಕಾಗಿಯೇ.

ಮುಖ್ಯವಾದ ಪ್ರಶ್ನೆ, ಜಾಹಿರಾತುಗಳ ಪ್ರಕಟಣೆಯ ಮೂಲಕ ಸರಕು–ಸೇವೆಗಳ ಉದ್ಯಮಿ–ವ್ಯಾಪಾರಿ ಮತ್ತು ಜಾಹಿರಾತುಗಳ ಉದ್ಯಮಿ–ವ್ಯಾಪಾರಿಗಳ ನಡುವೆ ಕೈ ಬದಲಾಯಿಸುವ ಅಗಾಧ ಹಣದ ಮೂಲ ಯಾವುದು? ಅದನ್ನು ಎಲ್ಲಿಂದ, ಹೇಗೆ ಪಡೆಯಲಾಗುತ್ತಿದೆ? ಈ ಹಣದ ಮೌಲ್ಯವನ್ನು ಯಾರು ಸೃಷ್ಟಿಸುತ್ತಿದ್ದಾರೆ? ಜಾಹಿರಾತಿನ ವೆಚ್ಚವನ್ನು ಅಂತಿಮವಾಗಿ ಯಾರು ಕೊಡುತ್ತಿದ್ದಾರೆ?

ಹಣ ಈ ಮೊದಲೇ ಹೇಳಿದಂತೆ ಸರಕು–ಸೇವೆಗಳ ವಿನಿಮಯದ ಮಾಧ್ಯಮ. ಇದನ್ನು ಬಿಟ್ಟರೆ ಹಣಕ್ಕೆ ತನ್ನದೇ ಆದ ಅಸ್ತಿತ್ವವಿಲ್ಲ. ಆದರೆ ಅದು ಚಿನ್ನ–ಬೆಳ್ಳಿ, ಭೂಮಿ ಮತ್ತಿತರ ಸಂಪತ್ತಿನ ರೂಪಗಳಿಗಿಂತ ಸುಲಭವಾಗಿ ವೇಷ ಬದಲಾಯಿಸುವ ಮಾಯಾವಿ ಸರಕು. ಅದರ ವ್ಯಾಪಾರ ಬ್ಯಾಂಕುಗಳ ಮೂಲಕ. ಬ್ಯಾಂಕುಗಳಿಲ್ಲದೆ ವ್ಯಾಪಾರವಿಲ್ಲ. ವಿನಿಮಯದಲ್ಲಿ ಹಣ ಯಾವ ಸರಕು–ಸೇವೆಯ ರೂಪವನ್ನು ಬೇಕಾದರೂ ತಾಳಬಹುದು. ಆದ್ದರಿಂದ ಬಂಡವಾಳವಾದೀ ಆರ್ಥಿಕತೆಯಲ್ಲಿ ವ್ಯಾಪಾರದ ಜೀವರಸವೇ ಹಣ. ಈ ಜೀವರಸವನ್ನು ದುಡಿಮೆಗಾರರ ಶ್ರಮಶಕ್ತಿಯನ್ನು ಹಿಂಡಿ ಪಡೆದ ಮಿಗತೆ ಮೌಲ್ಯದ ರೂಪಗಳಾದ ಬಡ್ಡಿ, ಬಾಡಿಗೆ, ಲಾಭ ಮತ್ತು ಕಮೀಷನ್ನುಗಳಿಂದ ಬಂಡವಳಿಗರು ತಯಾರು ಮಾಡುತ್ತಾರೆ. ದುಡಿಮೆಗಾರರ ಮೈಲ್ಲಿರುವ ಶ್ರಮಶಕ್ತಿಗೆ ಜೀವವಿದೆ. ಹಣಕ್ಕೆ ಜೀವವಿಲ್ಲ. ಆದರೆ ಶ್ರಮಶಕ್ತಿಯ ವಿನಿಮಯ ಮೌಲ್ಯವನ್ನು ಪಡೆದಿರುವುದರಿಂದ ಅದನ್ನು ಜೀವರಹಿತ ಶ್ರಮಶಕ್ತಿ ಅಥವಾ ಸಂಚಿತ ಶ್ರಮಶಕ್ತಿ ಎನ್ನುತ್ತಾರೆ. ಜಾಹಿರಾತುಗಳ ಮೂಲಕ ಕೈ ಬದಲಾಯಿಸುವ ಅಗಾಧ ಮೊತ್ತದ ಹಣ ವಾಸ್ತವವಾಗಿ ದುಡಿಮೆಗಾರರ ಸಂಚಿತ ಶ್ರಮಶಕ್ತಿಯೇ. ಒಮ್ಮೆ ಅವರಿಂದ ಬೇರ್ಪಟ್ಟಿತೆಂದರೆ ಅದು ಉದ್ಯಮಿ–ವ್ಯಾಪಾರಿಗಳನ್ನು ಸೇರುತ್ತದೆ. ಬಳಕೆದಾರರನ್ನು ಮುಟ್ಟಿ ವ್ಯಾಪಾರದ ಮೂಲಕ ಅವರಲ್ಲಿರುವ ಶ್ರಮಶಕ್ತಿಯ ಸಂಚಿತ ರೂಪವನ್ನು ಹೀರಿಕೊಂಡು ಬಂಡವಳಿಗರನ್ನು ಸೇರುತ್ತದೆ.

ಜಾಹಿರಾತಿನ ವೆಚ್ಚ – ದುಪ್ಪಟ್ಟು ತೆರಿಗೆ

ಬಳಕೆದಾರರ ಬೇಡಿಕೆ–ಅಗತ್ಯಗಳಿಗಿಂತ ಹೆಚ್ಚಿನ ಸರಕು–ಸೇವೆಗಳ ಅತ್ಯುತ್ಪಾದನೆ ಸಮಾಜವಾದೀ ಆರ್ಥಿಕತೆಯಲ್ಲಿ ಸಮೃದ್ಧಿಯನ್ನು ತರುತ್ತದೆ. ಅದೇ ಬಂಡವಾಳಶಾಹಿ ಆರ್ಥಿಕತೆಯಲ್ಲಿ ಬಂಡವಳಿಗರಿಗೆ ಲಾಭ–ಬಡ್ಡಿ–ಬಾಡಿಗೆಗಳ ಇಳಿಮುಖ ಬೆಳವಣಿಗೆಗೆ ದಾರಿಮಾಡುತ್ತದೆ. ಹೀಗೆ ಉಂಟಾದ ಬಿಕ್ಕಟ್ಟನ್ನು ಎದುರಿಸಲು ಒಂದು ಕಡೆ ದುಡಿಮೆಗಾರರ ಉದ್ಯೋಗಗಳನ್ನು ಕಡಿತಗೊಳಿಸಿದರೆ, ಮತ್ತೊಂದು ಕಡೆ ಸರಕು–ಸೇವೆಗಳ ಶೀಘ್ರ ಮಾರಾಟಕ್ಕಾಗಿ ಎಲ್ಲೆ ಮೀರಿದ ಜಾಹಿರಾತಿನ ಅಗತ್ಯ ಬೀಳುತ್ತದೆ. ಇಂದಿನ ಜಾಹಿರಾತು ವ್ಯಾಪಾರ ವೃದ್ಧಿಸಲು ಇದೇ ಮೂಲಕಾರಣ. ಸರಕು–ಸೇವೆಗಳ ಅತ್ಯುತ್ಪಾದನೆ ವಿನಿಮಯ ಸರಕಾದ ಹಣದ ಅತ್ಯುತ್ಪಾದನೆಗೂ ದಾರಿ ಮಾಡಿಕೊಟ್ಟಿದ್ದು ಈ ಕಾಲದಲ್ಲಿ ಭಾರತದ ಬಂಡವಳಿಗರು ಎದುರಿಸುತ್ತಿರುವ ಮತ್ತೊಂದು ಬಿಕ್ಕಟ್ಟು. ಇದರಿಂದಾಗಿ ಭಾರತದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಿತು. ಹಣದುಬ್ಬರ ಹೆಚ್ಚಾಯಿತು. ಬೆಲೆಗಳು ಗಗನಕ್ಕೇರಿದವು. ಜನಸಾಮಾನ್ಯರ ಕಷ್ಟಗಳು ಒಂದಾದ ಮೇಲೊಂದರಂತೆ ಹೆಚ್ಚುತ್ತಾ ಹೋದವು. ಯಾವುದು ಸಮಾಜವಾದೀ ಆರ್ಥಿಕತೆಯಲ್ಲಿ ಏಕಕಾಲಕ್ಕೆ ಸಮೃದ್ಧಿಯಾಗಬಹುದಿತ್ತೊ ಅದೇ ಬಂಡವಾಳವಾದೀ ಆರ್ಥಿಕತೆಯಲ್ಲಿ ಆರೋಗ್ಯಕ್ಕೆ ಮಾರಕವಾಗಿ ಬೆಳೆಯುವ ಕ್ಯಾನ್ಸರ್ ಆಯಿತು. ಸ್ವಂತ ಕೈಕಾಲುಗಳೇ ಹೊರಲಾರದಷ್ಟು ಬೊಜ್ಜು ಬೆಳೆದರೆ ಆರೋಗ್ಯ ಹೇಗೆ ಸಾಧ್ಯ? ಬಂಡವಳಿಗರಿಗೆ ಮಾರಕವಾದ ಈ ಬೆಳವಣಿಗೆಯನ್ನು ತಡೆಯಲು ಕೈಗೊಂಡ ತಾತ್ಕಾಲಿಕ ಕ್ರಮ ಐನೂರು, ಸಾವಿರ ರೂ ನೋಟುಗಳ ಅಮಾನ್ಯೀಕರಣ. ಇದರಿಂದ ಸದ್ಯಕ್ಕೆ ಅನುಕೂಲವಾಗಿದ್ದು ಬಂಡವಳಿಗರಿಗೆ. ಸಾಕಷ್ಟು ತೊಂದರೆಯಾಗಿದ್ದು ಜನಸಾಮಾನ್ಯರಾದ ಬಳಕೆದಾರರಿಗೆ, ಮುಖ್ಯವಾಗಿ ದುಡಿಮೆಗಾರರಿಗೆ.

ಸಂಚಿತ ಶ್ರಮಶಕ್ತಿಯ ವಿನಿಮಯ ಮಾಧ್ಯಮದ ರೂಪವಾದ ಹಣ ಜನರು ಸರ್ಕಾರಕ್ಕೆ ಕೊಡುವ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳೇ ಅಭಿವೃದ್ಧಿಗಾಗಿ ಖರ್ಚುಮಾಡಲು ಸರ್ಕಾರಕ್ಕೆ ಸಿಗುವ ಒಟ್ಟು ಮೊತ್ತ. ಇದರಲ್ಲಿ ಸೇರಬೇಕಾಗಿದ್ದು ಮಿತಿಗೊಳಪಟ್ಟು ತೆರಿಗೆ ವಿನಾಯತಿಯಾಗಿ ತೆರಿಗೆದಾರರ ಬಳಿ ಉಳಿಯುವ ಹಣದ ಒಟ್ಟು ಮೊತ್ತ ನಗಣ್ಯ. ಆದರೆ ಉದ್ಯಮ–ವ್ಯಾಪಾರಗಳ ವೃದ್ಧಿಗಾಗಿ ಮಾಡಿದ ವೆಚ್ಚವೆಂದು, ಜಾಹಿರಾತುಗಳಿಗಾಗಿ ಉದ್ಯಮಿ–ವ್ಯಾಪಾರಿಗಳು ಮಾಡುವ ಮಿತಿಯಿಲ್ಲದ ವೆಚ್ಚ ತೆರಿಗೆ ವಿನಾಯತಿಯಾಗಿ ಸರ್ಕಾರದ ಒಟ್ಟು ಆದಾಯದಲ್ಲಿ ಕಡಿತಗೊಳ್ಳುವ ಹಣದ ಮೊತ್ತ ನಗಣ್ಯವಲ್ಲ. ಇಡೀ ಭಾರತದಲ್ಲಿ, ಎಲ್ಲ ಉದ್ಯಮ–ವ್ಯಾಪಾರಿಗಳ ವಾರ್ಷಿಕ ವಹಿವಾಟಿನಲ್ಲಿ ಅವರು ತಮ್ಮ ಲೆಕ್ಕಪತ್ರ ವರದಿಯಲ್ಲಿ ತೆರಿಗೆ ರಿಯಾಯತಿಗೆಂದು ನಮೂದಿಸುವ ಜಾಹಿರಾತು ವೆಚ್ಚವನ್ನು ಲೆಕ್ಕ ಹಾಕಿದರೆ ಎಷ್ಟು ಅಗಾಧ ಹಣ ಸರಕಾರದ ಆದಾಯಕ್ಕೆ ಸೇರಬೇಕಾಗಿತ್ತೆಂಬ ಅಂದಾಜು ಸಿಗುತ್ತದೆ. ಇದಕ್ಕೆ ಸಂಬಂಧಿಸಿದ ಒಟ್ಟು ಅಂಕಿ ಅಂಶಗಳು ಎಲ್ಲೂ ಸಿಗುವುದಿಲ್ಲ.

ಇದರ ಹೊರೆ ಜನಸಾಮಾನ್ಯ ಬಳಕೆದಾರರು ಮತ್ತು ದುಡಿಮೆಗಾರರ ಮೇಲೆ ಎರಡು ಪಟ್ಟಾಗಿ ಬೀಳುತ್ತಿದೆ. ಒಂದು: ಉದ್ಯಮಿ–ವ್ಯಾಪಾರಿಗಳು ಜಾಹಿರಾತಿನ ವೆಚ್ಚವನ್ನು ಸರಕು–ಸೇವೆಗಳ ಮಾರಾಟದ ಬೆಲೆಯಲ್ಲಿ ಸೇರಿಸುವುದರಿಂದ ಈ ಸಂಬಂಧ ಉದ್ಯಮಿ–ವ್ಯಾಪಾರಿಗಳು ಸರ್ಕಾರದಿಂದ ಪಡೆಯುವ ತೆರಿಗೆ ರಿಯಾಯತಿಯ ಹೊರೆಯನ್ನು ಬಳಕೆದಾರರೇ ಹೊತ್ತುಕೊಂಡಿದ್ದಾರೆ. ಎರಡು: ಸರ್ಕಾರದ ಒಟ್ಟು ಆದಾಯಕ್ಕೆ ಸೇರಬೇಕಾಗಿದ್ದ ಹಣದ ಮೊತ್ತ ಜಾಹಿರಾತು ಖರ್ಚಿನ ತೆರಿಗೆ ರಿಯಾಯಿತಿಯ ಹೆಸರಿನಲ್ಲಿ ಉದ್ಯಮಿ–ವ್ಯಾಪಾರಿಗಳಲ್ಲೇ ಉಳಿಯುವುದರಿಂದ ವಾರ್ಷಿಕ ಆಯ–ವ್ಯಯದ ಮಂಡನೆಯಲ್ಲಿ ತೋರಿಸುವ ವಿತ್ತೀಯ ಕೊರತೆ ಅನವಶ್ಯಕವಾಗಿ ದೊಡ್ಡದಾಗುತ್ತದೆ. ಮತ್ತು ಅಭಿವೃದ್ಧಿಗಾಗಿ ಮಾಡುವ ಸಾಲದ ಹೊರೆಯೂ ಅನವಶ್ಯಕವಾಗಿ ಹೆಚ್ಚಾಗುತ್ತದೆ. ಈ ಹೊರೆಗಳನ್ನು ಮತ್ತೆ, ಬಳಕೆದಾರರಾದ ಸಾಮಾನ್ಯಜನರು ಮತ್ತು ದುಡಿಮೆಗಾರರೇ ಹೊರಬೇಕಾಗುತ್ತದೆ.

ಈ ದುಪ್ಪಟ್ಟು ಹೊರೆಯನ್ನು ತಪ್ಪಿಸಲು ಇರುವ ಮಾರ್ಗ ಒಂದೇ. ಉದ್ಯಮಿ–ವ್ಯಾಪಾರಿಗಳಿಗೆ ಜಾಹಿರಾತುಗಳ ವೆಚ್ಚಕ್ಕೆಂದು ಕೊಡಮಾಡುತ್ತಿರುವ ತೆರಿಗೆ ರಿಯಾಯತಿಯನ್ನು ಕೂಡಲೇ ನಿಲ್ಲಿಸುವುದು. ಇದರಿಂದ ಜಾಹಿರಾತುಗಳ ಹಾವಳಿ ಕಡಿಮೆಯಾಗುತ್ತದೆ. ಅನವಶ್ಯಕವಾದ ವ್ಯಾಪಾರವಾಗಿ ಬೆಳೆಯುತ್ತಿರುವ ಜಾಹಿರಾತು ಉದ್ಯಮಕ್ಕೆ ಕಡಿವಾಣ ಬೀಳುತ್ತದೆ. ಬಳಕೆದಾರರ ಮೇಲೆ ಬೀಳುತ್ತಿರುವ ದುಪ್ಪಟ್ಟು ಹೊರೆ ತಗ್ಗುತ್ತದೆ. ಹೇಗಿದ್ದರೂ ಸರಕು–ಸೇವೆಗಳ ಬೆಲೆಯಲ್ಲಿ ಇತರ ವೆಚ್ಚಗಳೊಂದಿಗೆ ಜಾಹಿರಾತುಗಳ ವೆಚ್ಚವನ್ನು ಸೇರಿಸುವುದರಿಂದ ಉದ್ಯಮಿ–ವ್ಯಾಪಾರಿಗಳ ನೈಜ ಆದಾಯವೇನೂ ಕಡಿಮೆಯಾಗುವುದಿಲ್ಲ. ●

ಕೋಮುವಾದಿ ಧ್ರುವೀಕರಣ ಮತ್ತು ಜಾತಿ ನೆಲೆಯ ಸಾಮಾಜಿಕ ತಂತ್ರಗಾರಿಕೆಯ ಬಿಜೆಪಿ ವಿಷಮಿಶ್ರಣ

ಸೀತಾರಾಮ್ ಯೆಚುರಿ



ಉತ್ತರಪ್ರದೇಶ ಚುನಾವಣೆಗಳಲ್ಲಿ ಭರ್ಜರಿ ವಿಜಯ ನೋಟುರದ್ಧತಿಗೆ ಮತ್ತು ತನ್ನ ಉತ್ತಮ ಆಳ್ವಿಕೆಗೆ ಜನರು ವ್ಯಕ್ತಪಡಿಸಿದ ಅನುಮೋದನೆ ಎಂಬ ಬಿಜೆಪಿಯ ದಾವೆ ಪಂಜಾಬ್, ಗೋವಾ ಮತ್ತು ಮಣಿಪುರದಲ್ಲಿ ಅದು ಪಡೆದಿರುವ ಫಲಿತಾಂಶಗಳನ್ನು ನೋಡಿದಾಗ ಸಂಪೂರ್ಣವಾಗಿ ಅಸಮರ್ಥನೀಯ. ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ ಅದರ ವಿಜಯಕ್ಕೆ ಕಾರಣವಾಗಿರುವ ಅಂಶಗಳು ಹಲವು, ಮುಖ್ಯವಾಗಿ, ಕೋಮುವಾದಿ ಧ್ರುವೀಕರಣ ಮತ್ತು ಜಾತಿ–ಆಧಾರಿತ ಸಾಮಾಜಿಕ ತಂತ್ರಗಾರಿಕೆಯ ಪರಿಣಾಮಕಾರಿ ಬೆರಕೆ ಅದಕ್ಕೆ ಕಾರಣ.

ವಿಧಾನಸಭಾ ಚುನಾವಣೆಗಳ ಪ್ರಸಕ್ತ ಸುತ್ತಿನಲ್ಲಿ ಬಿಜೆಪಿ ಬೆರಗುಗೊಳಿಸುವ ಜಯಭೇರಿ ಬಾರಿಸಿದೆ. ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ 2014ರ ಚುನಾವಣಾ ಸಾಧನೆಯನ್ನು ಉಳಿಸಿಕೊಳ್ಳುವುದು ಅದಕ್ಕೆ ಸಾಧ್ಯವಾಗಿದೆ.

2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಅದಕ್ಕೆ ಉತ್ತರಪ್ರದೇಶದಲ್ಲಿ 42.3ಶೇ ಮತ್ತು ಉತ್ತರಾಖಂಡದಲ್ಲಿ 55.3ಶೇ. ಮತಗಳು ದಕ್ಕಿದ್ದವು. ಈ ವಿಧಾನಸಭಾ ಚುನಾವಣೆಗಳಲ್ಲಿ ಅದಕ್ಕೆ ಉತ್ತರಪ್ರದೇಶದಲ್ಲಿ 39.7 ಶೇ. ಮತ್ತು ಉತ್ತರಾಖಂಡದಲ್ಲಿ 46.5ಶೇ. ಸಿಕ್ಕಿದೆ.

ಆದರೆ ಪಂಜಾಬಿನಲ್ಲಿ ಅದಕ್ಕೆ ಶೋಚನೀಯ ಸೋಲು ಎದುರಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಅಕಾಲಿದಳ–ಬಿಜೆಪಿ ಸರಕಾರವನ್ನು ದೊಡ್ಡ ಅಂತರದಲ್ಲಿ ಪಲ್ಲಟಗೊಳಿಸಲು ಸಾಧ್ಯವಾಗಿದೆ.

ಗೋವಾ ಮತ್ತು ಮಣಿಪುರದಲ್ಲಿ ಕಾಂಗ್ರೆಸ್ ಪಕ್ಷ ಅತಿ ದೊಡ್ಡ ಪಕ್ಷವಾಗಿ ಮೂಡಿ ಬಂದಿದೆ, ಆದರೆ ಬಹುಮತ ಪಡೆಯಲಾಗಿಲ್ಲ. ಬಿಜೆಪಿ ಈ ಎರಡೂ ರಾಜ್ಯಗಳಲ್ಲಿ ಹೇಗೋ ಸರಕಾರಗಳನ್ನು ರಚಿಸಿದೆ. ಇಲ್ಲಿ ಅದು ಬೆದರಿಕೆ, ಭ್ರಷ್ಟಾಚಾರ ಮತ್ತು ಸಂಪುಟ ಸ್ಥಾನಗಳ ಮೂಲಕ ತುಷ್ಟೀಕರಣ ಮತ್ತು ಹಣಬಲದ ವಿಷಮಿಶ್ರಣವನ್ನು ವಿಧ್ವಂಸಕಾರಿ ರೀತಿಯಲ್ಲಿ ಬಳಸಿಕೊಂಡು ಬಹುಮತಗಳನ್ನು ಸೃಷ್ಟಿಸಿಕೊಂಡಿದೆ, ಆಮೂಲಕ ಜನತೆಯ ತೀರ್ಪಿನ ನಿರಾಕರಣೆ ಮಾಡಿದೆ.

ಈ ವಿಜಯ ನೋಟುರದ್ಧತಿಗೆ ಮತ್ತು ತನ್ನ ಉತ್ತಮ ಆಳ್ವಿಕೆಗೆ ಜನರು ವ್ಯಕ್ತಪಡಿಸಿದ ಅನುಮೋದನೆ ಎಂಬ ಬಿಜೆಪಿಯ ದಾವೆ ಪಂಜಾಬ್, ಗೋವಾ ಮತ್ತು ಮಣಿಪುರದಲ್ಲಿ ಅದು ಪಡೆದಿರುವ ಫಲಿತಾಂಶಗಳನ್ನು ನೋಡಿದಾಗ ಸಂಪೂರ್ಣವಾಗಿ ಅಸಮರ್ಥನೀಯ. ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ ಅದರ ವಿಜಯಕ್ಕೆ ಕಾರಣವಾಗಿರುವ ಅಂಶಗಳು ಹಲವು, ಮುಖ್ಯವಾಗಿ, ಕೋಮುವಾದಿ ಧ್ರುವೀಕರಣ ಮತ್ತು ಜಾತಿ–ಆಧಾರಿತ ಸಾಮಾಜಿಕ ತಂತ್ರಗಾರಿಕೆಯ ಪರಿಣಾಮಕಾರಿ ಬೆರಕೆ ಅದಕ್ಕೆ ಕಾರಣ.

ಈಗ ಲೋಕಸಭೆಯಲ್ಲಿ ಬಿಜೆಪಿಯ ಒಬ್ಬರಾದರೂ ಮುಸ್ಲಿಮ್ ಸದಸ್ಯರಿಲ್ಲ. ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ ಅದು ಒಬ್ಬರಾದರೂ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸಲಿಲ್ಲ. ಇದರ ಸಂದೇಶ ಯಾರೂ ನಿರಾಕರಿಸಲಾರದಷ್ಟು ಸ್ಪಷ್ಟ. ಅದು 2014ರಲ್ಲಿ ತನ್ನ 'ಯಶಸ್ವಿ ಗುಜರಾತ್ ಮಾದರಿ'ಯ ಪ್ರಚಾರದ ಮೂಲಕ ನೀಡಿದ ಸಂದೇಶ. ಈ ಮಾದರಿಯ ಬಗ್ಗೆ ಮುಂದಿಟ್ಟ ದಾವೆಗಳೆಲ್ಲ ಶುದ್ಧ ಸುಳ್ಳುಗಳು ಎಂದು ಕಂಡುಬಂದರೂ, ಆಮೂಲಕ ನೀಡಿದ ದುಷ್ಟ ಸಂದೇಶವೆಂದರೆ ಗುಜರಾತಿನ ಯಶಸ್ಸು 2002ರ ಕೋಮುವಾದಿ ಹತ್ಯಾಕಾಂಡದ ನಂತರ ಆ ರಾಜ್ಯವನ್ನು ಮುಸ್ಲಿಮರಿಂದ ಶುದ್ಧೀಕರಿಸಲಾಯಿತು ಎಂಬುದೇ– ಅಂದರೆ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಘಾತಕ ಪ್ರಚಾರ ತಂತ್ರ.

ಪ್ರಧಾನ ಮಂತ್ರಿಗಳ 'ಕಬ್ರಿಸ್ತಾನ್' ಮತ್ತು 'ಶಂಶಾನ್‌ಘಾಟ್', ಈದ್ ಮತ್ತು ದೀಪಾವಳಿಯ ಕುಟುಕು ನುಡಿಗಳೊಂದಿಗೆ ಈ ದುಷ್ಟ ಕೋಮುವಾದಿ ಪ್ರಚಾರವನ್ನು ಹರಿಯಬಿಡಲಾಯಿತು. ಬಿಜೆಪಿ ಅಧ್ಯಕ್ಷರು ಇದಕ್ಕೆ 'ಕಸಬ್' ಎಂಬ ಹೊಸ ಪದ ಸೇರಿಸಿ ಕಾಂಗ್ರೆಸ್–ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿ ಮುಸ್ಲಿಮ್ ತುಷ್ಟೀಕರಣದ ಪ್ರತಿಪಾದಕರು ಎಂದು ಬಿಂಬಿಸಿದರು. ತಕ್ಷಣವೇ ಇದು ಬಿಜೆಪಿಯ ಪ್ರಧಾನ ಪ್ರತಿದ್ವಂದ್ವಿ ಪಕ್ಷಗಳು ಪಾಕಿಸ್ತಾನ ಪ್ರಾಯೋಜಿಸುವ ಗಡಿಯಾಚೆಯ ಭಯೋತ್ಪಾದನೆಯೊಡನೆ ಬಲವಾದ ಕೊಂಡಿ ಉಳ್ಳವರು ಎಂದೂ ಬಿಂಬಿಸಿತು.

ತದ್ವಿರುದ್ಧವಾಗಿ, ಬಿಜೆಪಿ ತನ್ನ 'ಮಿಂಚಿನ ಪ್ರಹಾರ'ಗಳು ಯಶಸ್ವಿಯಾಗಿವೆ ಎನ್ನುತ್ತ ತನ್ನ ಪಾಕಿಸ್ತಾನ–ವಿರೋಧವನ್ನು , ಆಮೂಲಕ ಮುಸ್ಲಿಮ್–ವಿರೋಧವನ್ನು ಟಾಂಟಾಂ ಮಾಡಿತು(ಇಂತಹ ದಾವೆಗಳೂ ಸುಳ್ಳು ಎಂಬುದು ಈಗಾಗಲೇ ಕಂಡುಬಂದಿದೆ, ಏಕೆಂದರೆ ಈ 'ಮಿಂಚಿನ ಪ್ರಹಾರ'ಗಳ ನಂತರದ ಮೂರು ತಿಂಗಳಲ್ಲಿ ಭಯೋತ್ಪಾದಕ ದಾಳಿಗಳಲ್ಲಿ ಪ್ರಾಣ ಕಳಕೊಂಡ ನಮ್ಮ ವೀರ ಯೋಧರ ಸಂಖ್ಯೆ ಅದಕ್ಕೆ ಹಿಂದಿನ ಮೂರು ತಿಂಗಳಿಗಳಿಗೆ ಹೋಲಿಸಿದರೆ ಎರಡು ಪಟ್ಟಾಗಿದೆ)

ಇಂತಹ ಕೋಮುವಾದಿ ಪ್ರಚಾರಗಳು ಮುಸ್ಲಿಂ ಜನಸಂಖ್ಯೆ ಗಮನಾರ್ಹವಾಗಿರುವ ರಾಜ್ಯಗಳಲ್ಲಿ ಮಾತ್ರ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು. ಈ ಸಂಗತಿಯೇ ಇತರ ಮೂರು ರಾಜ್ಯಗಳಲ್ಲಿ ಅದು ಅಂತಹ ಮ್ಯಾಜಿಕ್ ಏಕೆ ಮಾಡಲಾಗಲಿಲ್ಲ ಎಂಬುದಕ್ಕೆ ವಿವರಣೆ ಕೊಡುತ್ತದೆ. ಆರೆಸ್ಸೆಸ್‌ನ ವದಂತಿ ಹರಡುವ ತಂಡಗಳು ಒಂದು 'ಮುಸ್ಲಿಮ್ ಸರಕಾರ' ಬರುತ್ತಿದೆ ಎಂಬ ಮಂತ್ರದ ಮೂಲಕ ಜನಗಳನ್ನು ಉತ್ತರಪ್ರದೇಶದ ಜಾತ್ಯತೀತ ಪಕ್ಷಗಳ ವಿರುದ್ಧ ಅಣಿನೆರೆಸಿದವು.

ಎಸ್‌ಪಿ–ಕಾಂಗ್ರೆಸ್ ಮತ್ತು ಬಿಎಸ್‌ಪಿ ಎರಡೂ ಒಂದು ಪ್ರತಿ–ಕಥನವನ್ನು ಮುಂದಿಡುವ ಬದಲು ಈ ಕಥನದ ಬಲೆಗೆ ಬಿದ್ದವು. ಬಿಎಸ್‌ಪಿ ಮುಖ್ಯಸ್ಥರು ತಾವು ನೂರು ಮುಸ್ಲಿಂ ಅಭ್ಯರ್ಥಿಗಳನ್ನು ನಿಲ್ಲಿಸಿದ್ದೇವೆ, ಎಸ್‌ಪಿ–ಕಾಂಗ್ರೆಸ್ ಕೂಟಕ್ಕೆ ಮತ ಹಾಕಬೇಡಿ, ಏಕೆಂದರೆ ತನ್ನ ಮುಸ್ಲಿಮ್‌ಪರತೆ ಹೆಚ್ಚು ವಿಶ್ವಾಸಾರ್ಹವಾಗಿದೆ ಎಂದೇ ಸತತವಾಗಿ ಜನರಿಗೆ ನೆನಪಿಸುತ್ತ ಹೋದರು.

ಇದರೊಂದಿಗೇ ಬಿಜೆಪಿಯ ಚುನಾವಣಾ ಕಾರ್ಯತಂತ್ರ ಬಹುಪಾಲು ಯಾದವ ಜಾತಿ ನೆಲೆಯೇ ಇರುವ ಎಸ್‌ಪಿ ಮತ್ತು ಜಾಟವ್ ಜಾತಿಯ ಮಧ್ಯೆಯೇ ಪ್ರಧಾನ ಬೆಂಬಲ ನೆಲೆ ಹೊಂದಿರುವ ಬಿಎಸ್‌ಪಿಗೆ ಪ್ರತಿಯಾಗಿ ಯಾದವೇತರ ಒಬಿಸಿಗಳನ್ನು ಮತ್ತು ಜಾಟವೇತರ ಪರಿಶಿಷ್ಟ ಜಾತಿಗಳವನ್ನು ಅಣಿನೆರೆಸುವ ಒಂದು ಸಾಮಾಜಿಕ ತಂತ್ರಗಾರಿಕೆಯನ್ನು ಪರಿಪೂರ್ಣಗೊಳಿಸಿತು.

ಜಾತ್ಯಾತೀತ ಪ್ರತಿಪಕ್ಷಗಳಿಂದ ಒಂದು ಪ್ರತಿ–ಕಥನದ ಕೊರತೆ ಬಿಜೆಪಿಯ ಯಶಸ್ಸನ್ನು ಸುಲಭಗೊಳಿಸಿತು. ಬಿಹಾರ ವಿಧಾನಸಭಾ ಚುನಾವಣೆಗಳಲ್ಲಿ ಮೂಡಿಬಂದಂತೆ ಉತ್ತರಪ್ರದೇಶದಲ್ಲೂ ಒಂದು 'ಮಹಾಜೋತ್' ಏರ್ಪಟ್ಟಿದ್ದರೆ ಖಂಡಿತವಾಗಿ ಬಿಜೆಪಿಯನ್ನು ತಡೆದು ನಿಲ್ಲಿಸಬಹುದಿತ್ತು ಎಂದು ಈಗ ವಾದಿಸಲಾಗುತ್ತಿದೆ. ಎಸ್‌ಪಿ, ಕಾಂಗ್ರೆಸ್, ಬಿಎಸ್‌ಪಿ ಮತ್ತು ಆರ್‌ಎಲ್‌ಡಿ ಗಳಿಸಿದ ಮತಗಳನ್ನು ಜೋಡಿಸಿದರೆ ಈ 'ಮಹಾಜೋತ್' 311 ವಿಧಾನಸಭಾ ಸ್ಥಾನಗಳನ್ನು ಗಳಿಸುತ್ತಿತ್ತು, ಬಿಜೆಪಿಗೆ ಕೇವಲ 90 ಉಳಿಯುತ್ತಿತ್ತು ಎಂದು ಚುನಾವಣಾ ಅಂಕಿ–ಅಂಶಗಳನ್ನು ತೋರಿಸಲಾಗುತ್ತಿದೆ.

ದುರದೃಷ್ಟವಶಾತ್, ರಾಜಕೀಯ ಎಂಬುದು ಅಂಕಗಣಿತವಲ್ಲ. ಬಿಜೆಪಿ ಮುಂದಿಟ್ಟ ಕೋಮುವಾದಿ ಯೋಜನೆಗೆ ಒಂದು ಪರ್ಯಾಯ, ಬಿಜೆಪಿ ಮತ್ತು ಪ್ರಧಾನಿ ಮೋದಿ ಪ್ರತಿಪಾದಿಸಿರುವ ಕಥನಗಳಿಗೆ ವಿರುದ್ಧವಾದ ಒಂದು ಕಥನವನ್ನು ಮುಂದಿಡುವ ಮೂಲಕ ಮಾತ್ರವೇ ಮೂಡಿ ಬರಲು ಸಾಧ್ಯ. ಇಂತಹ ಒಂದು ಜನಪರ ಪರ್ಯಾಯ ಕಥನವನ್ನು ಪ್ರಸ್ತುತಪಡಿಸುವ ಸಾಧ್ಯತೆಗಳು ಇದ್ದವು, ನಿರ್ದಿಷ್ಟವಾಗಿ ಬಹುಪಾಲು ಬಡಜನರು ಮತ್ತು ಅಂಚಿಗೆ ತಳ್ಳಲ್ಪಟ್ಟ ವಿಶಾಲ ವಿಭಾಗಗಳ ಮೇಲೆ ನೋಟುರದ್ಧತಿ ಹೇರಿದ ಅಭೂತಪೂರ್ವ ಆರ್ಥಿಕ ಸಂಕಟಗಳ ನಂತರದ ಸಂದರ್ಭದಲ್ಲಿ.

ನಮ್ಮ ಜಿಡಿಪಿಗೆ 40ಶೇ.ಕ್ಕಿಂತ ಹೆಚ್ಚು ಕಾಣಿಕೆ ನೀಡುವ ಮತ್ತು 80ಶೇ.ಕ್ಕಿಂತ ಹೆಚ್ಚು ಉದ್ಯೋಗಾವಕಾಶಗಳನ್ನು ನಿರ್ಮಿಸುವ ಅನೌಪಚಾರಿಕ ಆರ್ಥಿಕ ವ್ಯವಸ್ಥೆಯನ್ನು ನೋಟು ರದ್ಧತಿ ಸಂಪೂರ್ಣವಾಗಿ ಧೂಳೀಪಟ ಮಾಡಿದೆ ಎಂಬುದೀಗ ಸ್ವಯಂವೇದ್ಯ. ಉತ್ತರಪ್ರದೇಶದಲ್ಲಿ ಗ್ರಾಮೀಣ ಬದುಕು ಚಿಂದಿಯಾಗಿದೆ, ಈಗಲೂ ಹಾಗೆಯೇ ಮುಂದುವರೆದಿದೆ. ರೈತರು ಕರೆನ್ಸಿ ನೋಟುಗಳಿಲ್ಲದೆ ಹತಾಶರಾಗಿ, ಸರಕಾರ ಪ್ರಕಟಪಡಿಸಿದ ಕನಿಷ್ಟ ಬೆಲೆಗಳ ಅರ್ಧಬೆಲೆಗಳಿಗೇ ತಮ್ಮ ಉತ್ಪನ್ನಗಳನ್ನು ಮಾರುತ್ತಿದ್ದರು. ಇಂತಹ ವಿಭಾಗಗಳನ್ನು ತಲುಪಿ ಅವರನ್ನು ಬಿಜೆಪಿಯ ಆರ್ಥಿಕ ಧೋರಣೆಗಳ ವಿರುದ್ಧ ಮತ್ತು ಪ್ರಧಾನ ಮಂತ್ರಿಗಳ ನೋಟುರದ್ಧತಿಯ ವಿರುದ್ಧ ಹೋರಾಟಗಳತ್ತ ಆಕರ್ಷಿಸುವ ಬದಲು ಎಸ್‌ಪಿ–ಕಾಂಗ್ರೆಸ್ ಮತ್ತು ಬಿಎಸ್‌ಪಿ ಎರಡೂ ಬಿಜೆಪಿಯ ಕಥನದ ಬಲೆಗೆ ಬಿದ್ದವು. ಇದು ನೋಟುರದ್ಧತಿ ಶ್ರೀಮಂತ–ವಿರೋಧಿ ಮತ್ತು ಬಡವರ ಪರವಾದ ಕ್ರಮ ಎಂಬ ಬಿಜೆಪಿ ಪ್ರಚಾರಕ್ಕೆ ಇನ್ನಷ್ಟು ಅನುಕೂಲ ಕಲ್ಪಿಸಿತು. ಆದರೆ ವಾಸ್ತವತೆ ತದ್ವಿರುದ್ಧವಾಗಿತ್ತು ತಾನೇ?

ಈ ಪಕ್ಷಗಳ ಇಂತಹ ನಿಲುವು ಈ ಮೊದಲು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲೂ ಸ್ಪಷ್ಟವಾಗಿತ್ತು. ಸಂಸತ್ತಿನ ಹದಿನಾರು ಪ್ರತಿಪಕ್ಷಗಳು ಈ ನೋಟುರದ್ಧತಿಯನ್ನು ವಿರೋಧಿಸಲು ಒಂದುಗೂಡಿದ್ದವು. ಎಡಪಕ್ಷಗಳ ಒತ್ತಾಯದಿಂದಾಗಿ ನವಂಬರ್ 28, 2016ರಂದು ಒಂದು ದೇಶವ್ಯಾಪಿ ಹರತಾಳಕ್ಕೆ ಕರೆ ನೀಡಲಾಯಿತು. ಪ್ರಮುಖ ಜಾತ್ಯತೀತ ಪ್ರತಿಪಕ್ಷಗಳು ಈ ಕರೆಗೆ ಬಾಯಿ ಮಾತಿನ ಬೆಂಬಲ ಸೂಚಿಸಿದರೇ ಹೊರತು ಜನಗಳ ಅಸಂತೃಪ್ತಿಯನ್ನು ಸಕ್ರಿಯವಾಗಿ ಅಣಿನೆರೆಸಲು ನಿರಾಕರಿಸಿದರು. ಈ ವಿಫಲತೆಯಿಂದಾಗಿ ನೋಟು ರದ್ಧತಿಯ ಕುರಿತ ಬಿಜೆಪಿ ಕಥನವೇ ಪ್ರಬಲ ಕಥನವಾಗಿ ಬಿಟ್ಟಿತು. ಈ ಕಥನದ ಬಲೆಗೆ ಬಿದ್ದ ಬೂರ್ಜ್ವಾ ಪ್ರತಿಪಕ್ಷಗಳು ಚುನಾವಣಾ ಬೆಂಬಲಕ್ಕೆ ಜನಗಳನ್ನು ಐಡೆಂಟಿಟಿ ಮತ್ತು ಜಾತಿ ಆಧಾರದಲ್ಲೇ ಅಣಿನೆರೆಸುವ ಪ್ರಯತ್ನದಲ್ಲಿ ತೊಡಗಿದವು.

ಹೀಗೆ ಬೂರ್ಜ್ವಾ ಮಾಧ್ಯಮಗಳಲ್ಲಿ ಬಿಜೆಪಿ ಡಂಗುರ ಬಾರಿಸುವವರ ಸಮರ್ಥ ನೆರವು ಮತ್ತು ಹಣಬಲದ ಅಭೂತಪೂರ್ವ ಪ್ರದರ್ಶನದಿಂದಾಗಿ ಜನಗಳ ಮುಂದೆ ಬಂದ ಏಕೈಕ ಕಥನವೆಂದರೆ ಬಿಜೆಪಿ ಕಥನ ಮಾತ್ರವೇ. ಪರ್ಯಾಯ ಕಥನವನ್ನು ಸ್ಥಾಪಿಸಲು ಪ್ರಯತ್ನಿಸಿದ್ದು ಎಡಪಕ್ಷಗಳು ಮಾತ್ರವೇ. ಆದರೆ ಎಡಪಕ್ಷಗಳ ಬಲವಾದ ಅಸ್ತಿತ್ವ ಕೇರಳ ಮತ್ತು ಇತರ ರಾಜ್ಯಗಳಲ್ಲಿರುವಂತೆ ಈ ರಾಜ್ಯದಲ್ಲಿ ಇಲ್ಲ. ಬಿಜೆಪಿ ಒಂದು ಪರಿಣಾಮಕಾರಿ ಪರ್ಯಾಯದ ಅಭಾವದ ಪ್ರಯೋಜನವನ್ನು ಪಡೆದಿದೆ.

ಬಿಜೆಪಿ ಚುನಾವಣೆಗಳ ವೇಳೆಯಲ್ಲಿ ಪಕ್ಷಗಳ ರಾಜಕೀಯ ಭ್ರಷ್ಟಾಚಾರದ ಬಗ್ಗೆ ಬಹಳಷ್ಟು ಕಾಳಜಿ ಪ್ರದರ್ಶಿಸಿತು. ಈ ಚುನಾವಣೆಗಳು ಅದನ್ನೂ ಆಮೂಲಾಗ್ರವಾಗಿ ಬಯಲಿಗೆಳೆದಿದೆ. ಬಿಜೆಪಿಯ ಹಣಬಲದ ಪ್ರದರ್ಶನವಂತೂ ಅಭೂತಪೂರ್ವವಾಗಿತ್ತು. ಇದು ಗೋವಾ ಮತ್ತು ಮಣಿಪುರದಲ್ಲಿ ಏಕೈಕ ದೊಡ್ಡಪಕ್ಷವಾಗಿ ಮೂಡಿ ಬರದಿದ್ದರೂ ಬಹುಮತಗಳನ್ನು ಹೇಗೋ ಜೋಡಿಸಿಕೊಂಡಿರುವಲ್ಲಿ ಒಂದು ಪ್ರಧಾನ ಪಾತ್ರ ವಹಿಸಿದೆ ಎಂದು ವರದಿಯಾಗಿದೆ.

ಹಣಬಲದ ಬಳಕೆಯನ್ನು ಹತ್ತಿಕ್ಕಲು ಆಳವಾದ ಚುನಾವಣಾ ಸುಧಾರಣೆಗಳು ತುರ್ತಾಗಿ ತಕ್ಷಣವೇ ಆರಂಭವಾಗಬೇಕಾಗಿದೆ. ಬಿಜೆಪಿ ಮತ್ತು ಪ್ರಧಾನ ಮಂತ್ರಿ ಮೋದಿಯವರ ಕಥನಕ್ಕೆ ಪ್ರತಿಯಾದ ಕಥನದ ಶಕ್ತಿಯೇ ಈ ದೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಂದುಗೂಡಿಸುವ ಅತ್ಯಂತ ನಂಬಲರ್ಹ ಬುನಾದಿ. ಇದು ಬಿಜೆಪಿ ಹರಿಯ ಬಿಟ್ಟಿರುವ ತೀಕ್ಷ್ಣ ಕೋಮುವಾದಿ ದಾಳಿಯ ವಿರುದ್ಧ ಕೋಟೆಯಾಗಿ ನಿಲ್ಲುತ್ತದೆ ಮತ್ತು ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಪ್ರಭುತ್ವ ಬುನಾದಿಯನ್ನು ಕಾಯ್ದುಕೊಳ್ಳುತ್ತದೆ.

ಕೊನೆಗೂ, ಈ ಕೋಮುವಾದಿ ಪೆಡಂಭೂತವನ್ನು ಜನತೆಯ ಹೋರಾಟಗಳ ಬಲದ ಮೂಲಕ ಮಾತ್ರವೇ ಸೋಲಿಸಲು ಸಾಧ್ಯ.



ವ್ಯಂಗ್ಯಚಿತ್ರ:ಗೋಕುಲ್, ಡೆಕ್ಕನ್ ಕ್ರಾನಿಕಲ್

ಉತ್ತರಪ್ರದೇಶ–ಒಟ್ಟು 403

ಬಿಜೆಪಿ	312	39.7%
ಅಪ್ನಾ ದಲ್	9	1.0
ಎಸ್‌ಬಿಎಸ್‌ಪಿ	4	0.7
ಎಸ್‌ಪಿ	47	21.8
ಕಾಂಗ್ರೆಸ್	7	6.2
ಬಿಎಸ್‌ಪಿ	19	22.2
ಆರ್‌ಎಲ್‌ಡಿ	1	1.8
ಇತರರು	4	

ಉತ್ತರಾಖಂಡ–ಒಟ್ಟು70

ಬಿಜೆಪಿ	57	46.5%
ಕಾಂಗ್ರೆಸ್	11	33.5
ಪಕ್ಷೇತರರು	2	
ಬಿಎಸ್‌ಪಿ	0	7

ಮಣಿಪುರ–ಒಟ್ಟು 60

ಕಾಂಗ್ರೆಸ್	28	35.1%
ಬಿಜೆಪಿ	21	36.3
ಎಲ್‌ಜೆಪಿ	1	2.5
ಎನ್‌ಪಿಎಫ್	4	7.2
ಎನ್‌ಪಿಪಿ	4	5.1
ಟಿಎಂಸಿ	1	1.4
ಪಕ್ಷೇತರ	1	

ಗೋವ–ಒಟ್ಟು 40

ಕಾಂಗ್ರೆಸ್	17	28.4%
ಬಿಜೆಪಿ	13	32.5
ಎಂಜಿಪಿ	3	11.3
ಜಿಎಫ್‌ಪಿ	3	3.3
ಎನ್‌ಸಿಪಿ	1	2.3
ಪಕ್ಷೇತರರು	3	

ಪಂಜಾಬ್–ಒಟ್ಟು 117

ಕಾಂಗ್ರೆಸ್	77	38.5%
ಎಎಪಿ	20	23.7
ಅಕಾಲಿ ದಳ	15	25.2
ಬಿಜೆಪಿ	3	5.4
ಎಲ್‌ಐಪಿ	2	1.2

ಋಣಾತ್ಮಕ ಬಡ್ಡಿ ದರಗಳು , ನಗದು ರದ್ಧತಿ ಇತ್ಯಾದಿ: ಮರಳಿ ಬಂಗಾರ–ಹಣದ ಯುಗಕ್ಕೆ?



ಆರ್ಥಿಕ ವ್ಯವಹಾರಗಳಲ್ಲಿ ಸರಕಾರದ ಮಧ್ಯಸ್ಥಿಕೆಯನ್ನು ಇಷ್ಟಪಡದ ಹಣಕಾಸು ಬಂಡವಾಳ ಹೂಡಿಕೆಯನ್ನು ಪುಸಲಾಯಿಸುವ ಅಥವಾ ಅವರಿಗೆ ಬಡ್ಡಿಯ 'ಹೊರೆ' ಇಳಿಸುವ ಕ್ರಮಗಳನ್ನು ಮಾತ್ರ. ಸದಾ ಅಪೇಕ್ಷಿಸುತ್ತದೆ. ಈ ಅಪೇಕ್ಷೆ ನಗದನ್ನು ರದ್ದು ಮಾಡಬೇಕೆಂಬ ವರೆಗೂ ಹೋಗುತ್ತಿದೆ. ಅಂದರೆ ಇದರ ಅರ್ಥ ಬಂಗಾರವನ್ನೇ ಹಣವೆಂದು ಮೊಟ್ಟಮೊದಲು ಉಪಯೋಗಿಸಿದ ದಿನದಿಂದಹಣ ಪ್ರಪಂಚದತ್ತ ಯಾತ್ರೆಯನ್ನು ಆರಂಭಿಸಿ ಅದರಿಂದ ಬಹಳ ದೂರ ಸಾಗಿರುವ ಮಾನವಕೋಟಿಯನ್ನು ಪ್ರೌಢಾವಸ್ಥೆಯ ಬಂಡವಾಳಶಾಹಿಯು ತನ್ನ ಉಳಿವಿಗಾಗಿ ಮತ್ತೊಮ್ಮೆ ಬಂಗಾರ ಹಣದ ಸ್ಥಾನದಲ್ಲಿದ್ದ ದಿನಗಳಿಗೆ ತಳ್ಳುತ್ತಿರುವುದು ಒಂದು ವಿಪರ್ಯಾಸ ಎನ್ನುತ್ತಾರೆ

ಪ್ರೊ. ಪ್ರಭಾತ್ ಪಟ್ನಾಯಕ್. ಬಂಡವಾಳಶಾಹಿಯನ್ನು ಅದರ ಬಿಕ್ಕಟ್ಟಿನಿಂದ ಪಾರುಮಾಡಲು ನಗದು ರದ್ಧತಿ ಮತ್ತು ಋಣಾತ್ಮಕ ಬಡ್ಡಿದರ ಮುಂತಾದ ವಿಚಾರಗಳ ಚರ್ಚೆಯಾಗುತ್ತಿದ್ದು ಈ ಬಗ್ಗೆ ಬರೆದಿರುವ 'ಪೀಪಲ್ಸ್ ಡಮಾಕ್ರಸಿ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರೊ. ಪಟ್ನಾಯಕ್ ಲೇಖನ ¯Interest Rates and the use of Cash ಭಾವಾನುವಾದ ಇಲ್ಲಿದೆ.

ಸರ್ಕಾರದ ಕ್ರಮಗಳಿಂದ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವುದನ್ನು ಬಂಡವಾಳ, ಅದರಲ್ಲೂ ಹಣಕಾಸು ಬಂಡವಾಳ ಸದಾಕಾಲವೂ ವಿರೋಧಿಸುತ್ತದೆ. ಏಕೆಂದರೆ, ಬಂಡವಾಳಶಾಹಿಗೆ ಸರಕಾರದ ನೆರವು ಬೇಕಿದ್ದರೆ ಸಮಾಜಕ್ಕೆ ಅದರ ಅಗತ್ಯವಾದರೂ ಏನು ಎಂಬ ಪ್ರಶ್ನೇ ಏಳುತ್ತದೆ. ಮುಖ್ಯವಾಗಿ, ಉತ್ಪಾದನಾ ಪ್ರಕ್ರಿಯೆಯಲ್ಲಿ ಯಾವ ಪಾತ್ರವನ್ನೂ ವಹಿಸದ, ಕುಡಿದ ನೀರು ಅಲ್ಲಾಡದಷ್ಟು ಆರಾಮದ ಹಣಕಾಸು ಬಂಡವಾಳದ ಮಂದಿಯ (ಇವರನ್ನು, ಬಾಡಿಗೆ ಜೀವಿಗಳು, ಕೆಲಸವಿಲ್ಲದ ಹೂಡಿಕೆದಾರರು ಎಂದು ಅರ್ಥಶಾಸ್ತ್ರಜ್ಞ ಕೀನ್ಸ್ ಕರೆದಿದ್ದರು) ಬೊಜ್ಜು ಬೆಳೆಸುವ ಅಗತ್ಯವೇ ಇಲ್ಲ ಎಂಬುದು ಸಾಬೀತಾಗುತ್ತದೆ. ಜೊತೆಗೆ, ಸರ್ಕಾರದ ಬೆಂಬಲದಿಂದಲೇ ಅರ್ಥವ್ಯವಸ್ಥೆ ಮರುಜೀವ ಪಡೆಯಲು ಸಾಧ್ಯ ಎನ್ನುವ ಪರಿಸ್ಥಿತಿಯನ್ನು ತಲುಪಿದರೆ, ಬಂಡವಾಳಶಾಹಿ ಉದ್ದಿಮೆಗಳ ಅವಶ್ಯಕತೆಯಾದರೂ ಏನು? ಈ ಉದ್ದಿಮೆಗಳ ಒಡೆತನವನ್ನು ಸರಕಾರವೇ ವಹಿಸಿಕೊಂಡು ಅರ್ಥವ್ಯವಸ್ಥೆಯನ್ನು ಮುನ್ನಡೆಸಬಾರದೇಕೆ ಎಂಬ ಪ್ರಶ್ನೆಗಳು ಜನ ಮನದಲ್ಲಿ ಮೂಡುತ್ತವೆ.

ಇಂತಹ ಪ್ರಶ್ನೆಗಳು ಏಳುತ್ತವೆ ಎಂಬ ಭಯದಿಂದಲೇ ಹಣಕಾಸು ಬಂಡವಾಳವು ಸರ್ಕಾರದ ಹಣಕಾಸು ನೆರವಿನ ಮಧ್ಯಸ್ತಿಕೆಯನ್ನು ವಿರೋಧಿಸುತ್ತದೆ. ಸರ್ಕಾರದ ನೆರವಿನ ಎಂತಹ ಮಧ್ಯಸ್ತಿಕೆಯನ್ನು ಅದು ಬಯಸುತ್ತದೆ ಎಂದರೆ, ತನ್ನ ವೃತ್ತಿಪರತೆ, ಕೌಶಲ್ಯ, ಚಮತ್ಕಾರದ ವಿಧಾನಗಳಿಗೆ ಧಕ್ಕೆಯಾಗದ ಮತ್ತು ಬಂಡವಾಳಗಾರರ ಹೂಡಿಕೆಯನ್ನು ಪುಸಲಾಯಿಸುವ ಅಥವಾ ಅವರಿಗೆ ಬಡ್ಡಿಯ ಹೊರೆ ಇಳಿಸುವ ಕ್ರಮಗಳನ್ನು ಮಾತ್ರ.

ಈ ಕಾರಣದಿಂದಾಗಿಯೇ ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಗೆ ಚೇತರಿಕೆ ತುಂಬಲು ಕೇಂದ್ರ ಬ್ಯಾಂಕಿನ ಹಣಕಾಸು ನೀತಿಯನ್ನು ಇಷ್ಟಪಡುತ್ತದೆಯಲ್ಲದೆ ಸರ್ಕಾರದ ವಿತ್ತೀಯ ನೀತಿಯನ್ನಲ್ಲ. ಜಾಗತೀಕರಣದ ಇಂದಿನ ದಿನಮಾನದಲ್ಲಿ ರಾಷ್ಟ್ರ ವ್ಯಾಪ್ತಿಯ ಪ್ರಭುತ್ವಗಳು ತಮಗೆ ಇಷ್ಟವಿರಲಿ, ಬಿಡಲಿ ಅಂತಾರಾಷ್ಟ್ರೀಯ ವ್ಯಾಪ್ತಿಯುಳ್ಳ ಹಣಕಾಸು ಬಂಡವಾಳದ ಅಪೇಕ್ಷೆಗೆ ಸಮ್ಮತಿಸಲೇಬೇಕು. ಹಾಗಾಗಿಯೇ, ಅನೇಕ ದೇಶಗಳು ಅರ್ಥವ್ಯವಸ್ಥೆಯ ಚೇತರಿಕೆಗೆ ಸರ್ಕಾರದ ಹಣ ಬಳಸಿಕೊಳ್ಳದೆ ವಿತ್ತೀಯ ಕೊರತೆಯ ಮಿತಿ ಹೇರುವ ಶಿಸ್ತು ಕಾನೂನು ರೂಪಿಸಿಕೊಂಡಿವೆ ಮತ್ತು ಎಲ್ಲೆಡೆಯಲ್ಲೂ ಹಣಕಾಸು ನೀತಿಯೇ ಪ್ರಧಾನ್ಯತೆ ಪಡೆದಿದೆ.

ಈಗ ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿಗೆ ಒಂದು ವಿಚಿತ್ರ ಪರಿಸ್ಥಿತಿ ಉಂಟಾಗಿದೆ. ಮುಂದುವರೆದ ಅನೇಕ ದೇಶಗಳಲ್ಲಿ ಶೂನ್ಯ ಮಟ್ಟದ ಬಡ್ಡಿ ದರ ಇದೆ. ಆದರೂ, ಮುಂಬರುವ ದಿನಗಳಲ್ಲಿ ಗ್ರಾಹಕರ ಬೇಡಿಕೆ ವೃದ್ಧಿಯಾಗುವುದರ ಬಗ್ಗೆ ಬಂಡವಾಳಗಾರರಿಗೆ ಅದೆಷ್ಟು ಭಯವಿದೆ ಎಂದರೆ, ಹೂಡಿಕೆಮಾಡಲು ಯಾರೂ ಮುಂದಾಗುತ್ತಿಲ್ಲ. ಹಾಗಾಗಿ, ಬಂಡವಾಳಶಾಹಿ ಬಿಕ್ಕಟ್ಟು ಮುಂದುವರೆಯುತ್ತಿದೆ. ಅಷ್ಟಾಗಿಯೂ, ಇಂದಿನ ವಿಷಮ ಪರಿಸ್ಥಿತಿಯಲ್ಲಿ ಅರ್ಥವ್ಯವಸ್ಥೆಯನ್ನು ಪುಶ್ಚೇತನಗೊಳಿಸುವ ಸಲುವಾಗಿ ಸರ್ಕಾರದ ಆರ್ಥಿಕ ಉತ್ತೇಜನದ ಬದಲು ಬಡ್ಡಿ ದರ ಇಳಿಕೆ ನೀತಿಗೆ ಅದು ಜೋತು ಬಿದ್ದಿದೆ. ಅಂದರೆ, ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಕಾಯಕಲ್ಪ ನೀಡಲು ಬಡ್ಡಿದರಗಳು ಸೊನ್ನೆಗಿಂತಲೂ ಕೆಳ ಮಟ್ಟದಲ್ಲಿರಬೇಕು ಅಥವಾ ಋಣಾತ್ಮಕವಾಗಿರ'ಬೇಕು ಎಂಬುದು ಬಂಡವಾಳಶಾಹಿಯ ಪಟ್ಟು. [**ಋಣಾತ್ಮಕ ಬಡ್ಡಿ ದರ** -Negative Interest Rates- ಅಂದರೆ, ಬ್ಯಾಂಕಿನಲ್ಲಿ ಹಣ ಇಟ್ಟವರು ಬ್ಯಾಂಕಿನಿಂದ ಅಷ್ಟೊ ಇಷ್ಟೊ ಬಡ್ಡಿ ಪಡೆಯುವ ಬದಲು, ಹಣ ಇಟ್ಟವರೇ ಠೇವಣಿ ಇರಿಸಿಕೊಂಡದ್ದಕ್ಕಾಗಿ ಬ್ಯಾಂಕಿಗೆ ಒಂದಿಷ್ಟು ಶುಲ್ಕ ತೆರುವ ಕ್ರಮ).

ಬಡ್ಡಿದರಗಳು ಋಣಾತ್ಮಕವಾಗಿರಬೇಕು ಎಂದಾದರೆ, ಅದಕ್ಕೆ ಎರಡು ಅಂಶಗಳು ಪೂರಕವಾಗುತ್ತವೆ. ಅವುಗಳಲ್ಲಿ ಒಂದನ್ನು ಸಾಧಿಸಬಹುದು. ಇನ್ನೊಂದು ಸುಲಭಸಾಧ್ಯವಲ್ಲ. ಬ್ಯಾಂಕುಗಳು ಸಾಲಕೊಡುವ ಉದ್ದೇಶಕ್ಕಾಗಿ ಬೇಕಾಗುವ ಹಣವನ್ನು ಎರಡು ವಿಧಾನಗಳ ಮೂಲಕ ಒದಗಿಸಿಕೊಳ್ಳುತ್ತವೆ. ಒಂದು, ಜನರಿಂದ ಸಂಗ್ರಹವಾಗುವ ಠೇವಣಿಗಳು. ಇನ್ನೊಂದು, ಕೇಂದ್ರೀಯ ಬ್ಯಾಂಕಿನಿಂದ ಪಡೆದ ಸಾಲಗಳು. ಬ್ಯಾಂಕುಗಳು ಕೊಡುವ ಸಾಲದ ಮೇಲಿನ ಬಡ್ಡಿಯ ದರಗಳು ಋಣಾತ್ಮಕವಾಗಿರಬೇಕು ಎಂದಾದರೆ, ಅವರಿಗೆ ಅದಕ್ಕಿಂತಲೂ ಕಡಿಮೆ ದರದಲ್ಲಿ ಕೇಂದ್ರೀಯ ಬ್ಯಾಂಕಿನಿಂದ ಸಾಲ ದೊರೆಯಬೇಕು. ಇಲ್ಲವಾದರೆ ಅವು ಲಾಭ ಗಳಿಸಲು ಸಾಧ್ಯವಿಲ್ಲ. ಕೇಂದ್ರೀಯ ಬ್ಯಾಂಕ್, ತನ್ನ ನೀತಿ–ನಿರ್ಧಾರಗಳಿಗೆ ಅನುಸಾರವಾಗಿ, ಋಣಾತ್ಮಕ ಬಡ್ಡಿ ದರದಲ್ಲಿ ಬ್ಯಾಂಕುಗಳಿಗೆ ಸಾಲ ಕೊಡಬಹುದು. ಈ ನಷ್ಟವು ಸರ್ಕಾರದ ಬಜೆಟ್‌ನಲ್ಲಿ ಸೇರಿಕೊಳ್ಳುತ್ತದೆ. ಏಕೆಂದರೆ ಅನೇಕ ಕೇಂದ್ರ ಬ್ಯಾಂಕ್‌ಗಳು ಸರ್ಕಾರದ ಒಡೆತನದಲ್ಲಿವೆ. ಉದಾ: ಭಾರತದ ರಿಸರ್ವ್ ಬ್ಯಾಂಕ್.

ಯೂರೋಪಿಯನ್ ಸೆಂಟ್ರಲ್ ಬ್ಯಾಂಕ್, ಕೆಲವು ನಿರ್ಧಿಷ್ಟ ಉದ್ದೇಶಗಳಿಗಾಗಿ, ಬ್ಯಾಂಕ್‌ಗಳಿಗೆ ಬಿಡುಗಡೆ ಮಾಡಿದ ಸಾಲಗಳ ಮೇಲೆ ಕೆಲ ಸಮಯದಿಂದ ಋಣಾತ್ಮಕ ಬಡ್ಡಿ ದರ ವಿಧಿಸುತ್ತಿದೆ. ಈ ಕ್ರಮದಿಂದಾಗಿ ಅರ್ಥವ್ಯವಸ್ಥೆ ಚೇತರಿಸಿಕೊಳ್ಳದಿದ್ದರೂ, ಇಂತಹ ಒಂದು ಪದ್ಧತಿಯನ್ನು ಜಾರಿಗೊಳಿಸಿರುವ ಅಂಶವು, ಋಣಾತ್ಮಕ ಬಡ್ಡಿ ದರಗಳನ್ನು ಜಾರಿಗೆ ತರುವುದು ಕಷ್ಟವೇನಲ್ಲ ಎಂಬುದನ್ನು ತೋರಿಸಿದೆ.

ಋಣಾತ್ಮಕ ಬಡ್ಡಿ ದರದಲ್ಲಿ ಕೊಡುವ ಸಾಲಗಳ ವ್ಯವಹಾರ ಹೆಚ್ಚಬೇಕು ಎಂದಾದರೆ, ಬ್ಯಾಂಕ್ ಠೇವಣಿಗಳಿಗೆ ಕೊಡುವ ಬಡ್ಡಿಯ ದರವೂ ಋಣಾತ್ಮಕವಾಗಿರಬೇಕಾಗುತ್ತದೆ. ಇಲ್ಲೊಂದು ಅಡಚಣೆ ಉಂಟಾಗುತ್ತದೆ. ಬ್ಯಾಂಕಿನಲ್ಲಿಟ್ಟ ಠೇವಣಿ ಹಣಕ್ಕೆ ಬಿಡಿಕಾಸಿನ ಬಡ್ಡಿಯೂ ಸಿಗದಿದ್ದರೆ, ಯಾರಾದರೂ ತಮ್ಮ ಹಣವನ್ನು ಬ್ಯಾಂಕಿನಲ್ಲಿ ಏಕೆ ಇಡಬೇಕು? ಅದಕ್ಕಿಂತ ನಗದು ರೂಪದಲ್ಲಿಟ್ಟುಕೊಳ್ಳುವುದೇ ಉತ್ತಮವಲ್ಲವೇ?

ಬ್ಯಾಂಕಿನಲ್ಲಿ ಹಣ ಇಟ್ಟಾಗ ರಕ್ಷಣೆ ಇರುತ್ತದೆ, ನಿಜ. ಹಣವನ್ನು ನಮ್ಮ ಬಳಿಯೇ ಇಟ್ಟುಕೊಂಡಾಗ ಕಳವು ಮತ್ತಿತರ ಅಪಾಯಗಳಿರುವುದು ನಿಜ. ಅಂತಹ ಅಪಾಯಗಳಿಂದ ಪಾರಾಗಲು ಜನ ಹೆಚ್ಚೆಂದರೆ ಅತ್ಯಲ್ಪ ಮಟ್ಟದ ಋಣಾತ್ಮಕ ಬಡ್ಡಿಯನ್ನು ಸಹಿಸಿಕೊಳ್ಳಬಹುದು. ಒಂದು ವೇಳೆ ಋಣಾತ್ಮಕ ಬಡ್ಡಿಯ ದರ ಹೆಚ್ಚಿದ್ದರೆ, ಬ್ಯಾಂಕಿನಲ್ಲಿ ಯಾರೂ ಹಣ ಇಡುವುದಿಲ್ಲ. ಒಟ್ಟಾರೆಯಾಗಿ, ನಗದು ಹಣ ಸಂಪಾದಿಸುವ ಬಡ್ಡಿಯು ಸೊನ್ನೆ ಎಂದೇ ಹೇಳಬಹುದು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಗದು ಬಳಕೆಯು, ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿದರವು ಸೊನ್ನೆಯಷ್ಟು ಕನಿಷ್ಟ ಮಟ್ಟದಲ್ಲಿರುವಂತೆ ನೋಡಿಕೊಳ್ಳುವುದರಿಂದ, ಋಣಾತ್ಮಕ ಬಡ್ಡಿ ದರದಲ್ಲಿ ಬ್ಯಾಂಕುಗಳು ಸಾಲ ಕೊಡುವುದು ಸಾಧ್ಯವಾಗುವುದಿಲ್ಲ. ಆದರೆ, ಬಂಡವಾಳಶಾಹಿಯ ಪುನಶ್ಚೇತನದ ದೃಷ್ಟಿಯಿಂದ, ಋಣಾತ್ಮಕ ಬಡ್ಡಿ ದರದಲ್ಲಿ ಬ್ಯಾಂಕುಗಳು ಸಾಲ ಕೊಡುವುದು ಅನಿವಾರ್ಯ ಎನ್ನುತ್ತಾರೆ ಸಂಪ್ರದಾಯಶರಣ ಅರ್ಥಶಾಸ್ತ್ರಜ್ಞರು.

ಬ್ಯಾಂಕ್ ಠೇವಣಿಗಳ ಬಡ್ಡಿ ದರಗಳು ಋಣಾತ್ಮಕವಾಗಿದ್ದರೆ ಏನೇನು ತೊಡರುಗಳು ಎದುರಾಗುತ್ತವೆ ಎಂಬುದನ್ನು ಸ್ವೀಡನ್ ದೇಶದ ನಿದರ್ಶನದಿಂದ ತಿಳಿಯಬಹುದು. ಸ್ವೀಡನ್ನಿನ ಬ್ಯಾಂಕುಗಳು ಠೇವಣಿಗಳಿಗೆ ಋಣಾತ್ಮಕ ಬಡ್ಡಿ ದರ ಜಾರಿ ಮಾಡಿದಾಗ, ಆ ದೇಶದ ಸರ್ಕಾರವು ಮುಂಗಡ ತೆರಿಗೆ ಪಾವತಿ ಮಾಡಿದವರಿಗೆ ಸುಮಾರು +0.5% ಬಡ್ಡಿ ಕೊಡುತ್ತಿತ್ತು. ಇದರಿಂದಾಗಿ, ಇದ್ದಕ್ಕಿದ್ದಂತೆ ಹುಚ್ಚಾಪಟ್ಟೆ ತೆರಿಗೆ ಸಂಗ್ರಹವಾಯಿತು. ಅದನ್ನು ಯಾವ ಉದ್ದೇಶಕ್ಕೆ ವಿನಿಯೋಗಿಸಬೇಕು ಎಂಬುದು ಸರ್ಕಾರಕ್ಕೆ ತಲೆನೋವಾಗಿತ್ತು. ಬ್ಯಾಂಕಿನಲ್ಲಿ ಠೇವಣಿ ಇಡುವುದರ ಬದಲು, ಜನ ತಮ್ಮ ಹಣವನ್ನು ಮುಂಗಡ ತೆರಿಗೆ ಪಾವತಿಮಾಡಿ ಸ್ವಲ್ಪ ಸಂಪಾದನೆ ಮಾಡಿಕೊಳ್ಳಲು ಬಳಸಿಕೊಂಡ'ರು. ಋಣಾತ್ಮಕ ಬಡ್ಡಿ ದರ ಜಾರಿ ಮಾಡುವ ಇಡೀ ಉದ್ದೇಶವು ಬ್ಯಾಂಕುಗಳು ಸಂಗ್ರಹಿದ ಠೇವಣಿ ಹಣವನ್ನು ಋಣಾತ್ಮಕ ಬಡ್ಡಿ ದರದಲ್ಲಿ ಸಾಲ ಕೊಟ್ಟು ಅರ್ಥವ್ಯವಸ್ಥೆ ಚೇತರಿಸಿಕೊಳ್ಳುವಂತೆ ಮಾಡವುದೇ ಆಗಿತ್ತು. ಬ್ಯಾಂಕ್ ಠೇವಣಿಗಳು ಬತ್ತಿ ಹೋದರೆ, ಇಡೀ ಉದ್ದೇಶವೇ ವಿಫಲವಾಗುತ್ತದೆ.

ಜನರ ಬಳಿ ಇರುವ ಹಣ (ನಗದು) ಎಲ್ಲಿಯವರೆಗೆ ಅಲ್ಪ ಸ್ವಲ್ಪ ಸಂಪಾದನೆ ಮಾಡಬಲ್ಲದೊ, ಅಲ್ಲಿಯವರೆಗೆ, ಋಣಾತ್ಮಕ ಬಡ್ಡಿ ದರದಲ್ಲಿ ಠೇವಣಿಗಳ ಸಂಗ್ರಹ ಮತ್ತು ಸಾಲ ಕೊಡುವಿಕೆಗಳು ವಿಸ್ತಾರಗೊಳ್ಳುವುದಿಲ್ಲ ಎಂಬುದನ್ನು ಸ್ವೀಡನ್ನಿನ ನಿದರ್ಶನ ಸ್ಪಷ್ಟಪಡಿಸುತ್ತದೆ. ಅಲ್ಪ ಸ್ವಲ್ಪ ಸಂಪಾದನೆ ಮಾಡಿಕೊಟ್ಟ ಮುಂಗಡ ತೆರಿಗೆ ಪಾವತಿಯಂತಹ ಅವಕಾಶಗಳಿಲ್ಲದಿದ್ದರೂ ಸೊನ್ನೆ ಬಡ್ಡಿಯನ್ನೇ ಸಂಪಾದಿಸುವ ಹಣವನ್ನು ಜನ ತಮ್ಮ ಬಳಿಯೇ ಇಟ್ಟುಕೊಂಡರೆ, ಅದು ಋಣಾತ್ಮಕ ಬಡ್ಡಿ ದರ ಆಳ್ವಿಕೆಯ ಮೂಲಕ ಅರ್ಥವ್ಯವಸ್ಥೆಯನ್ನು ಚೇತರಗೊಳಿಸಲು ಅಡ್ಡಿಯಾಗುತ್ತದೆ.

ಈ ಕಾರಣದಿಂದಾಗಿ, ನಗದು ಹಣವನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂದು ಕೆಲವು ಸಂಪ್ರದಾಯಶರಣ ಅರ್ಥಶಾಸ್ತ್ರಜ್ಞರು ಈಗ ವಾದಿಸುತ್ತಿದ್ದಾರೆ. ಅವರ ಪೈಕಿ ಹಾರ್ವರ್ಡ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞ ಕೆನೆತ್ ರೋಗಾಫ್ ಪ್ರಮುಖರು. ಹಿಂದೆ ಐಎಂಎಫ್‌ನ ಮುಖ್ಯ ಅರ್ಥಶಾಸ್ತ್ರಜ್ಞರಾಗಿದ್ದ ಇವರು The Curse of Cash (ನಗದಿನ ಶಾಪ) ಎಂಬ ಪುಸ್ತಕವನ್ನೇ ಬರೆದಿದ್ದಾರೆ. ತಕ್ಷಣದಲ್ಲಿ ಆಗದಿದ್ದರೂ, ಕಾಲಕ್ರಮೇಣ ನಗದು ರೂಪದ ಹಣ ರದ್ದಾಗಲೇಬೇಕೆಂದು ಇವರು ಹೇಳುತ್ತಾರೆ. ಈ ಬಗ್ಗೆ, ಭಾರತ ಸರ್ಕಾರವೂ ಸೇರಿದಂತೆ ಅನೇಕರು ಹೊಂದಿರುವ ಸಾಮಾನ್ಯ ಅಭಿಪ್ರಾಯವೆಂದರೆ, ನಗದು ರದ್ದಾದರೆ ಎಲ್ಲ ವ್ಯವಹಾರಗಳೂ ದಾಖಲಾಗುವುದರಿಂದ 'ಕಪ್ಪ ಹಣ' ಸೃಷ್ಟಿಯಾಗುವುದು ತಗ್ಗುತ್ತದೆ. ಈ ಅನುಕೂಲದ ಜೊತೆಗೆ, ರೋಗಾಫ್ ಅವರ ಪ್ರಕಾರ ಇನ್ನೊಂದು ಮುಖ್ಯವಾದ ಅಂಶವೆಂದರೆ, ನಗದು ರದ್ದಾದರೆ ಎಲ್ಲರೂ ಹಣವನ್ನು ಬ್ಯಾಂಕಿನಲ್ಲಿ ಇಡುವುದು ಅನಿವಾರ್ಯ. ಆಗ ಠೇವಣಿಗಳ ಮೇಲೆ ಋಣಾತ್ಮಕ ಬಡ್ಡಿ ದರಗಳನ್ನು ಹೇರಿದರೆ ಯಾರೂ ಏನೂ ಮಾಡುವಂತಿಲ್ಲ.

ಈ ವಾದದಲ್ಲಿ ಗಮನಿಸಲೇಬೇಕಾದ ಮೂರು ಅಂಶಗಳಿವೆ. **ಮೊದಲನೆಯದಾಗಿ,** ಇದು ನಿರಂಕುಶ ಪ್ರಭುತ್ವದ ಶುದ್ಧಾಂಗ ದಬ್ಬಾಳಿಕೆಯ ಕ್ರಮವಾಗುತ್ತದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನು ಉಳಿಸುವ ಸಲುವಾಗಿ, ಇಡೀ ಜನಕೋಟಿಗೆ ಸಲ್ಲುವ ವರಮಾನದಲ್ಲಿ ಒಂದು ದೊಡ್ಡ ಪಾಲನ್ನು ಬಂಡವಾಳಗಾರರಿಗೆ ವರ್ಗಾಯಿಸಬೇಕಾಗುತ್ತದೆ. ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಬಂಡವಾಳಗಾರರನ್ನು ಹೂಡಿಕೆಮಾಡುವಂತೆ ಪುಸಲಾಯಿಸುವುದೇ ಏಕೈಕ ಮಾರ್ಗವೇ? ಅದಕ್ಕಾಗಿ, ಜನರೆಲ್ಲರೂ ವರಮಾನ ನಷ್ಟ ಅನುಭವಿಸುವ ಅವಶ್ಯಕತೆ ಇದೆಯೆ? ಇದು ಸೇಡಿಗೆ ಮೂರ್ತರೂಪ ಕೊಡುವ ಕ್ರಮವಾಗುತ್ತದೆ. ನಗದು ರದ್ದತಿ ಕೈಗೊಳ್ಳುವುದು ಜನರ ಒಳಿತಿಗಾಗಿ ಎಂದು ಸಮರ್ಥಿಸಲಾಗುತ್ತಿದೆ. ಈ ವಾದದ ಪ್ರಕಾರ, ತಮ್ಮ ಒಳಿತಿಗಾಗಿ ಏನನ್ನು ತ್ಯಾಗ ಮಾಡುವ ಅವಶ್ಯಕತೆ ಕಂಡರೂ ಜನರು ಅದಕ್ಕೆ ಸಿದ್ಧವಾಗಿರಬೇಕು. ಆಗ ಮಾತ್ರ ಬಂಡವಾಳಗಾರರ ಆಳ್ವಿಕೆಯು ನಿರಾತಂಕವಾಗಿಯೂ ಮತ್ತು ನಿರ್ವಿವಾದವಾಗಿಯೂ ಇರುತ್ತದೆ.

ಎರಡನೆಯದಾಗಿ, ಋಣಾತ್ಮಕ ಬಡ್ಡಿ ಜಾರಿಗೊಳಿಸಿದರೂ ಜಾಗತಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯು ಇಂದಿನ ಪರಿಸ್ಥಿತಿಯಲ್ಲಿ ಪುನ'ಶ್ಚೇತನಗೊಳ್ಳುವುದು ಅಸಂಭವ. ಆಧುನಿಕ ಬಂಡವಾಳಶಾಹಿಯು ಕೇವಲ ಕೆಲವೇ ಮಂದಿಯ ಹಿಡಿತದಲ್ಲಿರುವುದರಿಂದ, ಅವರು ಮಾರುಕಟ್ಟೆ ಬೆಳೆಯುವ ನಿರೀಕ್ಷೆಗನುಗುಣವಾಗಿ ಹೂಡಿಕೆ ಮಾಡುತ್ತಾರೆ. ಅವರು ಬಡ್ಡಿ ದರಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಎಲ್ಲಿಯವರೆಗೆ ಮಾರುಕಟ್ಟೆಯ ಸ್ಥಗಿತತೆ (ಇದು ಬಿಕ್ಕಟ್ಟಿನಿಂದಾಗಿದೆ) ಮುಂದುವರೆಯುವುದೊ ಅಲ್ಲಿಯವರೆಗೆ, ಬಡ್ಡಿ ದರಗಳನ್ನು ಋಣಾತ್ಮಕ ಮಟ್ಟಕ್ಕೆ ಇಳಿಸಿದರೂ, ಹೊಸ ಹೂಡಿಕೆಗಳು ಬರುವುದಿಲ್ಲ. ಈ ಅಂಶವೇ ಬಿಕ್ಕಟ್ಟನ್ನು ಶಾಶ್ವತಗೊಳಿಸುತ್ತದೆ.

ಮೂರನೆಯದಾಗಿ, ನಗದು ಹಣ ರದ್ದಾದರೂ ಬಡ್ಡಿ ದರಗಳು ಋಣಾತ್ಮಕ ಮಟ್ಟಕ್ಕೆ ಇಳಿಯುವುದಿಲ್ಲ. ಏಕೆಂದರೆ, ಚಲಾವಣೆಯಲ್ಲಿ ನಗದು ಅಲಭ್ಯವಿದ್ದರೂ, ಬೇರೆ ಕೆಲವು ಏರ್ಪಾಡುಗಳು ಹುಟ್ಟಿಕೊಳ್ಳುತ್ತವೆ. ಉದಾ: ಬಂಗಾರ. ಅದು ಅಪಾರ ಬೆಲೆಯುಳ್ಳದ್ದು. ಹಿಡಿದಿಡುವ ವೆಚ್ಚ ಇಲ್ಲ. ದಾಸ್ತಾನು ಸುಲಭ. ಹಾಳಾಗುವುದಿಲ್ಲ. ಆದ್ದರಿಂದ, ನಗದು ರದ್ದತಿಯಾದರೆ ಜನರು ಬಂಗಾರದತ್ತ ಹೊರಳುತ್ತಾರೆ. ಬದಲಾದ ಪರಿಸ್ಥಿತಿಯಲ್ಲಿ, ನಗದು ಹಣ ಸೊನ್ನೆ ಬಡ್ಡಿ ಸಂಪಾದಿಸುವ ರೀತಿಯಲ್ಲಿ, ಬಂಗಾರ ಸಂಪಾದಿಸುವ ಬಡ್ಡಿಯೂ ಸೊನ್ನೆಯೇ. ಹಾಗಾಗಿ, ಬಂಗಾರವು ಕೊಳ್ಳುವ ಶಕ್ತಿಯ ಪ್ರತಿರೂಪವಾಗಿರುವ ನಗದು ಹಣದ ಸ್ಥಾನ ಪಡೆಯುವುದರಿಂದ, ನಗದು ಹಣ ಉಂಟುಮಾಡುವ ಪರಿಣಾಮದ ರೀತಿಯಲ್ಲಿ, ಬಂಗಾರವೂ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿದರವು ಸೊನ್ನೆಯಷ್ಟು ಕನಿಷ್ಟ ಮಟ್ಟದಲ್ಲಿರುವಂತೆ ನೋಡಿಕೊಳ್ಳುತ್ತದೆ.

ಬಂಗಾರವನ್ನೇ ಹಣವೆಂದು ಮೊಟ್ಟಮೊದಲು ಉಪಯೋಗಿಸಿದ ದಿನದಿಂದಲೇ ಹಣ ಪ್ರಪಂಚದತ್ತ ಮಾನವಕೋಟಿಯ ಯಾತ್ರೆ ಆರಂಭವಾಗಿತ್ತು. ಪ್ರೌಢಾವಸ್ಥೆಯ ಬಂಡವಾಳಶಾಹಿಯು ತನ್ನ ಉಳಿವಿಗಾಗಿ ಮಾನವಕೋಟಿಯನ್ನು ಮತ್ತೊಮ್ಮೆ ಬಂಗಾರ ಹಣದ ಸ್ಥಾನದಲ್ಲಿದ್ದ ದಿನಗಳಿಗೆ ತಳ್ಳುತ್ತಿರುವುದು ಒಂದು ವಿಪರ್ಯಾಸ. ○

2/ 3 ಬಹುಮತವಿದ್ದರೂ 370ನೇ ವಿಧಿಯನ್ನು ರದ್ದು ಮಾಡಲು ಸಾಧ್ಯವಿಲ್ಲ: ಕೇಂದ್ರ ಮಂತ್ರಿಗಳಿಗೆ ನೆನಪಿಸಿದ ಸಿಪಿಐ(ಎಂ) ಜಮ್ಮು–ಕಾಶ್ಮೀರ ರಾಜ್ಯಸಮಿತಿ

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಪಟ್ಟ ಸಂವಿಧಾನದ 370ನೇ ಕಲಮನ್ನು ರದ್ದು ಮಾಡುವ ಬಗ್ಗೆ ಪ್ರಸಕ್ತ ಸರಕಾರ ಪರಿಶೀಲಿಸುತ್ತಿಲ್ಲ, ಏಕೆಂದರೆ ಸರಕಾರಕ್ಕೆ ಸಂಸತ್ತಿನಲ್ಲಿ ಸದ್ಯಕ್ಕೆ ಸೂಕ್ತ ಸದಸ್ಯಬಲ ಇಲ್ಲ ಎಂದು ಗೃಹರಾಜ್ಯ ಮಂತ್ರಿಗಳು ಈ ವಾರ ರಾಜ್ಯಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ)ನ ಜಮ್ಮು–ಕಾಶ್ಮೀರ ರಾಜ್ಯ ಸಮಿತಿ "2/3 ಬಹುಮತವಿದ್ದರೂ ನಿಮಗೆ 370ನೇ ಕಲಮನ್ನು ರದ್ದು ಮಾಡಲು ಸಾಧ್ಯವಿಲ್ಲ" ಎಂದು ನೆನಪಿಸಿದೆ. ಸಂವಿಧಾನದ 370ನೇ ವಿಧಿ ಜಮ್ಮು–ಕಾಶ್ಮೀರ ಮತ್ತು ಭಾರತದ ಉಳಿದ ಭಾಗಗಳ ನಡುವಿನ ಏಕೈಕ ಕೊಂಡಿ. ಅದನ್ನು ರದ್ದು ಮಾಡುವುದೆಂದರೆ ಈ ಕೊಂಡಿಯನ್ನೇ ಕಳಚಿದಂತೆ. ಅಲ್ಲದೆ ಹೀಗೆ ಇದನ್ನು ಕಳಚಲು ಕೂಡ ಸಾಧ್ಯವಿಲ್ಲ, ಕೇವಲ ಜಮ್ಮು–ಕಾಶ್ಮೀರ ಸಂವಿಧಾನ ಸಭೆಗೆ ಮಾತ್ರ ಇದು ಸಾಧ್ಯ. ಆದರೆ ಆ ಸಭೆ ಈಗ ಅಸ್ತಿತ್ವದಲ್ಲೇ ಇಲ್ಲ, 1956ರಲ್ಲೇ ಅದನ್ನು ವಿಸರ್ಜಿಸಲಾಯಿತು. ಇದು ಬಿಜೆಪಿ ನೇತೃತ್ವದ ಕೇಂದ್ರ ಸರಕಾರಕ್ಕೆ ತಿಳಿದೇ ಇಲ್ಲವೇ ಅಥವ ತಿಳಿದೂ ಪ್ರಚಾರಕ್ಕಾಗಿ ಉಳಿಸಿಕೊಂಡಿದ್ದಾರೋ ಸ್ಪಷ್ಟವಿಲ್ಲ.

370ನೇ ಕಲಮಿನ ರದ್ಧತಿ ಬಿಜೆಪಿಯ ಮೂಲ 'ತತ್ವ'ಗಳಲ್ಲಿ ಒಂದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮೇಲೆ ಹೇಳಿದಂತೆ ಈ ಕಲಮನ್ನು ರದ್ದು ಮಾಡುವುದೆಂದರೆ, ಭಾರತದೊಂದಿಗಿನ ಅದರ ಸಂಬಂಧವನ್ನು ಮುರಿದಂತೆಯೇ ಸರಿ. ಈಗಾಗಲೇ ಅದನ್ನು ಕೇಂದ್ರದಲ್ಲಿ ಬಂದಿರುವ ಸರಕಾರಗಳು ಸಾಕಷ್ಟು ನಿಸ್ಸತ್ವಗೊಳಿಸಿವೆ. ಈಗ ಉಂಟಾಗಿರುವ ಸಮಸ್ಯೆಯ ಮುಖ್ಯ ಕಾರಣಗಳಲ್ಲಿ ಅದೂ ಒಂದು.. ಆದ್ದರಿಂದ ಅದನ್ನು ಮೂಲ ಸ್ವರೂಪಕ್ಕೆ ತಂದು ಅರ್ಥಪೂರ್ಣಗೊಳಿಸುವುದು ಈ ಸಮಸ್ಯೆಯ ಪರಿಹಾರಗಳಲ್ಲಿ ಒಂದು ಎಂದು ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

ಅವರು ರಾಜ್ಯಸಮಿತಿಯ ಇನ್ನಿಬ್ಬರು ಸದಸ್ಯರಾದ ಶಾವ್‌ಪ್ರಸಾದ್ ಕೇಸರ್ ಮತ್ತು ಎಂ.ವೈ.ಜಿ ನಾರಂಗ್‌ರೊಂದಿಗೆ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಈ ವಿಷಯವನ್ನು ನೆನಪಿಸಿದರು.

ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಭಾರತ ಸರಕಾರ ಮತ್ತು ಜಮ್ಮು–ಕಾಶ್ಮೀರ ಸರಕಾರ ಸಂಬಂಧಪಟ್ಟ ಎಲ್ಲರೊಂದಿಗೆ ಸಮಗ್ರ ಸಂವಾದವನ್ನು ಆರಂಭಿಸಬೇಕು ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತ ಅವರು ಪಕ್ಷದ ನಿಲುವನ್ನು ಪುನರುಚ್ಚರಿಸಿದರು. ಚಾರಿತ್ರಿಕ ಸಂದರ್ಭ ಮತ್ತು ರಾಜ್ಯದ ಎಲ್ಲ ಪ್ರದೇಶಗಳ ಜನರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಈ ನಿಟ್ಟಿನಲ್ಲಿ ಪ್ರಯತ್ನಿಸುವ ಬದಲು ರಾಜ್ಯದ ಪ್ರಸಕ್ತ ಸಮ್ಮಿಶ್ರ ಸರಕಾರದ ಅಂಗಪಕ್ಷಗಳು ಚುನಾವಣಾ ಪ್ರಯೋಜನಕ್ಕಾಗಿ ತಂತಮ್ಮ ವಿಭಾಗಗಳನ್ನು ಓಲೈಸುವುದರಲ್ಲೆ ತೊಡಗಿವೆ. ಇನ್ನಾದರೂ ಇದನ್ನೆಲ್ಲ ನಿಲ್ಲಿಸಿ, ಕೋಮುಧ್ರುವೀಕರಣ ಇನ್ನು ಸಾಕು, ಜನಗಳ ಬದುಕಿನ ಪ್ರಶ್ನೆಗಳತ್ತ ಗಮನ ಹರಿಸಿ, ಜನತೆಯ ನಡುವೆ ವೈಮನಸ್ಯಗಳನ್ನು ಹೋಗಲಾಡಿಸಿ ಐಕ್ಯತೆ ತರಲು ಗಂಭೀರ ಪ್ರಯತ್ನಗಳನ್ನು ನಡೆಸಿ ಎಂದು ಸಿಪಿಐ(ಎಂ) ಮುಖಂಡರು ಆಗ್ರಹಿಸಿದರು.

ಮಣಿಪುರ: ಅಕ್ರಮದೊಂದಿಗೆ 'ಶುದ್ಧ' ಆಳ್ವಿಕೆ ಆರಂಭ?

ಮಣಿಪುರದಲ್ಲಿ ಕೊನೆಗೂ ಬಿಜೆಪಿ ನೇತೃತ್ವದ ಸರಕಾರ ಮೊತ್ತ ಮೊದಲ ಅಧಿಕಾರ ವಹಿಸಿಕೊಂಡಿದೆ. ಆದರೆ ಇದಕ್ಕೆ ಮೊದಲು ನಡೆದ ಅಹಿತಕರ ಘಟನೆಗಳು ಇಡೀ ದೇಶದ ಗಮನ ಸೆಳೆದಿವೆ.

ಚುನಾವಣೆಗಳಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ದೊರೆಯಲಿಲ್ಲ. ಆದರೆ ಅದು 60ರಲ್ಲಿ 28 ಸ್ಥಾನಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಮೂಡಿ ಬಂತು. ಬಿಜೆಪಿಗೆ 21 ಸ್ಥಾನಗಳು ಮತ್ತು ಅದರ ಮಿತ್ರಪಕ್ಷ ಎಲ್‌ಜೆಪಿಗೆ 1 ಸ್ಥಾನ ದೊರೆಯಿತು. ಆದರೂ ಬಿಜೆಪಿ ಸರಕಾರ ರಚಿಸುವುದಾಗಿ ಘೋಷಿಸಿತು.

ಒಬ್ಬ ಪಕ್ಷೇತರ ಸದಸ್ಯನ ಅಪಹರಣ ನಡೆಯಿತು. ಒಬ್ಬ ಕಾಂಗ್ರೆಸ್ ಸದಸ್ಯ ಮತ್ತೊಬ್ಬ ಟಿಎಂಸಿ ಸದಸ್ಯನ ಪಕ್ಷಾಂತರದ ನಂತರ ಕೊನೆಗೂ ಹೇಗೋ ಬಹುಮತ ಸೃಷ್ಟಿಸಿ ರಾಜ್ಯಪಾಲರ ನೆರವಿನಿಂದ ಸರಕಾರ ರಚಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಈಗ ಮುಖ್ಯಮಂತ್ರಿಯಾಗಿರುವವವರು ಕಳೆದ ಅಕ್ಟೋಬರ್ ವರೆಗೆ ಕಾಂಗ್ರೆಸ್ ಮುಖಂಡರಾಗಿದ್ದವರು.

ಇದಕ್ಕೆ ಮೊದಲು, ರಾಜ್ಯದಲ್ಲಿ ಮೊದಲ ಹಂತದ ಚುನಾವಣೆಯ ಹಿಂದಿನ ದಿನ ಚುನಾವಣಾ ಆಯೋಗ ಇಲ್ಲಿನ ಎಂಟು ಪತ್ರಿಕೆಗಳ ಸಂಪಾದಕರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಪ್ರಕಟಿಸಿತು. ಏಕೆಂದರೆ ಅವು ಆಯೋಗದಿಂದ ಮಾನ್ಯತೆ ಪಡೆಯದ ಬಿಜೆಪಿಯ ವರ್ಣ ಜಾಹೀರಾತನ್ನು ಪ್ರಕಟಿಸಿದವು ಎಂದು. ಆದರೆ ಅವುಗಳಿಗೆ ಈ ಜಾಹೀರಾತಿನ ಜೊತೆಗೆ ಚುನಾವಣಾ ಆಯೋಗದ ಪ್ರಮಾಣ ಪತ್ರ ಇತ್ತಂತೆ.

ಹಾಗಿದ್ದರೆ ಆಯೋಗ ಕ್ರಮ ಕೈಗೊಂಡಿದ್ದೇಕೆ? ಏಕೆಂದರೆ ಬಿಜೆಪಿ ಬೇರೊಂದು ಜಾಹೀರಾತಿಗೆ ಪ್ರಮಾಣ ಪತ್ರವನ್ನು ಪಡೆದು ಅದನ್ನು ಈ ಜಾಹೀರಾತಿನೊಂದಿಗೆ ಕಳಿಸಿತ್ತು ಎಂದು ನಂತರ ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿದೆ.

ಈಗ ಅದೇ ಪಕ್ಷ ಭ್ರಷ್ಟಾಚಾರ ನಿಗ್ರಹಿಸುವ ಘೋಷಣೆಯೊಂದಿಗೆ ಅಧಿಕಾರ ವಹಿಸಿರುವಾಗ ಈ ಅಕ್ರಮಕ್ಕೂ ತೆರೆ ಬೀಳುತ್ತದೆ ಎಂದೂ ನಿರೀಕ್ಷಿಸಲಾಗಿದೆ.

ತ್ರಿಪುರ: ಗಲಭೆ ಸೃಷ್ಟಿಸಲು ಬಿಜೆಪಿ, ಟಿಎಂಸಿ, ಐಪಿಎಫ್‌ಟಿ ಪ್ರಯತ್ನ

ತ್ರಿಪುರದಲ್ಲಿ ಎಡಪಕ್ಷಗಳು ನೋಟುರದ್ದತಿ ಮತ್ತಿತರ ಜನ–ವಿರೋಧಿ ಧೋರಣೆಗಳ ವಿರುದ್ಧ ಜನಗಳನ್ನು ಅಣಿನೆರೆಸುತ್ತಿರುವಾಗ ಮುಂದಿನ ವರ್ಷ ವಿಧಾನಸಭಾ ಚುನಾವಣೆಗಳು ನಡೆಯಬೇಕಾದ ಹಿನ್ನೆಲೆಯಲ್ಲಿ ಕೇಂದ್ರದಲ್ಲಿ ಆಳುತ್ತಿರುವ ಬಿಜೆಪಿ, ಪಕ್ಕದ ಪಶ್ಚಿಮ ಬಂಗಾಲದ ಆಳುವ ಪಕ್ಷ ಟಿಎಂಎಸಿ ಮತ್ತು ರಾಜ್ಯದೊಳಗೆ ಬುಡಕಟ್ಟು ಜನಗಳ ಬೆಂಬಲ ಪಡೆಯಲು ವಿಫಲವಾಗಿರುವ ಪ್ರತ್ಯೇಕತಾವಾದಿ ಐಪಿಎಫ್‌ಟಿ ವಿಭಜನಕಾರಿ ನಿಲುವುಗಳಿಂದ ರಾಜ್ಯದಲ್ಲಿ ಅಶಾಂತಿ ಉಂಟುಮಾಡಲು ಬಹಳ ಪ್ರಯತ್ನ ನಡೆಸಿದ್ದಾರೆ. ಮೇಲ್ನೋಟಕ್ಕೆ ಇವು ಮೂರೂ ಪಕ್ಷಗಳು ಪ್ರತ್ಯೇಕವಾಗಿ ಬೇರೆ ಬೇರೆ ಪ್ರಶ್ನೆಗಳ ಮೇಲೆ ಗಲಭೆ ಸೃಷ್ಟಿಸಲು ಪ್ರಯತ್ನಿಸುತ್ತಿದ್ದರೂ ಇವುಗಳ ನಡುವೆ, ಮುಖ್ಯವಾಗಿ ಬಿಜೆಪಿ ಮತ್ತು ಐಪಿಎಫ್‌ಟಿ ನಡುವೆ ಗುಪ್ತ ಶಾಮೀಲು ಕೂಡ ಇರುವುದು ಸ್ಪಷ್ಟವಾಗುತ್ತಿದೆ ಎಂದು ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಗೌತಮ್ ದಾಸ್ ಹೇಳುತ್ತಾರೆ.

ಕೇಂದ್ರ ಸರಕಾರ ನಾಗರಿಕತ್ವ ಕಾಯ್ದೆ ತಿದ್ದುಪಡಿ ಮಸೂದೆಯನ್ನು ತರಲು ಪ್ರಯತ್ನಿಸುತ್ತಿದೆ. ಇದರಲ್ಲಿ ಬಾಂಗ್ಲಾದೇಶ್, ಪಾಕಿಸ್ತಾನ ಮತ್ತು ಅಫಘಾನಿಸ್ತಾನದಿಂದ ವಲಸೆ ಬರುವ ಹಿಂದುಗಳು ಮತ್ತು ಇತರರಿಗೆ ನಾಗರಿಕತ್ವ ಕೊಡುವ ಅಂಶ ಇದೆ. ಐಪಿಎಫ್‌ಟಿ ಈ ಬಗ್ಗೆ ಸ್ವಾಯತ್ತ ಬುಡಕಟ್ಟು ಪ್ರದೇಶದಲ್ಲಿ ಬಂದ್‌ಗೆ ಕರೆ ಕೊಟ್ಟಿತ್ತು. ಇದು ನಾಗರಿಕತ್ವಕ್ಕೆ ಧರ್ಮವನ್ನು ಆಧಾರ ಮಾಡುತ್ತಿದೆಯಷ್ಟೇ ಅಲ್ಲ, 1972ರ ಇಂದಿರಾ–ಮುಜೀಬ್ ಒಪ್ಪಂದದ ನಿರಾಕರಣೆಯೂ ಆಗುತ್ತದೆ–ಯಾದ್ದರಿಂದ ಇದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸಿದೆ. ಆದರೆ ಇದು ಕೇವಲ ತ್ರಿಪುರದ ಬುಡಕಟ್ಟು ಪ್ರದೇಶಕ್ಕೆ ಮಾತ್ರ ಸೀಮಿತವಾದ ಪ್ರಶ್ನೆ ಅಲ್ಲ, ಇಡೀ ತ್ರಿಪುರಕ್ಕೆ ಮತ್ತು ಅಸ್ಸಾಂಗೆ ಸಂಬಂಧಪಟ್ಟ ಪ್ರಶ್ನೆ ಎಂಬುದು ಅದರ ನಿಲುವು. ಆದರೆ ಐಪಿಎಫ್‌ಟಿ ಫೆಬ್ರುವರಿ8 ರಂದು ಬುಡಕಟ್ಟು ಸ್ವಾಯತ್ತ ಪ್ರದೇಶದಲ್ಲಿ 12 ಗಂಟೆಗಳ ಬಂದ್ ನಡೆಸಿ ಗಲಭೆ ಉಂಟು ಮಾಡಿತು. ಮತ್ತೆ ಫೆಬ್ರುವರಿ 16–17ರಂದು 48 ಗಂಟೆಗಳ ಬಂದ್‌ಗೆ ಕರೆ ನೀಡಿತು. ಈ ಹಿನ್ನೆಲೆಯಲ್ಲಿ ತ್ರಿಪುರಾ ಎಡರಂಗ ಸರಕರ ಸರ್ವಪಕ್ಷ ಸಭೆ ಕರೆಯಿತು. ಆದರೆ ಇದರಲ್ಲಿ ಬಿಜೆಪಿ ಮತ್ತು ಟಿಎಂಸಿ ಭಾಗವಹಿಸಲಿಲ್ಲ.

ಬಿಜೆಪಿ ಸಣ್ಣ ಘಟನೆಗಳನ್ನು ರಾಜ್ಯದಲ್ಲಿ ಗಲಭೆ ಸೃಷ್ಟಿಸಲು ಬಳಸಿಕೊಳ್ಳುತ್ತಿದೆ. ಡಿಸೆಂಬರ್‌ನಲ್ಲಿ ಮಾಟ ಮಂತ್ರ ಮಾಡುವ ಅ ಪಕ್ಷದ ಸದಸ್ಯನೊಬ್ಬ ಆತನ ಶುಶ್ರೂಷೆಗೆ ಒಳಗಾಗಿದ್ದ ರೋಗಿಯೊಬ್ಬನಿಂದಲೇ ಕೊಲ್ಲಲ್ಪಟ್ಟ. ಮಾನಸಿಕ ಅಸ್ವಸ್ಥತೆಯಿರುವ ಈ ರೋಗಿ ಕೂಡ ಬಿಜೆಪಿ ಬೆಂಬಲಿಗನೇ. ಭಾರೀ ಬಡಿಗೆಯಿಂದ ಹೊಡೆದು ಮಾಟಮಂತ್ರ ಮಾಡುವ ವ್ಯಕ್ತಿಯನ್ನು ಸಾಯಿಸಿದ ಈತನನ್ನು ಊರ ಜನರು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಆತ ಈಗ ಕಸ್ಟಡಿಯಲ್ಲಿದ್ದಾನೆ. ಆದರೆ ಬಿಜೆಪಿ ಮಂದಿ ತಮ್ಮ ಸದಸ್ಯನ ಸಾವಿಗೆ ಸಿಪಿಐ(ಎಂ) ಕಾರಣ ಎಂದು ಗಲಭೆ ಆರಂಭಿಸಿತು. ಸತ್ತ ವ್ಯಕ್ತಿಯ ಹೆಸರಲ್ಲಿ ಯಜ್ಞ ನಡೆಸಿ ಅದರ ಬೂದಿಯನ್ನು ರಾಜ್ಯದ 60 ಚುನಾವಣಾ ಕ್ಷೇತ್ರಗಳಿಗೆ ಕಳಿಸುವ ಪ್ರಚಾರ ನಡೆಸಿದೆ.

ಟಿಎಂಸಿಯಂತೂ ಪಶ್ಚಿಮ ಬಂಗಾಲದ ತಂತ್ರವನ್ನು ಈ ರಾಜ್ಯದಲ್ಲಿ ಪುನರಾವರ್ತಿಸುವ ಪ್ರಯತ್ನವನ್ನು ನಡೆಸುತ್ತಲೇ ಇದೆ. ಅದೀಗ ಪಶ್ಚಿಮ ಬಂಗಾಲದಲ್ಲಿ ಅದರ ಮುಖಂಡರನ್ನು ಆವರಿಸಿರುವ ಚಿಟ್‌ಫಂಡ್ ಹಗರಣದ ಬಗ್ಗೆ ತ್ರಿಪುರಾ ರಾಜ್ಯ ಸರಕಾರ ತನಿಖೆ ನಡೆಸುತ್ತಿಲ್ಲ ಎಂದು ಸುಳ್ಳು ಸುದ್ದಿ ಹರಡಿಸಿ ಗಲಭೆ ಸೃಷ್ಟಿಸುವ ಪ್ರಯತ್ನ ನಡೆಸಿದೆ. ವಾಸ್ತವವಾಗಿ ಎಡರಂಗ ಸರಕಾರ 37 ಕೇಸುಗಳನ್ನು ಸಿಬಿಐಗೆ ಒಪ್ಪಿಸಿತ್ತು. ಸಿಬಿಐ ಅದರಲ್ಲಿ 5ನ್ನು ಮಾತ್ರ ಎತ್ತಿಕೊಂಡು ಉಳಿದವನ್ನು ಹಿಂದಿರುಗಿಸಿತು. ಆದ್ದರಿಂದ ಉಳಿದ 32 ಕೇಸುಗಳನ್ನು ರಾಜ್ಯ ಸರಕಾರವೇ ಒಮದು ವಿಶೇಷ ತನಿಖಾ ತಂಡವನ್ನು ರಚಿಸಿ ಹೈಕೋರ್ಟಿನ ಉಸ್ತುವಾರಿಯಲ್ಲಿ ತನಿಖೆ ನಡೆಸುತ್ತಿದೆ. ಆದರೂ ಟಿಎಂಸಿ ಈ ಬಗ್ಗೆ ನಾಗರಿಕ ಅಸಹಕಾರ ಚಳುವಳಿ ಹೆಸರಲ್ಲಿ ಗಲಭೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ.

ಇವನ್ನೆಲ್ಲ ಎದುರಿಸಲು ಸಿಪಿಐ(ಎಂ) ರಾಜ್ಯದಲ್ಲಿ ಒಂದು ತೀವ್ರ ಪ್ರಸಾರಾಂದೋಲನವನ್ನು ಆರಂಭಿಸಿದೆ. ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡುವುದರೊಂದಿಗೆ, ಮನರೇಗದಲ್ಲಿ 200ದಿನಗಳ ಉದ್ಯೋಗ ಕೊಡಬೇಕು, ನಗರಪ್ರದೇಶದ ಬಡವರಿಗೂ ಇಂತಹ ಉದ್ಯೋಗ ಖಾತರಿ ಯೋಜನೆ ತರಬೇಕು, ತಕ್ಷಣವೇ ಕೇಂದ್ರ ಸರಕಾರೀ ಕಚೇರಿಗಳಲ್ಲಿ ಖಾಲಿ ಬಿದ್ದಿರುವ ಹುದ್ದೆಗಳಿಗೆ ನೇಮಕಾತಿ ಮಾಡಬೇಕು, ಉದ್ಯೋಗಕ್ಕೆ ಗರಿಷ್ಟ ವಯೋಮಿತಿಯನ್ನು 40ಕ್ಕೆ ಏರಿಸಬೇಕು ಮತ್ತು 14 ಜೀವನಾವಶ್ಯಕ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ಸಬ್ಸಿಡಿ ದರಗಳಲ್ಲಿ ಒದಗಿಸಬೇಕು, ರೈತರಿಗೆ ಲಾಭದಾಯಕ ಬೆಲೆ ನೀಡಲು ಭತ್ತ ಖರೀದಿಗೆ ರಾಜ್ಯ ಸರಕಾರಕ್ಕೆ ಅಗತ್ಯ ಹಣ ಒದಗಿಸಬೇಕು ಮತ್ತು ಎಸ್‌ಸಿ/ಎಸ್‌ಟಿ ಉಪಯೋಜನೆಗಳನ್ನು ಕೈಬಿಡುವ ನಿರ್ಧಾರವನ್ನು ರದ್ದು ಮಾಡಬೇಕು ಎಂಬ ಬೇಡಿಕೆಗಳ ಮೇಲೆ ಈ ಪ್ರಸಾರಾಂದೋಲನ ನಡೆಸಲಾಗುತ್ತದೆ. ಮಾರ್ಚ್ ತಿಂಗಳಲ್ಲಿ ಎಲ್ಲ ಸ್ಥಳೀಯ ಸಮಿತಿ ಪ್ರದೇಶಗಳಲ್ಲಿ ಜನಗಳನ್ನು ಅಣಿನೆರೆಸಿ ಬಿಜೆಪಿ, ಟಿಎಂಸಿ ಮತ್ತು ಐಪಿಎಫ್‌ಟಿಯ ದುಷ್ಟ ತಂತ್ರಗಳನ್ನು ಬಯಲಿಗೆಳೆಯಲಾಗುವುದು ಎಂದು ಪಕ್ಷ ಹೇಳಿದೆ.

ಉನ್ನತ ಶಿಕ್ಷಣದಲ್ಲಿ ಜಾತಿ ನೆಲೆಯ ಪಕ್ಷಪಾತವನ್ನು ಕೊನೆಗೊಳಿಸಬೇಕು –ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿ ಆಗ್ರಹ

ಪುಟ 2 ರಿಂದ

ರೋಹಿತ್ ವೆಮುಲ ಸಾವಿನ ನಂತರ ದೇಶಾದ್ಯಂತ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗಳ ಬಗ್ಗೆ ವ್ಯಾಪಕವಾದ ಚರ್ಚೆ ನಡೆಯಿತು. ಆದರೆ ಪರಿಸ್ಥಿತಿಯನ್ನು ಬದಲಿಸಲು ಯಾವುದೇ ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲಿಲ್ಲ. ಸಿಪಿಐ(ಎಂ) ಕೇಂದ್ರ ಸಮಿತಿ 'ರೋಹಿತ್ ಕಾಯ್ದೆ'ಯನ್ನು ತಂದು ಜಾತಿ–ಆಧರಿತ ಪಕ್ಷಪಾತ ನಡೆಸುವವರನ್ನು ಮತ್ತು ಸಾಮಾಜಿಕವಾಗಿ ಹೊರಗಿಡುವವರನ್ನು ಶಿಕ್ಷಿಸುವಂತಾಗಬೇಕು ಎಂದು ಆಗ್ರಹಿಸಿತ್ತು. 'ರೋಹಿತ್ ಕಾಯ್ದೆ'ಯನ್ನು ತಕ್ಷಣವೇ ತರಬೇಕು, ಏಕೆಂದರೆ ವಿಶ್ವವಿದ್ಯಾಲಯಗಳಲ್ಲಿ ಜಾತಿವಾದಿ ಆಚರಣೆಗಳ ಸಮಸ್ಯೆಗಳನ್ನು ಎದುರಿಸುವುದು ತಕ್ಷಣದ ಅಗತ್ಯ ಎಂದು ನಾವು ಪುನರುಚ್ಚರಿಸುತ್ತೇವೆ ಎಂದು ಜಿ.ರಾಮಕೃಷ್ಣನ್ ಹೇಳಿದ್ದಾರೆ.

ಮುತ್ತುಕೃಷ್ಣನ್ ಕುಟುಂಬ ತಮ್ಮ ಮಗನ ಸಾವಿನ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ. ನ್ಯಾಯಾಂಗ ತನಿಖೆಯಲ್ಲದೆ ಕೇಂದ್ರ ಸರಕಾರ ಆತನ ಕುಟುಂಬದವರಿಗೆ ಸೂಕ್ತ ಪರಿಹಾರವನ್ನೂ ಒದಗಿಸಬೇಕು ಎಂದು ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿ ಆಗ್ರಹಿಸಿದೆ.

ತನಿಖೆಗೆ ಆಗ್ರಹಿಸಿ ತಮಿಳುನಾಡಿನಲ್ಲಿ ರಾಸ್ತಾರೋಕೋ

ಮುತ್ತುಕೃಷ್ಣನ್ ಸಾವಿನ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಮಾರ್ಚ್ 13 ರಂದು ಸಿಪಿಐ(ಎಂ), ವಿಸಿಕೆ ಮತ್ತು ಡಿವೈಎಫ್‌ಐ ರಾಸ್ತಾರೋಕೋ ಚಳುವಳಿ ನಡೆಸಿದರು.



"ವೈಯಕ್ತಿಕ ನೆಮ್ಮದಿ ಎನ್ನುವ ಭ್ರಮೆ ಬಿಟ್ಟು ಸಾಮಾಜಿಕ ಹೋರಾಟಕ್ಕೆ ಅಣಿಯಾಗಿ": ಆರ್. ಇಂದಿರಾ

'ಬೆಚ್ಚಿಬಿದ್ದು ಕೇಳಿ ನೀವು,
ಹೆಣ್ಣು ತೊಡೆತಟ್ಟಿ ನಿಂತಾಗಿದೆ...
ತೊಟ್ಟಿಲು ತೂಗುವ ಕೈ ದೂಳೆಬ್ಬಿಸಿ
ಮುನ್ನುಗ್ಗಿಯಾಗಿದೆ...

– ಶಾಕಿರಾ ಬಾನು



ಇದು ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ "ಸಮಾಜವಾದಿ ಕ್ರಾಂತಿ ಮತ್ತು ಮಹಿಳೆ" ಬಗ್ಗೆ ಮಾರ್ಚ್ 12 ರಂದು ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಚಾರಸಂಕಿರಣದಲ್ಲಿ ಕೇಳಿಬಂದ ಕವನದ ಸಾಲುಗಳು. ಈ ಸಂದರ್ಭದಲ್ಲಿ "ಮಹಿಳೆ ಮತ್ತು ಸಮಾಜವಾದಿ ಕ್ರಾಂತಿ"ಯ ಕುರಿತು 8 ಸೋವಿಯೆಟ್ ಪೋಸ್ಟರುಗಳ ಆಧಾರಿತ ಸ್ಥೂಲ ನಿರೂಪಣೆ ಇರುವ 8 ಪೋಸ್ಟ್ ಕಾರ್ಡುಗಳ ಸೆಟ್ ಒಂದನ್ನು ಖ್ಯಾತ ಲೇಖಕಿ ಡಾ.ಆರ್. ಇಂದಿರಾ ರವರು, ಈ ಪೋಸ್ಟ್ ಕಾರ್ಡುಗಳ ದೊಡ್ಡ ಸೈಜಿನ ಪೋಸ್ಟರ್ ಪ್ರದರ್ಶಿಸುವ ಮೂಲಕ ಬಿಡುಗಡೆ ಮಾಡಿದರು.. ವಿಚಾರ ಸಂಕಿರಣದಲ್ಲಿ ದುಡಿಯುವ ಮಹಿಳೆಯರ ಹಲವು ವಿಭಾಗಗಳ (ವಿಮಾ, ಬ್ಯಾಂಕ್, ಕೇಂದ್ರ ರಾಜ್ಯ ಸರಕಾರಿ ನೌಕರರು, ಸ್ಕೀಂ ನೌಕರರು, ಮನೆ ಕೆಲಸಗಾರರು) ಮತ್ತು ಮಧ್ಯಮ ವರ್ಗದ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ವಿಚಾರಸಂಕಿರಣದಲ್ಲಿ ಎರಡು ಗೋಷ್ಠಿಗಳಿದ್ದವು. "ಮಹಿಳಾ ಅಸಮಾನತೆಯ ಮೂಲ ಮತ್ತು ಪರಿಹಾರದ ದಾರಿಗಳು" ಬಗೆಗಿನ ಮೊದಲ ಗೋಷ್ಠಿ ಯನ್ನು ಡಾ. ಇಂದಿರಾ ಉದ್ಘಾಟಿಸಿ ಮಾತನಾಡಿದರು. ಡಾ. ಎನ್. ಗಾಯತ್ರಿ, ಡಾ. ಎಂ.ಎಸ್. ಆಶಾದೇವಿ, ಹೆಚ್.ಆರ್. ಸುಜಾತ ಗೋಷ್ಠಿಯಲ್ಲಿ ತಮ್ಮ ವಿಚಾರ ಮಂಡಿಸಿದರು. ಡಾ, ಕೆ.ಶರೀಫಾ ಅಧ್ಯಕ್ಷತೆ ವಹಿಸಿದ್ದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ ಪ್ರಸ್ತಾವನೆಯ ಮಾತುಗಳನ್ನಾಡಿದರು.

"ಪ್ರಜಾಪ್ರಭುತ್ವ – ಲಿಂಗ ರಾಜಕಾರಣ" ಎಂಬ ವಿಷಯದ ಬಗ್ಗೆ ಎರಡನೇ ಗೋಷ್ಠಿಯಲ್ಲಿ ಮುಕ್ತ ಸಂವಾದವಿತ್ತು. ಸಂವಾದದಲ್ಲಿ ಕಾಂಗ್ರೆಸಿನ ಮಂಜುಳಾ ನಾಯ್ಡು, ಸಿಪಿಐ(ಎಂ)ನ ಎಸ್. ವರಲಕ್ಷ್ಮಿ, ಸಿಪಿಐ ನ ರಾಧ ಸುಂದರೇಶ್, ಎಸ್.ಯು.ಸಿ.ಐ.(ಸಿ)ನ ಎಂ.ಎನ್. ಮಂಜುಳಾ ಮತ್ತು ಎಎಪಿಯ ಶಾಂತಲಾ ದಾಮ್ಲೆ ಭಾಗವಹಿಸಿದ್ದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ವಿ. ಗೀತಾ ಅಧ್ಯಕ್ಷತೆ ವಹಿಸಿದ್ದರು.


ಸಮಾಜವಾದಿ ಕ್ರಾಂತಿಯಲ್ಲಿ ಮಹಿಳೆಯ ಪಾತ್ರ, ಮಹಿಳಾ ವಿಮೋಚನೆಯ ಹಲವು ಹಾದಿಗಳನ್ನೂ ಮೈಲಿಲ್ಲುಗಳನ್ನು ಹಾಕಿ ಕೊಟ್ಟ ಸಮಾಜವಾದಿ ಸೋವಿಯೆಟ್ ಒಕ್ಕೂಟದ ಹಾಗೂ ಕ್ಲಾರಾ ಜೆಟ್ಕಿನ್, ಅಲೆಕ್ಸಾಂಡ್ರಾ ಕೊಲಂತಾಯ್, ರೋಸಾ ಲಕ್ಸಂಬರ್ಗ್ ಅವರ ನೆನಕೆ, ಕಳೆದ ನೂರು ವರ್ಷಗಳ ಮಹಿಳಾ ಚಳುವಳೀ ನಡೆದ ಹಾದಿ, ಇಂದಿನ ಮಹಿಳೆಯರ ಸ್ಥಿತಿ, ಮುಂದಿನ ಮಹಿಳಾ ಹೋರಾಟದ ರೂಪುರೇಷೆಗಳು– ಎಲ್ಲವೂ ಎರಡೂ ಗೋಷ್ಠಿಗಳಲ್ಲಿ ಪ್ರಸ್ತಾಪಿತವಾದವು. ಗೋಷ್ಠಿಗಳ ಮಧ್ಯೆ ಹಲವಾರು ಮಹಿಳಾ ಕವಿಗಳ ಅರ್ಥಪೂರ್ಣಕವನ ವಾಚನ, ಮಾತುಗಳ ಏಕತಾನತೆಯನ್ನು ಒಡೆಯಿತು.

ವಿಚಾರ ಸಂಕಿರಣದಲ್ಲಿ ಕೇಳಿ ಬಂದ ಕೆಲವು ಗಮನಾರ್ಹ ಮಾತುಗಳು ಬಾಕ್ಸಿನಲ್ಲಿವೆ.

ಪೋಸ್ಟ್ ಕಾರ್ಡುಗಳಲ್ಲಿ ಏನಿದೆ?

ಎಂಟು ಪೋಸ್ಟ್ ಕಾರ್ಡುಗಳಲ್ಲಿ ಒಂದು ಕಡೆ ಒಂದು ವಿಷಯದ ಮೇಲೆ ಸೋವಿಯೆಟ್ ಆಳ್ವಿಕೆಯ ಕಾಲದ ಆಯ್ದ ಮಹಿಳೆಗೆ ಸಂಬಂಧಿಸಿದ ಪೋಸ್ಟರುಗಳಿವೆ. ಪೋಸ್ಟ್ ಕಾರ್ಡಿನ ಇನ್ನೊಂದು ಮಗ್ಗುಲಲ್ಲಿ ಸಮಾಜವಾದಿ ಕ್ರಾಂತಿಯಲ್ಲಿ ಮಹಿಳೆಯರ ಪಾಲು, ಸೋವಿಯೆಟ್ ಒಕ್ಕೂಟದಲ್ಲಿ ಮಹಿಳಾ ವಿಮೋಚನೆಯ ವಿವಿಧ ಕ್ರಮಗಳ ಸಾಧನೆಗಳು ಹಾಗೂ ಮಹಿಳೆಗೆ ಇಂದು ಸಮಾಜವಾದಿ ಕ್ರಾಂತಿಯ ಪ್ರಸ್ತುತತೆಯನ್ನು ನಿರೂಪಿಸುವ ಕಥನದ ಒಂದು ಭಾಗವಿದೆ. 'ರಶ್ಯನ್ ಕ್ರಾಂತಿ ಆರಂಭಿಸಿದ ಮಹಿಳೆಯರು', 'ಮಹಿಳಾ ಸಾಕ್ಷರತೆ ಮತ್ತು ಶಿಕ್ಷಣ', 'ಅಡುಗೆ ದಾಸ್ಯದಿಂದ ವಿಮೋಚನೆ', 'ಎಲ್ಲಾ ಉತ್ಪಾದನಾ ಕ್ಷೇತ್ರಗಳಲಲ್ಇ ಮಹಿಳೆಯರು', 'ಆಡಳಿತದಲ್ಲಿ ಮಹಿಳೆ', ಫ್ಯಾಸಿಸಂ ವಿರುದ್ಧ ಮಹಿಳೆ', 'ಶಾಂತಿಯತ್ತ ಲಗ್ಗೆ' ಮತ್ತು 'ಮಹಿಳೆ ಮತ್ತು ಸೋವಿಯೆಟ್ ಒಕ್ಕೂಟ' ? ಎಂಟು ಕಾರ್ಡುಗಳಲ್ಲಿ ಅಡಕವಾದ ವಿಷಯಗಳು.

ಈ ಕಾರ್ಡಿನ ಒಂದು ಉದಾಹರಣೆ. –
'ಶಾಂತಿಯತ್ತ ಲಗ್ಗೆ' ಇಲ್ಲಿದೆ.



"ವೈಯಕ್ತಿಕ ಮಹಿಳಾ ವಿಮೋಚನೆಯೆಂಬುದು ಹಾಸ್ಯಾಸ್ಪದ"

"ಕ್ರಾಂತಿ ಎಂದರೆ ನನಗಿಷ್ಟ. ಜನರನ್ನು ಒಗ್ಗೂಡಿಸುವ ಶಕ್ತಿ ಕ್ರಾಂತಿಗಿದೆ. ಕ್ರಾಂತಿಯಿಂದ ಸಾಮಾಜಿಕ ನೆಮ್ಮದಿ ಸಾಧ್ಯ. ಬದಲಾಣೆ ಬರಬೇಕಾದರೆ ಕ್ರಾಂತಿಯಾಗಲೇಬೇಕು "

ಪುರುಷರೇ! ನೀವು ನಮ್ಮ ಜತೆ ಯಾವುದೇ ತರಹದ ದುರ್ವರ್ತನೆಗಳನ್ನು ಮಾಡುವಂತಿಲ್ಲ. ಮಾಡಿದರೆ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ ಎಂಬ ಬಲವಾದ ಸಂದೇಶವನ್ನು ರವಾನಿಸುವ ಜವಾಬ್ದಾರಿ ಮಹಿಳಾ ಚಳವಳಿಗಳಿವೆ'

'ನಮ್ಮೆದುರಿಗೆ ಹೋರಾಟದ ಆಯ್ಕೆ, ಹೊಂದಾಣಿಕೆ ಆಯ್ಕೆ ಎರಡೂ ಇವೆ. ವೈಯಕ್ತಿಕ ನೆಮ್ಮದಿ ಎನ್ನುವ ಭ್ರಮೆಯನ್ನು ಬಿಟ್ಟು ಸಾಮಾಜಿಕ ಹೋರಾಟಕ್ಕೆ ಅಣಿಯಾಗಬೇಕು'

– ಡಾ.ಆರ್. ಇಂದಿರಾ

"ಮಹಿಳೆ ಗೃಹ ಬಂದನದಿಂದ ಬಿಡುಗಡೆ– ಯಾಗಿ ಮಾನವೀಯ ಹಕ್ಕುಗಳು ಸಿಗಬೇಕು. ಮಹಿಳೆ ಅಂಗಾಂಗಗಳನ್ನು ಮಾರಾಟದ ಸರಕನ್ನಾಗಿಸುತ್ತಿದ್ದಾರೆ. ಇದಕ್ಕೆ ಗಟ್ಟಿ ಹೋರಾಟ ಅಗತ್ಯವಿದೆ. ಅದಕ್ಕಾಗಿ ತತ್ವ ಮತ್ತು ಸಿದ್ಧಾಂತ ಒಂದಾಗಬೇಕು"

–ಡಾ. ಕೆ. ಷರೀಫಾ, ಲೇಖಕಿ

ವೈಯಕ್ತಿಕ ಮಹಿಳಾ ವಿಮೋಚನೆಯೆಂಬುದು ಹಾಸ್ಯಾಸ್ಪದ. ಜಾತಿ–ವಗ–ಧರ್ಮ–ಲಿಂಗಗಳ ಆಧಾರದ ಮೇಲೆ ನಡೆಯುತ್ತಿರುವ ತಾರತಮ್ಯಗಳು ಪರಸ್ಪರ ಹೆಣೆದುಕೊಂಡಿವೆ.

ದೀಪಿಕಾ ಅವರ ಮೈ ಛಾಯ್ಸ್ ಎಂಬ ವಿಡಿಯೋ, ಮುತ್ತು ಕಟ್ಟಿದ ಕೊಪ್ಪಳದ ದೇವದಾಸಿ ಹುಡುಗಿ 'ನನ್ನ ದೇಹದ ಮೇಲೆ ದಾಳಿ ಇನ್ನು ಸಹಿಸಲಾರೆ' ಎಂದಾಗ 'ನನ್ನ ದೇಹ ನನ್ನ ಹಕ್ಕು' ಘೋಷಣೆ ಅರ್ಥವಾಗುತ್ತದೆ..

– ಡಾ.ಎನ್. ಗಾಯತ್ರಿ

ಸ್ತ್ರೀವಾದದ ಸತ್ವದಲ್ಲಿ ಮಾನವತಾವಾದವಿದೆ. ಆದರೆ ನಮ್ಮ ಗ್ರಹಿಕೆಗಳು ಬದಲಾಗದ ಹೊರತು ಕಾನೂನುಗಳು ಏನೂ ಮಾಡುವುದಿಲ್ಲ. ಕಾನೂನು ಎಂಬುದು ಮೂಲಭೂತವಾದ ಬದಲಾವಣೆಯನ್ನು ತರುವುದಿಲ್ಲ. ಅದು ಬರಿಯ ಒಂದು ಅಸ್ತ್ರವಷ್ಟೇ.

– ಡಾ.ಎಂ.ಎಸ್. ಆಶಾದೇವಿ

ಸಮಾಜವಾದಿ ಕ್ರಾಂತಿಯಾದ ತಕ್ಷಣ ವೇ ಸೋವಿಯತ್ ರಷ್ಯಾದಲ್ಲಿ ಮಹಿಳಾ ಸಮಾನತೆಯ ಕಲ್ಪನೆ ಸಾಕಾರಗೊಂಡಿದ್ದು ಲೆನಿನ್ ನೇತೃತ್ವ ದಲ್ಲಿ. ಸಮಾಜವಾದಿ ವ್ಯವಸ್ಥೆ ಎಲ್ಲರಿಗೂ ಸಮಾನ ಅವಶ್ಯಕತೆಯನ್ನು ಪೂರೈಸುತ್ತದೆ. ಬಂಡವಾಳಶಾಹಿಯ ಮೇಲುಗೈ ಇರುವಲ್ಲಿ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ.

– ಎಂ.ಎನ್ ಮಂಜುಳಾ

ಅನ್ಯಾಯದ ವಿರುದ್ಧ ಒಗ್ಗಟ್ಟಿನ ಹೋರಾಟದ ಮೂಲಕ ಸಮಾನತೆ ಸಾಧಿಸೋಣ.

– ರಾಧಾ ಸುಂದರೇಶ್

ಮಹಿಳಾ ಪ್ರಾತಿನಿಧ್ಯ ನಮ್ಮ ಗುರಿಯಾಗಿರಬೇಕು. ಮೀಸಲಾತಿ ಪ್ರಾತಿನಿಧ್ಯ ಸಾಧಿಸಲು ಒಂದು ತಂತ್ರವೆಂದು ತಿಳಿಯಬೇಕು.

– ಶಾಂತಾ ದಾಮ್ಲೆ

STATEMENT OF THE OWNERSHIP ETC
The Weekly Newspaper "JANASHAKTHI KANNADA VARA PATRIKE"
Form IV
(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name (Whether Citizen of India? If Foreigner, State the Country of Origin)	:	G.V.Sriramareddy Indian
4.	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
5.	Editor`s Name (Whether Citizen of India? If Foreigner, State the Country of Origin)	:	G.V.Sriramareddy Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.V. Srirama reddy, here by declare that the particulars given above are true to the best of my knowledge and belief.

Date : March 17, 2017
Bangalore

Sd/-
G.V. Sriramareddy
Publisher

ತಿಂಗಳಿಗೆ 3 ಸಾವಿರ ರೂ. ಬರ ಪರಿಹಾರ ನೀಡಲು



ಮಹಿಳಾ ಕೃಷಿ ಕೂಲಿಕಾರರ ರಾಜ್ಯ ಸಮಾವೇಶದ ಆಗ್ರಹ

ಚಂದ್ರಪ್ಪ ಹೊಸ್ಕೇರಾ

ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೀಕರ ಬರ ವ್ಯಾಪಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ಬಡ ಕುಟುಂಬಗಳಿಗೆ ಉಚಿತ ರೇಷನ್, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ 250 ದಿನಗಳ ಕೆಲಸ ಹಾಗೂ ಪ್ರತಿಯೊಂದು ಬಡ ಕುಟುಂಬಕ್ಕೆ ಪ್ರತಿತಿಂಗಳು 3 ಸಾವಿರ ರೂ. ವಿಶೇಷ ನೆರವು ನೀಡಬೇಕೆಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನು ಆಗ್ರಹಿಸುವ ನಿರ್ಣಯವೊಂದನ್ನು ಅಂಗೀಕರಿಸುವುದರೊಂದಿಗೆ ಮಾರ್ಚ್ 8 ಮತ್ತು 9 ರಂದು ಮಂಡ್ಯ ನಗರದಲ್ಲಿ ನಡೆದ 2 ದಿನಗಳ ಮಹಿಳಾ ಕೃಷಿ ಕೂಲಿಕಾರರ 3 ನೇ ರಾಜ್ಯ ಸಮಾವೇಶ ಮುಕ್ತಾಯವಾಯಿತು.

ಉದ್ಘಾಟನೆ:–

ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಗಳು ಮಾಜಿ ರಾಜ್ಯ ಸಭಾ ಸದಸ್ಯರೂ ಆಗಿರುವ ಕಾಮ್ರೆಡ್ ಎ. ವಿಜಯ ರಾಘವನ್ ಅವರು ಮಾತನಾಡಿ ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದಲ್ಲಿ ಎಲ್ಲ ರಾಜ್ಯಗಳು ಹಿಂದೆಂದೂ ಕಂಡರಿಯದ ಕ್ಷಾಮಕ್ಕೆ ತುತ್ತಾಗಿವೆ. ಬಾರೀ ಪ್ರಮಾಣದ ಬೆಳೆ ಹಾನಿಯಿಂದ ಆಹಾರದ ಕೊರತೆ ಉಂಟಾಗಿವೆ. ಕುಡಿಯಲು ನೀರು ಸಹ ಸಿಗದಂತಾಗಿದೆ. ಗ್ರಾಮೀಣ ಕೆಲಸಗಾರರು ಉದ್ಯೋಗವಿಲ್ಲದೆ ಪರದಾಡುವಂತಾಗಿದೆ. ಇಂತಹ ಗಂಭೀರ ಸಮಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರ ನೆರವಿಗೆ ಧಾವಿಸುವ ಬದಲಾಗಿ ಬಡವರ ಮುಗ್ಧತೆಯ ಲಾಭಪಡೆದು ರಾಜಕೀಯ ಅಧಿಕಾರವನ್ನು ಗಟ್ಟಿಗೊಳಿಸುವುದರಲ್ಲಿ ಮುಳುಗಿವೆ. ರೇಷನ್ ಕಾರ್ಡ್ ಕೇಳುವ ಕೂಲಿಕಾರರಿಗೆ ಮೋದಿ ಕ್ರೆಡಿಟ್ ಕಾರ್ಡ್ ಕೊಡುತ್ತಾರೆ. ಬಾಯಿ ಬಿಟ್ಟಾಗಲೆಲ್ಲ ಅಭಿವೃದ್ಧಿ ಎಂದು ಬೊಬ್ಬಿಡುವ ಅವರಿಗೆ ಬಡವರ ಅಭಿವೃದ್ಧಿ ಕುರಿತು ಕಿಂಚಿತ್ತೂ ಕಾಳಜಿ ಇಲ್ಲ. ಕಾರ್ಪೋರೇಟ್ ಕಂಪೆನಿಗಳಿಗೆ ತೆ–ರಿಗೆ ರಿಯಾಯ್ತಿ ನೀಡುತ್ತಾರೆ. ಅವರ ಬಾರೀ ಮೊತ್ತದ ಸಾಲವನ್ನು 'ಹಿಂತಿರುಗದ ಸಾಲ' ಎಂದು ಮನ್ನಾ ಮಾಡುತ್ತಾರೆ. ಆದರೆ ಬಡವರ ಒಪ್ಪತ್ತಿನ ಗಂಜಿಗೆ ಬೇಕಾಗುವ ಪಡಿತರಕ್ಕೆ ಬೇಕಾಗುವ 1.5 ಲಕ್ಷ ಕೋಟಿ ರೂ. ಗಳನ್ನು ಒದಗಿಸಲು ಹಿಂದೇಟು ಹಾಕುತ್ತಾರೆ. ಕೇರಳದ ಕಮ್ಯೂನಿಸ್ಟ್ ಸರ್ಕಾರ 60 ವರ್ಷ ತುಂಬಿದ ಕೃಷಿ ಕೂಲಿಕಾರರಿಗೆ ಬೇಷರತ್ತಾಗಿ ತಿಂಗಳಿಗೆ 1100 ರೂ. ನಿವೃತ್ತಿ ವೇತನ ನೀಡುತ್ತದೆ. ಅದು ಮುಂದಿನ 5 ವರ್ಷಗಳಲ್ಲಿ 1500 ರೂ. ಆಗಲಿದೆ. ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹೀಗೇಕೆ ಮಾಡಬಾರದು? ಎಂದು ಕಾಮ್ರೆಡ್ ವಿಜಯರಾಘವನ್ ಪ್ರಶ್ನಿಸಿದರು.

ಬರದಿಂದ ಹೆಚ್ಚು ಸಂಕಷ್ಟಕ್ಕೆ ಒಳಗಾಗಿರುವವರು ಮಹಿಳಾ ಕೂಲಿಕಾರರು ಎಂದು ವಿವರಿಸಿದ ಅವರು ಕೂಲಿಕಾರ ಮಹಿಳೆಯರು ಮಹಿಳೆಯರಾಗಿ ಅನುಭವಿಸುತ್ತಿರುವ ತಾರತಮ್ಯ, ಕೌಟುಂಬಿಕ ಹಿಂಸೆ, ಕೆಲಸದ ಸ್ಥಳದಲ್ಲಿ ಕಿರುಕುಳ, ವರದಕ್ಷಿಣೆಯ ಪಿಡುಗು, ದೌರ್ಜನ್ಯ, ಅತ್ಯಾಚಾರದಂತಹ ಸಮಸ್ಯೆಗಳಿಗೂ ಕೃಷಿಕೂಲಿಕಾರರ ಸಂಘ ಗಮನ ನೀಡಿ ಮಧ್ಯಪ್ರವೇಶಮಾಡಬೇಕೆಂದು ಸಂಘದ ನಾಯಕತ್ವಕ್ಕೆ ಕಿವಿಮಾತು ಹೇಳಿದರು.

ಆರಂಭದಲ್ಲಿ ಡಾ. ವಿ.ಡಿ. ಸುವರ್ಣ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಕೃಷಿ ಕೂಲಿಕಾರ ಮಹಿಳೆಯರಿಗೆ ಅತಿಥಿಗಳು ತೆಂಗಿನ ಸಸಿಗಳನ್ನು ವಿತರಣೆ ಮಾಡುವ ಮೂಲಕ ಸಮಾವೇಶಕ್ಕೆ ಸಾಂಕೇತಿಕ ಚಾಲನೆ ನೀಡಿದರು. ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ,





ಮಂಡ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಜೆ. ಪ್ರೇಮಕುಮಾರಿ, ಜೆಡಿಎಸ್‌ನ ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಸಾಂದರ್ಭಿಕವಾಗಿ ಮಾತನಾಡಿದರು. ಸಂಘದ ಪದಾಧಿಕಾರಿಗಳಾದ ಚಂದ್ರಪ್ಪ ಹೊಸ್ಕೇರಾ, ಪುಟ್ಟಮಾದು, ಕೆ. ಬಸವರಾಜ ಮೊದಲಾದವರು ಉಪಸ್ಥಿತರಿದ್ದರು. ಮಹಿಳಾ ಕೃಷಿ ಕೂಲಿಕಾರರ ಉಪಸಮಿತಿಯ ಸಂಚಾಲಕರಾದ ಮಲ್ಲಮ್ಮ ಕೋಡ್ಲಿ ಅಧ್ಯಕ್ಷತೆ ವಹಿಸಿದ್ದರು.

ಇದಕ್ಕೂ ಮೊದಲು ನಗರಲ್ಲಿ ಮಹಿಳಾ ಕೃಷಿ ಕೂಲಿಕಾರರ ಬೃಹತ್ ಮೆರವಣಿಗೆ ನಡೆಯಿತು. 2000 ಕ್ಕೂ ಹೆಚ್ಚು ಮಹಿಳಾ ಕೂಲಿಕಾರರು ಭಾಗವಹಿಸಿದ್ದರು.

ಉದ್ಯೋಗ ಖಾತ್ರಿ ಕಾರ್ಯಾಗಾರ:

ಊಟದ ವಿರಾಮದ ನಂತರ ಅದೇ ವೇದಿಕೆಯಲ್ಲಿ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಅನುಷ್ಠಾನ ಮತ್ತು ಬಲಪಡಿಸುವ ಕುರಿತು" ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಎ. ವಿಜಯರಾಘವನ್ ಅವರು ಬರಗಾಲದಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಗ್ರಾಮೀಣ ಬಡವರಿಗೆ ತುಂಬಾ ನೆರವಾಗಲಿದೆ ಎಂದು ಹೇಳಿದರಲ್ಲದೆ ನಮ್ಮ ನಿರಂತರ ಹೋರಾಟದ ಮೂಲಕ ಯೋಜನೆಯನ್ನು ಉಳಿಸಲು ಮತ್ತು ಬಲಪಡಿಸಲು ಸಾಧ್ಯವಾಗಬೇಕಾಗಿದೆ ಎಂದರು. ಮಹಿಳೆಯರಿಗೇ ಈ ಯೋಜನೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಹೇಳಿದ ಅವರು ಇಂತಹ ಯೋಜನೆ ಇಲ್ಲದೆ ಹೋದರೆ ಮಹಿಳೆಯರೂ ಸಹ ಪುರುಷರೊಂದಿಗೆ ವಲಸೆ ಹೋಗುವುದು ಅನಿವಾರ್ಯವಾಗಲಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಇಲಾಖಾ ಅಧಿಕಾರಿ ಯೋಜನೆಯನ್ನು ಜಾರಿಗೊಳಿಸುವಲ್ಲಿ ಕೂಲಿಕಾರರ ಸಂಘವು ತೋರುತ್ತಿರುವ ಆಸಕ್ತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಸಭಿಕರ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರ ನೀಡಿದರು. ಇದೇ ಸಂದರ್ಭದಲ್ಲಿ ಪ್ರೊ. ಕೆಂಪಮ್ಮ ರವರು ಅಂತರರಾಷ್ಟ್ರೀಯ ಮಹಿಳಾ ದಿನದ ಮಹತ್ವವನ್ನು ಕುರಿತು ಮಾತನಾಡಿದರು.

ಪ್ರತಿನಿಧಿಗಳ ಅಧಿವೇಶನ:

ಸಂಜೆ 6 ಗಂಟೆಗೆ ಸಮಾವೇಶದ ಪ್ರತಿನಿಧಿಗಳ ಅಧಿವೇಶನ ಆರಂಭವಾಯಿತು. 5 ಜನ ಸದಸ್ಯರುಳ್ಳ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಿದ ಬಳಿಕ ಅಗಲಿದ ಹೋರಾಟಗಾರರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅನಂತರ ಉಪಸಮಿತಿಯ ಸಂಚಾಲಕಿ ಮಲ್ಲಮ ಕೋಡ್ಲಿ ಪ್ರತಿನಿಧಿಗಳ ಚರ್ಚೆಗಾಗಿ ಕರಡು ವರದಿಯನ್ನು ಮಂಡಿಸಿದರು. ಚರ್ಚೆಯನ್ನು ಮರುದಿನಕ್ಕೆ ಮುಂದೂಡಲಾಯಿತು.


ಮಾರ್ಚ್ 9 ರಂದು ಬೆಳಿಗ್ಗೆ 10–30 ಕ್ಕೆ ವರದಿಯ ಮೇಲೆ ಚರ್ಚೆ ಆರಂಭವಾಯಿತು. 11 ಜಿಲ್ಲೆಗಳಿಂದ 200 ಮಂದಿ ಮಹಿಳಾ ಕೃಲಿಕಾರ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದು ಅವರ ಪೈಕಿ 15 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಚರ್ಚೆಗೆ ಸಂಚಾಲಕಿ ಉತ್ತರ ನೀಡಿದ ನಂತರ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಈ ನಡುವೆ ರೈತ ಸಂಘದಿಂದ ಯಶವಂತ, ಮಹಿಳಾ ಸಂಘದಿಂದ ದೇವಿ, ದಲಿತ ಹಕ್ಕುಗಳ ಸಮಿತಿಯಿಂದ ರಾಜೇಂದ್ರ, ಅಂಗವಿಕಲರ ಸಂಘದಿಂದ ದೊಡ್ಡಮರೀಗೌಡ ಮತ್ತು ಸಿಐಟಿಯುವಿನಿಂದ ಚಂದ್ರು ಸಮಾವೇಶಕ್ಕೆ ಶುಭಕೋರಿ ಮಾತನಾಡಿದರು.

ನೂತನ ಸಮಿತಿ ಆಯ್ಕೆ :

ಸಮಾವೇಶದ ಒಂದು ಮುಖ್ಯ ಕಲಾಪ ನೂತನ ಉಪಸಮಿತಿ ಆಯ್ಕೆ. 32 ಮಂದಿ ಸದಸ್ಯರುಳ್ಳ ನೂತನ ಉಪಸಮಿತಿಯನ್ನು ಸಮಾವೇಶ ಸರ್ವಾನುಮತದಿಂದ ಆಯ್ಕೆಮಾಡಿತು. ಆಯ್ಕೆಯಾದ ಸದಸ್ಯರು ಪ್ರತ್ಯೇಕವಾಗಿ ಸಭೆ ಸೇರಿ ಮಲ್ಲಮ್ಮ ಕೋಡ್ಲಿ ಅವರನ್ನು ರಾಜ್ಯ ಸಂಚಾಲಕಿಯಾಗಿ ಪುನರಾಯ್ಕೆ ಮಾಡಿದರಲ್ಲದೆ ಸರೋಜಮ್ಮ (ಮಳವಳ್ಳಿ), ನಾಗರತ್ನ ನಾಡ (ಕುಂದಾಪುರ), ಜಗದೇವಿ (ಚಿಂಚೋಳಿ) ಮತ್ತು ಬಾಗಮ್ಮ (ಗಂಗಾವತಿ) ಅವರನ್ನು ಸಹಸಂಚಾಲಕರಾಗಿ ಆಯ್ಕೆ ಮಾಡಿದರು.

ಕೊನೆಯಲ್ಲಿ ಮುಕ್ತಾಯ ಸಮಾರಂಭ. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಐಟಿಯು ಮುಖಂಡರಾದ ಸಂಗಾತಿ ರಾಮಕೃಷ್ಣ ಅವರು ಮಾತನಾಡಿ ಕೃಷಿ ಕೂಲಿಕಾರ ಮಹಿಳೆಯರ ಹೋರಾಟಕ್ಕೆ ಕಾರ್ಮಿಕ ವರ್ಗ ಸದಾ ಬೆಂಬಲ ನೀಡುತ್ತದೆ ಎಂದು ಹೇಳಿದರು. ಹಾಡುಗಳೊಂದಿಗೆ ಹಾಗೂ ಘೋಷಣೆಗಳೊಂದಿಗೆ ಸಮಾವೇಶ ಯಶಸ್ವಿಯಾಗಿ ಮುಕ್ತಾಯವಾಯಿತು.



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**